
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಅಕ್ಟೋಬರ್ 23, 2013 ಪುಟ 20 ರೂ. 14/-



ಸಂದರ್ಶನ
ನಟ-ನಿರ್ದೇಶಕ
ಜಯದೇವ್



'ಲಿಂಗಾಯತರು ಹಿಂದೂಗಳಲ್ಲ, ಪಂಚಾಚಾರ್ಯರು ಲಿಂಗಾಯತರಲ್ಲ

ಮುರುಘಾ ಶರಣರ ವಿಶೇಷ ಲೇಖನ



ಬೀದರ್ ನಂಗಾನಾಚ್
ನರಭಕ್ಷಕ
ರಾಜಕಾರಣಿಗಳು

ಎನ್‌ಕೌಂಟರ್
ಭೀತಿ
ಜೆಸಿಬಿ ನಾರಾಯಣ್
ನಾಪತ್ತೆ





ಈಗ
ಕಾಂಗಿ



ಯಾರು ಈ ಶ್ರುತಿ ನಾಯ್ಡು?



ಸಂಪಾದಕ

• ಪಾರ್ವತೀಶ
bparvateesha@gmail.com

ಬಿಡಿ ಚಿತ್ರಗಳು


ವಿಷ್ಣು ಸಂಘದ ಗೆಳೆಯರೊಂದಿಗೆ ಒಂದು ರಸಸಂಜೆ

ನಾನು ಬೇಕಂತಲೇ ಎರಡು ವಾರ ಕಾಲ ಕಾಯ್ದು ಈ ವಿಚಾರ ಪ್ರಸ್ತಾಪಿಸುತ್ತಿದ್ದೇನೆ.

ನಟ ವಿಷ್ಣುವರ್ಧನ್ ಅಭಿಮಾನಿಗಳ ವಿಚಾರವಿದು, ಹಾಗೆಯೇ ನಟಿ ಭಾರತಿ ಮತ್ತವರ ಅಳಿಯ ಅನಿರುದ್ಧನಿಗೂ ಸಂಬಂಧಿಸಿರುವ ವಿಚಾರ ಆಗಿರಲಿಕ್ಕೂ ಸಾಕು.

ನಾಲ್ಕು ವಾರಗಳ ಹಿಂದೆ 'ಲಂಕೇಶ್'ನ ಸಂಚಿಕೆಯಲ್ಲಿ 'ವಿಷ್ಣು ಸಮಾಧಿ ಬೇಗುದಿ' ಎಂಬ ವರದಿ ನಮ್ಮಲ್ಲಿ ಪ್ರಕಟವಾಯಿತು. ಸಹೋದ್ಯೋಗಿ ರಾ. ಸೋಮನಾಥ್ ವಿಷ್ಣು ಸ್ಮಾರಕ ಇನ್ನೂ ಆಗದಿರಲು ಇರುವ ಕಾರಣ ಹಾಗೂ ಸಂದರ್ಭಗಳನ್ನೆಲ್ಲಾ ವಿವರಿಸಿ ಆ ವರದಿ ಬರೆದಿದ್ದರು. ಸಹಜವಾಗಿಯೇ ಆ ವರದಿಯಲ್ಲಿ ನಟ ಬಾಲಕೃಷ್ಣರ ಕುಟುಂಬದ ವಿಚಾರ, ವಿಷ್ಣು ಸಮಾಧಿ ಇರುವ ಜಮೀನಿನ ಸಮಸ್ಯೆಯ ಸಂಕೀರ್ಣತೆಗಳ ಪ್ರಸ್ತಾಪವೂ ಇತ್ತು.


ಇದಾಗಿ ಹದಿನೈದು ದಿನದ ನಂತರ ಒಂದು ಸಂಜೆ ನಾವ್ಯಾರು ಕಚೇರಿಯಲ್ಲಿ ಇರದಿದ್ದಾಗ ಎಂಟು ಜನರಿದ್ದ ಒಂದು ಗುಂಪು 'ಲಂಕೇಶ್' ಕಚೇರಿಗೆ ನುಗ್ಗಿ ಬಂದು 'ಅವಳೆಲ್ಲಿ, ಇವನೆಲ್ಲಿ' ಅಂತಾ ಜೋರು ಮಾಡಿ ಕೂಗಾಡಿದ್ದಾರೆ. ಆಫೀಸಿಗೆ ಕಲ್ಲು ಹೊಡೀತೀವಿ ಅಂತಲೂ ಬೆದರಿಸಿದರಂತೆ. ಅವತ್ತು ಮುಖ್ಯಮಂತ್ರಿಗಳ ಕಚೇರಿಯಲ್ಲಿ ಇದ್ದ ಒಂದು ಸಭೆಗೆ ಹೋಗಿದ್ದ ನಾವು ವಾಪಸ್ ಬಂದಾಗ ಆಫೀಸಿನಲ್ಲಿದ್ದವರು ಈ ಸಂಗತಿ ಹೇಳಿದರು. ಇದೇನಿರಬಹುದೆಂದು ಯೋಚಿಸುತ್ತಿರುವಾಗಲೇ ಅದೇ ಗುಂಪು ಮತ್ತೆ ಆಫೀಸಿನೊಳಕ್ಕೆ ಬಂತು.



ಕನ್ನಡ ವಿರೋಧಿ ಬಾಳ ಠಾಕ್

'ನಾವು ವಿಷ್ಣುವರ್ಧನ್ ಅಭಿಮಾನಿಗಳ ಸಂಘದವರು' ಅಂದರವರು. ಅವರು ಹೇಳದೆಕೇಳದೆ ಏಕಾಏಕಿ ಆಫೀಸಿಗೆ ನುಗ್ಗಿ ಬಂದಿದ್ದರೂ ನಾವ್ಯಾರೂ ಬೇಸರಿಸಿಕೊಳ್ಳದೆ ಕರೆದು ಕೂರಿಸಿ 'ಏನು ವಿಷಯ ಹೇಳಿ' ಅಂದೆವು. 'ವಿಷ್ಣು ಬಗ್ಗೆ ಕೆಟ್ಟ ಮಾತು ಬರೆದಿದ್ದೀರಿ. ಆ ನಿಮ್ಮ ವರದಿಗಾರನ ಫೋನ್ ನಂಬರ್ ಕೊಡಿ. ಮತ್ತೆ ನೀವು ವಿಷಾದ (ಬಹುಶಃ ಕ್ಷಮೆ) ವ್ಯಕ್ತಪಡಿಸಿದರೆ ನಾವು ಹೋಗಿಬಿಡುತ್ತೇನೆ' ಅಂದರು.


ನಾನು ಆ ಯುವಕರತ್ತ ನಿಟ್ಟಿಸಿ ನೋಡುತ್ತಿದ್ದೆ. ನಮ್ಮ ನೆರೆಮನೆಯ ಯುವಕರಿರುವಂತೆ ಬದುಕಿನ ಮುಗ್ಧತೆ, ನಂಬಿರುವ ವಿಚಾರಗಳ ಬಗೆಗಿನ ಬದ್ಧತೆ ಅವರಲ್ಲಿ ಎದ್ದು ಕಾಣುತ್ತಿತ್ತು, ಜೊತೆಗೆ ಪುಟಿಯುವ ಉತ್ಸಾಹ, ಆವೇಶ, ತರ್ಕದ ಬದಲು ಸಿಟ್ಟು ಎಲ್ಲವೂ ಇತ್ತು. ಆದರೆ ಮಾತು



ಪತ್ರಿಕೆ ಕಚೇರಿಯಲ್ಲಿ ವಿಷ್ಣು ಅಭಿಮಾನಿಗಳು

ಮಾತು ಗುಂಪಿನೊಳಗಿಂದ ಕೇಳಿಬಂತು. ಜೊತೆಗೆ "ನೀವು ವಿಷಾದ ಆಗಿದೆ ಅಂತ ಒಂದ್ ಮಾತು ಹೇಳ್‌ಲಿಲ್ಲ" ಅನ್ನುವ ಆಕ್ಷೇಪಣೆಯೂ ಕೇಳಿಸಿತು.

ನನಗೆ ತಕ್ಷಣ ಹಿಂದಿನ ದಿನದ ಒಂದು ಘಟನೆ ನೆನಪಾಯಿತು. ಬರಹಗಾರ ಎಲ್.ಎನ್. ಮುಕುಂದರಾಜ್ ಆರು ತಿಂಗಳ ಹಿಂದೆ ಸಭೆಯೊಂದರಲ್ಲಿ ಮಾತನಾಡುವಾಗ 'ಮಾತಾಡ್ ಮಾತಾಡ್ ಮಲ್ಲಿಗೆ' ಸಿನಿಮಾದಲ್ಲಿ ವಿಷ್ಣು ಅಷ್ಟು ಚೆನ್ನಾಗಿ ನಟಿಸಿರಲಿಲ್ಲ ಅಂತ ಹೇಳಿದ್ದು ನಂತರ ಅದು ಪುಸ್ತಕವೊಂದರಲ್ಲಿ ಸೇರಿ ಪ್ರಕಟವಾಗಿತ್ತು, ಅದನ್ನು ಟಿವಿ ಚಾನಲ್ ಒಂದು 'ವಿಷ್ಣುವಿಗೆ ಅವಮಾನ' ಅಂತ ಗುಲ್ಲೆಬ್ಬಿಸಿದಾಗ, ಇದೇ ಯುವಕರ ಗುಂಪು ಮುಕುಂದರಾಜ್ ಜೊತೆಗೆ ಜಗಳ ಮಾಡಿ ಕೆಟ್ಟದಾಗಿ ವರ್ತಿಸಿತ್ತು, ಅವತ್ತು ನಡೆದ ಟಿವಿ ಚರ್ಚೆಯಲ್ಲಿ ವಿಷ್ಣು ಅಭಿಮಾನಿಯೊಬ್ಬರು 'ವಿಷ್ಣುವರ್ಧನ್ ಬಸವಣ್ಣನಿಗಿಂತ, ಅಂಬೇಡ್ಕರ್‌ಗಿಂತಾ ದೊಡ್ಡವರು' ಅಂದರಂತೆ! ಇಷ್ಟೆಲ್ಲಾ ಮಾತಾಡಿದ್ದ ಅದೇ ಯುವಕರೇ ಯುದ್ಧ ಗೆಲ್ಲುವ ಮೂಡ್‌ನಲ್ಲಿ ನಮ್ಮ ಆಫೀಸಿಗೂ ಬಂದಿದ್ದಾರೆ ಅಂತನ್ನಿಸಿತು. ನಾನು "ವಿಷ್ಣು ಸಮಾಧಿ ಇರುವ ಜಾಗ ನಟ ಬಾಲಕೃಷ್ಣ ಕುಟುಂಬಕ್ಕೆ ಸೇರಿದ್ದಲ್ಲದೆ, ಈಗ ಆ ಭೂಮಿ ಪಡೆಯುವಾಗ ದಬ್ಬಾಳಿಕೆ ತರ ಮಾತಾಡದೆ, ವಿಶ್ವಾಸದಿಂದ ಒಪ್ಪಿಸಬೇಕು ಅಲ್ಲವಾ?" ಅಂತ ಕೇಳಿದೆ.



RSS ಬಾಲನಟ ಅನಿರುದ್ಧ

"ಅದು ಬಾಲಕೃಷ್ಣಗೆ ಸರ್ಕಾರ ಕೊಟ್ಟಿರುವ ಭಿಕ್ಷೆ" ಅಂದ ಒಬ್ಬ ಯುವಕ. ಹಾಗೆಂದ ಮರುಕ್ಷಣ "ನಾನು ಹಾಗೆ ಅನ್ನಬಾರದಿತ್ತು" ಅಂತಲೂ ಹೇಳಿದ. ಆ ಮಾತುಗಳು ಅವರ

ಶುರುವಾದ ಕೆಲ ಹೊತ್ತಿನಲ್ಲೇ ಸಮಾಧಾನಗೊಂಡಂತೆ ಕಂಡರೂ ಅವರಲ್ಲಿನ ಬೇಸರ ಮಾತ್ರ ಇನ್ನೂ ಕೊಂಚ ಉಳಿದಿದ್ದಂತೆ ಕಾಣಿಸಿತು.

ವಿಷ್ಣು ಸ್ಮಾರಕ ಇನ್ನೂ ಆಗದಿರುವ, ಭಾರತಿಯವರು ಅನುಭವಿಸುತ್ತಿರುವ ನೋವು ಹತಾಶೆಯನ್ನೇ ಆ ಯುವಕರು ವ್ಯಕ್ತಪಡಿಸುತ್ತಿರುವಂತೆ ನನಗನ್ನಿಸಿತು. ನಾವದಕ್ಕೆ ಕಾರಣ ಅಲ್ಲದಿದ್ದಾಗಲೂ ನಮ್ಮೊಂದಿಗೆ ಅವರು ವಾದ ಮುಂದುವರೆಸಿದರು.

ಅವರಲ್ಲಿ ಒಬ್ಬ ಯುವಕ "ನಮ್ಮ ವಿಷ್ಣು ಬಗ್ಗೆ ಇಡೀ ಬ್ರಹ್ಮಾಂಡಕ್ಕೆ ಗೊತ್ತು" ಅಂದ. ಇನ್ನೊಬ್ಬ "ವಿಷ್ಣು ಅಭಿಮಾನಿಯಾದವರು ಜೀವಮಾನದಲ್ಲೇ ಯಾವ ತಪ್ಪೂ ಮಾಡಲ್ಲ" ಅಂದರು.

"ವಿಷ್ಣು ಅಭಿಮಾನಿಯಾದವರು ಯಾವತ್ತೂ ಚೇಂಜ್ ಆಗಲ್ಲ" ಅನ್ನುವ ದುಡುಕು ಹಾಗೂ ಸಜ್ಜನಿಕೆಗಳೆರಡನ್ನೂ ತೋರುವಂತಿತ್ತು, ಕೊಂಚ

ನಮ್ಮ ಮಾತು ಹೀಗೆ ನಡೆಯುತ್ತಿದ್ದಾಗ ಅವರು "ವಿಷ್ಣುವರ್ಧನ್ ನ
ವರ್ಷ ಕಲಾಸೇವೆ ಮಾಡಿದ್ದಾರೆ. ನೂರಾರು ಜನರಿಗೆ ಸಹಾಯ ಮಾಡಿ
ಅಂತಹ ಕಲಾವಿದರಿಗೆ ನಮ್ಮ ಸರ್ಕಾರ ಅಲ್ಲದೆ ಇನ್ಯಾರು ಗೌರವ ಕೊಡಬ
ಅಂದರು.

ನಾನು ಹಳೆಯದೇನನ್ನೋ ನೆನಪಿಸಿಕೊಳ್ಳುತ್ತಾ "ಹೌದು, ಅದು
ನಾನು ಬೆಂಗಳೂರಿನಲ್ಲಿ ಕಾಲೇಜು ಓದಲು ಬಂದಾಗ ವಿಷ್ಣುವಿನಿಂದ ನ
ಸಹಾಯ ಸಿಕ್ಕಿತ್ತು, ನಾನಾಗ ವಿಷ್ಣು ಅಭಿಮಾನಿಯಾಗಿದ್ದೆ. ನಾನು left han
ಹಾಗಾಗಿ ಎಲ್ರೂ ನನ್ನ 'ಲೊಡ್ಡೆ' ಅಂತಿದ್ದರು" ಅಂದೆ.

"ಹಾಗಾದ್ರೆ ಈಗ ನೀವೇ ವಿಷ್ಣುನ ಟೀಕಿಸಬಹುದಾ?" ಅಂತ ಒಬ್ಬ

ಪಾಯಿಂಟ್ ಹಾಕಿದ. ಆದರೆ ನನ್ನ ಓದಿಗೆ ವಿಷ್ಣು ಹೇಗೆ ಸಹಾಯ ಮಾಡಿದ
ಪ್ರಶ್ನೆ ಕೇಳಲಿಲ್ಲ, ನಾನೂ ಹೇಳಲಿಲ್ಲ, ಆದರೆ ಇಲ್ಲಿ ಈಗ ಹೇಳಬಹುದೆನಿಸ
ಅನಿವಾರ್ಯವಾಗಿ **Earn & Learn** ಕ್ಯಾಟಗರಿಗೆ ಸೇರಿದ್ದ ನಾವೊಂ
ವಿದ್ಯಾರ್ಥಿ ಮಿತ್ರರು ಆಗ ಬೆಂಗಳೂರಲ್ಲಿ ಬದುಕಲು ಅಡುಗೆ ಕಾಂಟ್ರಾಕ್ಟರ
ಹತ್ತಿರ ದಿನಗೂಲಿ ಆಧಾರದಲ್ಲಿ ಕೆಲಸ ಮಾಡುತ್ತಿದ್ದೆವು. ಕೆಲಕಾಲ ಬೆಂಗಳ
ರೇಸ್‌ಕೋರ್ಸ್‌ನಲ್ಲಿ ಟಿಕೆಟ್ ಮಾರಿದ್ದೂ ಉಂಟು. ಆದರೆ **Quick mo**
ಅಂತ ಸಿಗುತ್ತಿದ್ದುದು ಸಿನಿಮಾ ಬ್ಲಾಕ್ ಟಿಕೆಟ್ ಮಾರಾಟದಲ್ಲಿ, ವಿಷ್ಣು ಸಿನಿಮ
ಹವಾ ಇದ್ದ ಕಾಲವದು. ನಾವು ಬೆಳಗಿನ ಜಾವ ನಾಲ್ಕು ಗಂಟೆಗೆ
ಉಮಾ ಟಾಕೀಸಿನಲ್ಲಿ ಕ್ಯೂ ನಿಂತು ನಾಲ್ಕಾರು ಟಿಕೆಟ್ ಖರೀದಿಸಿ ಒಂದಕ್ಕೆ
ಲಾಭಕ್ಕೆ ಮಾರಿಕೊಳ್ಳುತ್ತಿದ್ದೆವು. ಒಂದು ವಿಷ್ಣು ಸಿನಿಮಾ ಬಂದರೆ ನ
ಒಂದು ವಾರದ ಖರ್ಚು ಹುಟ್ಟುತ್ತಿತ್ತು, ಆದರೆ ಒಮ್ಮೆ ಚಾಮರಾಜಪೇಟ
ಸ್ಥಳೀಯ ಸಮಾನ ವೃತ್ತಿಯವರು 'ತಮ್ಮ ಏರಿಯಾದಲ್ಲಿ ಇನ್ನು ಮುಂದ
ಬ್ಯುಸಿನೆಸ್‌ಗೆ ಬರದಂತೆ' ನಮಗೆ ಅಡ್ಡಿ ಮಾಡಿದರು. ಆ ಪ್ರಾದೇಶಿಕ ಮೀಸ
ನಿಯಮದಿಂದಾಗಿ ನಮ್ಮ ಸ್ವಯಂ ಉದ್ಯೋಗ ಯೋಜನೆಯು ನಂತರ
ಮಾರ್ಕೆಟ್ ಹಾಗೂ ಮೆಜೆಸ್ಟಿಕ್ ಏರಿಯಾಗೆ ಶಿಫ್ಟ್ ಆಯಿತು. ಕಾಲೆ
ಪುಸ್ತಕ ಬಿಟ್ಟು ಕೈಗೆ ಸಿಗುತ್ತಿದ್ದ ಉಳಿದೆಲ್ಲವನ್ನು ಓದುತ್ತಿದ್ದ ನಾವು
ಮುಗಿಯುವ ಹೊತ್ತಿಗೆ ವಿಷ್ಣು ಅಭಿಮಾನವಿರಲಿ, ಮೀಡಿಯೋಕರ್ ಫ
ಸಿನಿಮಾಗಳ ಅಭಿರುಚಿಯನ್ನೇ ತ್ಯಜಿಸಿ ಮುಂದಕ್ಕೆ ಸಾಗಿ ಹೋಗಿದ್ದೆವು.

ಅಭಿಮಾನ ಅಭಿರುಚಿಯಾಗಿ ಬದಲಾಗುವ ಪ್ರಕ್ರಿಯೆ ಅದು.

ನಾನು ಆ ಯುವಕರಿಗೆ "ನೋಡಿ ವಿಷ್ಣುವರ್ಧನ್ ಒಳ್ಳೆ
ಕಲಾವಿದರಾಗಿದ್ದರು. ಅವರಿಗೆ ಪದ್ಮಭೂಷಣ ಪ್ರಶಸ್ತಿ ಸಿಗದಿದ್ದ ಬಗ್ಗೆ ಬೇಸರವಿ
ಅವರು ಸ್ನೇಹವಿಶ್ವಾಸಕ್ಕೆ ಸೋಲುತ್ತಿದ್ದರು. ಆದರೆ ಆ ಸ್ನೇ
ಬೆಲೆ ಗೊತ್ತಿಲ್ಲದ ಜನ 'ಬಳ್ಳಾರಿ ನಾಗ' ತರದ ಕೆಟ್ಟ ಸಿನಿಮಾ
ನಟಿಸುವಂತೆ ಮಾಡಿ ಕೊನೆ ದಿನಗಳಲ್ಲಿ ಅವರ ಗೌರವ ಕಳೆದ
ಬನ್ನಂಜೆ ಗೋವಿಂದಾಚಾರ್ಯನೆಂಬ ಒಬ್ಬ ಕೆಟ್ಟ ಜಾತಿವ
ಭಾವುಕರಾಗಿದ್ದ ವಿಷ್ಣುರನ್ನ ತಲೆಕೆಡಿಸಿ ಮಾನಸಿಕವ
ಬಳಲಿಸುತ್ತಿದ್ದ" ಅಂತೆಲ್ಲಾ ಹೇಳಿದೆ.

ಕೊನೆಗೆ "ಮಹಾಕ್ಷತ್ರಿಯ ಸಿನಿಮಾದ 'ಈ ಭೂಮಿ ಬ
ಬುಗುರಿ ಆ ಶಿವನೇ ಚಾಟಿ ಕಣೋ...' ಹಾಡಿನ
ಏನನಿಸುತ್ತೆ?" ಅಂತ ಕೇಳಿದೆ.

"ಚೆನ್ನಾಗಿದೆ" ಅಂದರವರು.

"ಅಷ್ಟೇ ಅಲ್ಲ, ಆ ಹಾಡಿನ ಅರ್ಥ, ಹಾಡು ಬರೆದ ಹಂಸಲೇಖ
ಪ್ರತಿಭೆಯ ಬಗ್ಗೆಯೂ ನೀವು ಯೋಚಿಸಬೇಕು. ಆಗ ನಮ್ಮ ಸಿನಿ
ಅಭಿರುಚಿಯೂ ಬೆಳೆಯುತ್ತದೆ. ನಾವು ಬೆಳೆಯುತ್ತೇವೆ" ಅಂದೆ.

ಅವರೆಲ್ಲಾ ಎದ್ದು ಹೊರಡುವಾಗ "ಈಗಲೂ ನಿಮಗೆ ಬೇಜಾರಿ
ಒಂದು ಪತ್ರ ಬರೆಯಿರಿ, ಪ್ರಕಟಿಸಬಹುದು ಅಥವಾ ನಿಮ್ಮಲ್ಲಿ ಒ
ಸಂದರ್ಶನವನ್ನೇ ಮಾಡಬಹುದು. ಅಲ್ಲಿ ನಿಮಗನಿಸಿದ್ದು ಹೇಳಬಹುದ
ಅಂದೆ.


"ಆಗಲಿ" ಅಂತ ಹೇಳಿ ಹೋದವರು ನಮಗೆ ಮತ್ತೆ ಸಿಗಲಿಲ್ಲ, ಪತ್ರ
ಬರಲಿಲ್ಲ, ಹಾಗಾಗಿ ಇದೆಲ್ಲವನ್ನೂ ಈಗ ಹೇಳಬೇಕಾಗಿ ಬಂತು. ನಾಗವರ್ಧ
ಭಾರ್ಗವ, ಶ್ರೀನಿವಾಸ್, ಪ್ರಕಾಶ್ ಎಂಬ ಈ ಯುವ ಸ್ನೇಹಿತರ ಗುಂ
ಸಿಟ್ಟು, ತಳಮಳ ಅರ್ಥವಾಗುವಂತದ್ದೆ. ಇವರೆಲ್ಲಾ ಇನ್ನೂ ಸ್ವಲ್ಪ ಸಹನೆಯಿ
ವರ್ತಿಸಿ ಕಲಾವಿದ ವಿಷ್ಣುಗೆ ಸಿಗಬೇಕಾದ ಗೌರವ ಸಿಗುವಂತೆ ನೋಡಿಕೊ
ಆದರೆ ಹಾಗೆ ಮಾಡುವಾಗ ಜಗಳ, ಆವೇಶದ ಮಾತುಗಳನ್ನಾಡಿದರೆ ಸ
ಬಗೆಹರಿದುಬಿಡುವುದಿಲ್ಲ. ವಿಷ್ಣು ಮೇಲಿನ ಇವರಲ್ಲಿನ ಅಭಿಮಾನವು ಕ
ನಾಡು-ನುಡಿಯ ಅಭಿಮಾನವಾಗಿಯೂ ಬೆಳೆಯಲಿ. ಈ ತರದ ಯುವಕ
ತಮ್ಮದೆನ್ನುವ ಯಾವ ಸ್ವಾರ್ಥವೂ ಇರುವುದಿಲ್ಲ. ಆದರೆ ತೆರೆಮರೆಯ
ಕೆಲವರು ನಿಂತು ಜಗಳಕ್ಕೆ ಪ್ರಚೋದನೆ ಕೊಡುತ್ತಿರುತ್ತಾರೆ.

ಈ ವಿಷ್ಣು ಅಳಿಯ ಅನಿರುದ್ಧನ ತಂದೆ ಹರ್ಷವರ್ಧನ್ ಒಬ್ಬ
RSS ಕ್ರಿಮಿ. ಯಾರು ಸಿಕ್ಕರೂ "ಬನ್ನಿ, ಅಯೋಧ್ಯೆಯಲ್ಲಿ ರಾಮಮಂ
ಕಟ್ಟೋಣ" ಅಂತಾ ಪ್ರಲಾಪಿಸುವ ಕೋಮುವಾದಿ. ಸ್ವತಃ ವಿಷ್ಣುವರ್ಧ
ಇನ್ನೊಬ್ಬ ಕೋಮುವಾದಿ ಶಿವಸೇನೆಯ ನಾಯಕ ಬಾಳಾಠಾಕ್ರೆಯ
ಅಯೋಗ್ಯನನ್ನು ಯಾವಾಗಲೂ ಹೊಗಳುತ್ತಿದ್ದರು. ಈ ಠಾಕ್ರೆ ಪದೇ
ಬೆಳಗಾವಿ ಗಡಿ ವಿವಾದ ಕೆಣಕಿ ಕರ್ನಾಟಕಕ್ಕೆ ಕಿರುಕುಳ ಕೊಡುತ್ತಿದ್ದ ನ
ಅಷ್ಟೇ ಅಲ್ಲ ಮುಂಬೈನಲ್ಲಿರುವ ಕನ್ನಡಿಗರಿಗೂ ಹಿಂಸಿಸುತ್ತಿದ್ದನ. ನಮ್ಮ ಕಚೇರಿ
ಮೇಲೆ ಈ ಯುವಕರನ್ನು ಛೂ ಬಿಟ್ಟಿರುವುದು ಅನಿರುದ್ಧ ಇರಬಹ
ಅನಿಸಿದ್ದರಿಂದ ಈ ಮಾತು ಹೇಳಬೇಕಾಗಿ ಬಂದಿದೆ. ಈ ಅನಿರುದ್ಧನ ಹಿ
RSS ಕೈವಾಡ ಇರುವುದು ಕಾಣುತ್ತಿದೆ.


ಅನಿರುದ್ಧ ಈಗಿನ್ನೂ ಬಾಲಕ ಹಾಗೂ ಬಾಲನಟ ಕೂಡ. ಹಾ
'ಲಂಕೇಶ್' ತರದ ವಿಚಾರಕ್ಕೆ ತಲೆ ಹಾಕಿ ಬೆದರಿಸುವುದು, ಕಲ್ಲು ಹೊಡೆ
ಧಮಕಿ ಕೊಟ್ಟರೆ ಆಗುವ ಸಿನಿಮಾ ಕ್ಲೈಮಾಕ್ಸ್ ಪರಿಣಾಮದ ಬಗ್ಗೆ ಸರಿಯ
ಯೋಚಿಸಲಿ.

ಬ್ರಾಹ್ಮಣ್ಯ ಅಂದು-ಇಂದು

ಯಶಸ್ವಿ ವಿಚಾರಗೋಷ್ಠಿ



ಲಂಕೇಶ್ ಬಳಗ ದಿನಾಂಕ **6.10.2013** ರಂದು ಚಿತ್ರದುರ್ಗದಲ್ಲಿ ಏರ್ಪಡಿಸಿದ್ದ 'ಬ್ರಾಹ್ಮಣ್ಯ ಅಂದು-ಇಂದು' ವಿಚಾರ ಸಂಕಿರಣ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಸೆಳೆಯಿತು. ಸುಮಾರು ನಾಲ್ಕು ಗಂಟೆಗಳ ಕಾಲ ನಿರಂತರವಾಗಿ ನಡೆದ ಚರ್ಚಾಗೋಷ್ಠಿಗಳು 'ಬ್ರಾಹ್ಮಣ್ಯ'ವು ಹೇಗೆ ಈ ನಾಡಿನ ಜನರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ರಾಜಕೀಯವಾಗಿ ಸದೆ ಬಡಿಯುತ್ತಿದೆ ಎಂಬುದನ್ನು ತೆರೆದಿಡುವಲ್ಲಿ ಯಶಸ್ವಿಯಾಯಿತು.



ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ರಾಯಚೂರು, ಬೆಂಗಳೂರು, ತುಮಕೂರು, ಮಂಡ್ಯ ಮುಂತಾದೆಡೆಗಳಿಂದ ನೂರಾರು ಜನ ಪಾಲ್ಗೊಂಡಿದ್ದು ವಿಶೇಷವಾಗಿತ್ತು, ಅದೇರೀತಿ ಈ ವಿಚಾರಗೋಷ್ಠಿಯಲ್ಲಿ ದಲಿತ, ರೈತ, ಕಾರ್ಮಿಕ ಚಳವಳಿಗಳ ಕಾರ್ಯಕರ್ತರು, ಬುದ್ಧಿಜೀವಿ, ಬರಹಗಾರರೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಈ ಬ್ರಾಹ್ಮಣ್ಯ ಹಾಗೂ ಫ್ಯಾಸಿಸಂನ ಕೆಡುಕುಗಳ ನಾಯಕನಾಗಿ ನರೇಂದ್ರ ಮೋದಿ ಹುಟ್ಟಿ ಬಂದಿರುವುದನ್ನೂ ಸಭೆಯು ಗುರುತಿಸಿತು.

ಬ್ರಾಹ್ಮಣ್ಯದ ವಿರುದ್ಧ ಈ ಕಾಲಘಟ್ಟದಲ್ಲಿ ನಡೆಸಬೇಕಾದ ಹೋರಾಟವನ್ನು ನರಹಂತಕ ನರೇಂದ್ರ ಮೋದಿಯ ವಿರುದ್ಧದ ಸಂಘರ್ಷದ ಭಾಗವಾಗಿಯೇ ಪರಿಗಣಿಸಬೇಕಾದ ಅನಿವಾರ್ಯತೆಯನ್ನೂ ಈ ಸಭೆ ನಿರೂಪಿಸಿತು.

ಈ ವಿಚಾರಗೋಷ್ಠಿಯ ಕೆಲ ಫೋಟೋಗಳನ್ನು ಇಲ್ಲಿ ಪ್ರಕಟಿಸಿದ್ದೇವೆ.

'ಬ್ರಾಹ್ಮಣ್ಯ'ದ ದೌರ್ಜನ್ಯಗಳ ವಿರುದ್ಧ ಕರ್ನಾಟಕದ ಇನ್ನಿತರ ಭಾಗಗಳಲ್ಲೂ ಜನಪರ ಸಂಘಟನೆಗಳು ಚರ್ಚೆ-ಸಂವಾದ ನಡೆಸಲು ಮುಂದಾಗಬೇಕೆಂದು ನಮ್ಮ ಮನವಿ.

ಸೀತೆ ಮತ್ತು ಶಂಭೂಕನನ್ನು ಕೊಂದ ರಾಮ

ರಾಮ ಎಂಬ ಸಾಂಸ್ಕೃತಿಕ ಸಮಸ್ಯೆಯ ಬಗ್ಗೆ ಅಂಬೇಡ್ಕರ್ ಅವರು ಬರೆದಿದ್ದ ಲೇಖನದ ಮೊದಲರ್ಧ ಭಾಗದ ಅನುವಾದವನ್ನು ಕಳೆದವಾರ ಪ್ರಕಟಿಸಿದ್ದೆವು. ಈಗ ಇಲ್ಲಿ ಆ ಲೇಖನದ ಉಳಿದ ಭಾಗ ನಿಮಗಾಗಿ...

ಈಗ ಪತ್ನಿ ಸೀತೆಯ ವಿಷಯದಲ್ಲಿ ರಾಮ ಹೇಗೆ ಮಕೊಂಡ ಎಂಬುದಕ್ಕೆ ಬರುವ. ಸುಗ್ರೀವ ಮತ್ತು ುಮಂತ ಸಂಘಟಿಸಿದ್ದ ಸೈನ್ಯದ ನೆರವಿನೊಂದಿಗೆ ರಾಮ ಕೆಯ ಮೇಲೆ ದಾಳಿ ಮಾಡಿದ. ಅಲ್ಲೂ ವಾಲಿ ಮತ್ತು ್ರೀವ ಎಂಬ ಸಹೋದರರ ನಡುವೆ ಅನುಸರಿಸಿದ್ದ ಂತ್ರಿ ತರ್ಕವನ್ನೇ ರಾಮ ಪಾಲಿಸಿದ. ವಿಭೀಷಣ ಎಂಬ ಣನ ಸಹೋದರನ ನೆರವು ಪಡೆದ ರಾಮ, ತಾನು ುದ್ಧದಲ್ಲಿ ರಾವಣ ಮತ್ತು ಅವನ ಮಗನನ್ನು ಕೊಂದ ತರ ವಿಭೀಷಣನಿಗೇ ಪಟ್ಟಾಭಿಷೇಕ ಮಾಡುವುದಾಗಿ ಳಿದ. ಯುದ್ಧದಲ್ಲಿ ರಾವಣನನ್ನು ಮತ್ತು ಆತನ ಪುತ್ರ ್ರಜಿತ್‌ನನ್ನೂ ರಾಮ ಕೊಂದು ಹಾಕಿದ. ತೀವ್ರವಾಗಿದ್ದ ಯುದ್ಧದಲ್ಲಿ ರಾವಣನನ್ನು ಮಣಿಸಿದ ನಂತರ ಆತನ ತಿಮ ಶವಸಂಸ್ಕಾರವನ್ನು ರಾಮ ಮುಗಿಸಿದ. ಾದನಂತರ ಆತನ ಗಮನವೆಲ್ಲಾ ವಿಭೀಷಣನ ಟ್ಟಾಭಿಷೇಕಕ್ಕೆ ಮೀಸಲಾಗಿತ್ತು. ಇದೆಲ್ಲ ಮುಗಿದನಂತರವೇ ೆ ಇರುವಲ್ಲಿಗೆ ಹನುಮಂತನನ್ನು ಕಳುಹಿಸಿದ ರಾಮ ು, ಲಕ್ಷ್ಮಣ ಮತ್ತು ಸುಗ್ರೀವ ಸುರಕ್ಷಿತರಾಗಿರುವ ಬಗ್ಗೆ ್ತು ತಾವೆಲ್ಲ ರಾವಣನನ್ನು ಸಂಹರಿಸಿರುವ ಬಗ್ಗೆ ಆಕೆಗೆ ಸಲು ಹೇಳಿದ.

ರಾವಣನನ್ನು ಕೊಂದ ಕೂಡಲೇ ರಾಮ ಸೀತೆ ಇದ್ದಲ್ಲಿಗೆ



ೋಗಬೇಕಿತ್ತು. ಆದರೆ ಆತ ಹಾಗೆ ಮಾಡಲಿಲ್ಲ. ಬದಲಾಗಿ ೆಯ ಕ್ಷೇಮಾಭಿವೃದ್ಧಿಗಿಂತಲೂ ರಾಮನಿಗೆ ವಿಭೀಷಣನ ಟ್ಟಾಭಿಷೇಕದ ಬಗ್ಗೆ ಹೆಚ್ಚು ಆಸಕ್ತಿ ಇತ್ತು. ಹೋಗಲಿ, ಟ್ಟಾಭಿಷೇಕದ ನಂತರವೂ ತಾನೇ ಸೀತೆ ಇರುವಲ್ಲಿಗೆ ೋಗುವ ಬದಲು ಹನುಮಂತನನ್ನು ಕಳುಹಿಸಿದ. ಅದೂ ತಹ ಆದೇಶದೊಂದಿಗೆ? ಸೀತೆಯನ್ನು ಕರೆತರುವ ಲಾಗಿ ತಾವೆಲ್ಲರೂ ಕ್ಷೇಮವಾಗಿದ್ದೇವೆ ಎಂದು ಆಕೆಗೆ ುವ ಆದೇಶದೊಂದಿಗೆ.

ಆಗ ಸೀತೆಯೇ ರಾಮನನ್ನು ನೋಡಬೇಕೆಂಬ ಯನ್ನು ವ್ಯಕ್ತಪಡಿಸಿದಳು. ಆದರೆ ಹತ್ತು ತಿಂಗಳಿಗಿಂತ ಚ್ಚು ಕಾಲ ರಾವಣನ ವಶದಲ್ಲಿದ್ದ ತನ್ನ ಪತ್ನಿ ಸೀತೆಯನ್ನು ೋಡಲು ರಾಮ ಹೋಗಲಿಲ್ಲ. ಬದಲಾಗಿ ರಾಮ ುವಲ್ಲಿಗೆ ಸೀತೆಯನ್ನೇ ಹನುಮಂತ ಕರೆದುಕೊಂಡು ೋದ. ಆಗ ರಾಮ ಸೀತೆಗೆ ಹೇಳಿದ ಮಾತಾದರೂ ತಹದ್ದು? ಸಾಮಾನ್ಯ ಮನುಷ್ಯತ್ವ ಇರುವ ವ್ಯಕ್ತಿಯೂ ಪತ್ನಿಯನ್ನು ಇಷ್ಟು ಕಟುವಾಗಿ ಮಾತನಾಡಿಸುವುದಿಲ್ಲ. ಲ್ಮೀಕಿಯ ಪ್ರಕಾರ ರಾಮ ಹೀಗೆ ಹೇಳಿದ:

"ನಿನ್ನನ್ನು ಅಪಹರಿಸಿದ್ದ ನನ್ನ ವೈರಿಯನ್ನು ಯುದ್ಧದಲ್ಲಿ ೋಲಿಸಿದ್ದರಿಂದ ನಾನು ನಿನ್ನನ್ನು ಬಹುಮಾನವಾಗಿ ಡೆದಿದ್ದೇನೆ. ಆ ಮೂಲಕ ನಾನು ನನ್ನ ವೈರಿಗೆ ಶಿಕ್ಷೆಯನ್ನು ಟ್ಟು ನನ್ನ ಘನತೆಯನ್ನು ಮರು ಪಡೆದಿದ್ದೇನೆ. ಜನ ಯುದ್ಧದ ಪರಾಕ್ರಮವನ್ನು ಗಮನಿಸಿದ್ದಾರೆ ಮತ್ತು ಗೆ ಜಯ ಸಿಕ್ಕಿದೆ. ನಾನು ಇಲ್ಲಿಗೆ ಬಂದಿದ್ದು ರಾವಣನನ್ನು ಂದು ಹಾಕುವ ಮೂಲಕ ನನಗೆ ಅಂಟಿದ್ದ ಕಳಂಕವನ್ನು ಡೆದುಹಾಕಲೆಂದೇ ಹೊರತು ನಿನ್ನ ಸಲುವಾಗಿ ಅಲ್ಲ."

ಸೀತೆಯ ಪಾಲಿಗೆ ಗಂಡ ರಾಮನಿಂದ ಇದಕ್ಕಿಂತ ನ ಪ್ರತಿಕ್ರಿಯೆ ಸಿಗಲು ಸಾಧ್ಯವೇ? ರಾಮ ಅಲ್ಲಿಗೆ ುಮ್ಮನಾಗಲಿಲ್ಲ, ಮುಂದುವರೆದು ಆಕೆಗೆ ಹೀಗೆ ಹೇಳಿದ:

"ನಿನ್ನ ಚಾರಿತ್ರ್ಯದ ಬಗ್ಗೆ ನನಗೆ ಅನುಮಾನವಿದೆ. ನಿನ್ನನ್ನು ವಣ ಕೆಡಿಸಿರಬಹುದು. ನಿನ್ನನ್ನು ನೋಡಲೂ ನನಗೆ ಷ್ಟವಾಗುತ್ತಿದೆ. ಓ ಜನಕನ ಪುತ್ರಿಯೇ, ನೀನು ಎಲ್ಲಿಗೆ ಾದರೂ ಹೊರಟುಹೋಗು. ನಿನ್ನೊಂದಿಗೆ ನನಗೆ ಯಾವ ಂಬಂಧವೂ ಇಲ್ಲ. ನಿನ್ನನ್ನು ವಾಪಸ್ಸು ಗೆಲ್ಲುವ ಉದ್ದೇಶ ಮಾತ್ರ ನನ್ನದಾಗಿತ್ತು. ನಿನ್ನಂತಹ ಸುಂದರವತಿಯನ್ನು ರಾವಣ ಕೆಡಿಸದೇ ಇರಲು ಸಾಧ್ಯವೇ ಇಲ್ಲ."

ರಾಮನ ಇಂತಹ ಮಾತುಗಳನ್ನು ಕೇಳಿ ಸಹಜವಾಗಿಯೇ ಬೇಸರಗೊಂಡ ಸೀತೆ ರಾಮ ಓರ್ವ ಕನಿಷ್ಠ ಮತ್ತು ಅಲ್ಪಮನುಷ್ಯನೆಂದು ದೂರಿದಳು. ಮಾತ್ರವಲ್ಲ ಹನುಮಂತ ಮೊದಲ ಬಾರಿಗೆ ಬಂದು ಅಪಹರಣವಾಗಿರುವ ತನ್ನನ್ನು ರಾಮ ತೊರೆದಿರುವ ಬಗ್ಗೆ ಹೇಳಿದಾಗಲೇ ತಾನು ಆತ್ಮಹತ್ಯೆ ಮಾಡಿಕೊಂಡು ರಾಮನಿಗೆ ಇಷ್ಟೆಲ್ಲ ಶ್ರಮವನ್ನು ತಪ್ಪಿಸಬೇಕಿತ್ತು ಎಂದು ಹಲುಬಿದಳು. ತನ್ನನ್ನು ತೊರೆಯಲು ರಾಮನಿಗೆ ಯಾವ ಕಾರಣವನ್ನೂ ಕೊಡಕೂಡದೆಂದು ಆಕೆ ತನ್ನ ಪಾತಿವ್ರತ್ಯವನ್ನು ಸಾಬೀತುಪಡಿಸಲು ಮುಂದಾದಳು. ಬೆಂಕಿಯನ್ನು ಪ್ರವೇಶಿಸಿದರೂ ಸುಡದೆ ಹೊರಬರುವ ಮೂಲಕ ತಾನು ಕಳಂಕರಹಿತಳು ಎಂದು ತೋರಿಸಿದಳು. ದೇವತೆಗಳೂ ಆಕೆ ಸಚ್ಚಾರಿತ್ರ್ಯಳು ಎಂದು ಘೋಷಿಸಿದರು. ಆಗ ಮಾತ್ರ ರಾಮ ಸೀತೆಯನ್ನು ಒಪ್ಪಿಕೊಂಡು ಆಕೆಯೊಂದಿಗೆ ಅಯೋಧ್ಯೆಗೆ ವಾಪಸ್ಸಾದ.


ಅಯೋಧ್ಯೆಗೆ ಹಿಂದಿರುಗಿದ ನಂತರ ನಡೆದದ್ದಾದರೂ ಏನು. ರಾಮ ರಾಜನಾದ ಆದರೆ ಸೀತೆ ಕೆಲವೇ ದಿನಗಳಲ್ಲಿ ರಾಣಿಯ ಸ್ಥಾನವನ್ನು ಕಳೆದುಕೊಂಡಳು. ಈ ಪ್ರಕರಣವೇ ರಾಮನಿಗೆ ಅಪಕೀರ್ತಿಯನ್ನು ತಂದುಕೊಡಬೇಕು. ವಾಲ್ಮೀಕಿ ತನ್ನ ರಾಮಾಯಣದಲ್ಲಿ ರಾಮ ಮತ್ತು ಸೀತೆಯನ್ನು ರಾಜ ಮತ್ತು ರಾಣಿ ಎಂದು ಪಟ್ಟಾಭಿಷೇಕ ಮಾಡಿದ ಕೆಲವೇ ದಿನಗಳಲ್ಲಿ ಸೀತೆ ಗರ್ಭವತಿಯಾದಳು ಎಂದು ದಾಖಲಿಸಿದ್ದಾನೆ. ಈ ಸುದ್ದಿ ಜನರಿಗೆ ಗೊತ್ತಾದಾಗ ಕೆಲವು ದುಷ್ಟರು ಆಕೆ ರಾವಣನಿಂದ ಗರ್ಭವತಿ ಆಗಿರಬೇಕೆಂದೂ, ಅಂತಹವಳನ್ನು ರಾಮ ತನ್ನ ಪತ್ನಿಯೆಂದು ಅಯೋಧ್ಯೆಗೆ ಕರೆತರಬಾರದಿತ್ತೆಂದೂ ಮಾತನಾಡಿಕೊಳ್ಳಲಾರಂಭಿಸಿದರು. ಇಂತಹ ಕೇಡುಬುದ್ಧಿಯ ಕಾಡುಹರಟೆಯನ್ನು ರಾಮನಿಗೆ ತಿಳಿಸಿದವನು ಆತನ ಆಸ್ಥಾನದಲ್ಲಿದ್ದ ವಿದೂಷಕ ಭದ್ರ.

ಇಂತಹ ಅಪನಿಂದನೆಯಿಂದ ರಾಮನಿಗೆ ನೋವಾಯಿತು. ಅಪಖ್ಯಾತಿಯಿಂದ ಆತ ತತ್ತರಿಸಿದ. ಅದು ಸಹಜವೇ. ಆದರೆ ಇದರಿಂದ ನಿವಾರಿಸಿಕೊಳ್ಳಲು ಆತ ಅನುಸರಿಸಿದ ಕ್ರಮ ಮಾತ್ರ ಅಸಹಜವಾಗಿತ್ತು. ಈ ಕಳಂಕವನ್ನು ತೊಡೆದು ಹಾಕಲು ಆತ ತೆಗೆದುಕೊಂಡ ನಿರ್ಧಾರ- ಸೀತೆಯನ್ನು ಅರಣ್ಯದಲ್ಲಿ ಬಿಟ್ಟುಬಿಡುವುದು. ತುಂಬು ಗರ್ಭಿಣಿಯಾಗಿದ್ದ ಪತ್ನಿಗೆ ಕಿಂಚಿತ್ತೂ ಸೂಚನೆ ಕೊಡದೆ ಆಕೆಯನ್ನು ಸ್ನೇಹಿತೆಯರು ಇಲ್ಲದ, ಆಹಾರವಿಲ್ಲದ ಕಾಡಿನಲ್ಲಿ ಅನಾಥಳಾಗಿ ಬಿಟ್ಟುಬಿಡುವ ವಂಚಕ ಯೋಚನೆ ರಾಮನದ್ದಾಗಿತ್ತು. ಇಂತಹ ಯೋಚನೆ ರಾಮನಿಗೆ ತತ್‌ಕ್ಷಣಕ್ಕೆ ಹೊಳೆದದ್ದಲ್ಲ, ಬದಲಾಗಿ ಆತ ಆ ನಿಟ್ಟಿನಲ್ಲಿ ಹೇಗೆ ತಂತ್ರ ರೂಪಿಸಿದ ಎಂಬುದನ್ನು ಕೂಲಂಕಷವಾಗಿ ಗಮನಿಸುವ ಅಗತ್ಯವಿದೆ.

ವಿದೂಷಕ ಭದ್ರ ಊರಿನ ಹಲವು ಜನರು ಆಡುತ್ತಿರುವ ಮಾತುಗಳ ಬಗ್ಗೆ ವರದಿ ಕೊಟ್ಟನಂತರ ರಾಮ ತನ್ನ ಸಹೋದರರನ್ನು ಕರೆದು ಅವರಿಗೆ ತನ್ನ ಅನಿಸಿಕೆಗಳನ್ನು ಹೇಳಿದ. ಲಂಕೆಯಲ್ಲಿ ಸೀತೆ ತನ್ನ ಪಾವಿತ್ರ್ಯತೆಯನ್ನು ಸಾಬೀತು ಪಡಿಸಿದ್ದನ್ನು, ದೇವತೆಗಳೇ ಅದಕ್ಕೆ ಒಪ್ಪಿಗೆಯನ್ನು ಕೊಟ್ಟದ್ದನ್ನು ಸಹೋದರರಿಗೆ ಹೇಳಿದ ರಾಮ ತಾನು ಆಕೆಯ ಮುಗ್ಧತೆಯನ್ನು, ಪಾವಿತ್ರತೆಯನ್ನು ಮತ್ತು ಶೀಲವನ್ನು ನಂಬಿಯೇ ಅಯೋಧ್ಯೆಗೆ ಕರೆದುಕೊಂಡು ಬಂದೆ ಎಂದು ವಿವರಿಸಿದ. "ಅದೇನೇ ಇರಲಿ, ಜನ ಈಗ ಸೀತೆಯ ಮೇಲೆ ಮಿಥ್ಯಾಪವಾದ ಮಾಡುತ್ತಾ ಅದಕ್ಕೆ ನನ್ನನ್ನೇ ದೂಷಿಸುತ್ತಾ ನನಗೆ ಅವಮಾನ ಮಾಡುತ್ತಿದ್ದಾರೆ. ಇಂತಹ ಅಪಕೀರ್ತಿಯನ್ನು ಸಹಿಸಲು ಯಾರಿಂದಲೂ ಸಾಧ್ಯವಿಲ್ಲ. ಮರ್ಯಾದೆ ಒಂದು ವಿಶೇಷ ಸಂಪತ್ತು. ದೇವತೆಗಳು ಮತ್ತು ಶ್ರೇಷ್ಠ ವ್ಯಕ್ತಿಗಳು ಅದನ್ನು ಕಾಪಾಡಿಕೊಳ್ಳಲು ಅಪಾರ ಶ್ರಮ ವಹಿಸುತ್ತಾರೆ. ಆದ್ದರಿಂದ ನನಗೆ ಈ ಅವಮರ್ಯಾದೆಯನ್ನು, ಈ ಅವಮಾನವನ್ನು ಸಹಿಸಲು ಸಾಧ್ಯವಾಗುತ್ತಿಲ್ಲ. ಇದರಿದಿಂದ ನನ್ನನ್ನು ರಕ್ಷಿಸಿಕೊಳ್ಳಲು ನಾನು ನಿಮ್ಮನ್ನೂ ತೊರೆಯಲು ಹಿಂಜರಿಯುವುದಿಲ್ಲ. ಆದ್ದರಿಂದ ಸೀತೆಯನ್ನು ತೊರೆಯಲು ನಾನು ಹಿಂದೇಟು .ಹಾಕುವುದಿಲ್ಲ" ಎಂದು ಘೋಷಿಸಿದ.

ಯಾವ ಮಾರ್ಗ ಸರಿ ಎಂದು ಯೋಚಿಸುವ ಬದಲಾಗಿ ಸಾರ್ವಜನಿಕರ ಅಪನಿಂದನೆಯಿಂದ ತನ್ನನ್ನು ರಕ್ಷಿಸಿಕೊಳ್ಳಲು ಸೀತೆಯನ್ನು ತೊರೆಯಲು ರಾಮ ನಿರ್ಧರಿಸಿದ್ದ ಎಂಬುದು ಇದರಿಂದಲೇ ಸ್ಪಷ್ಟವಾಗುತ್ತದೆ. ಆತನಿಗೆ ತನ್ನ ಖ್ಯಾತಿ ಮತ್ತು ಪ್ರತಿಷ್ಠೆ ಮುಖ್ಯವಾಗಿತ್ತೆ ಹೊರತು ಸೀತೆಯ ಪ್ರಾಣ ಲೆಕ್ಕಕ್ಕಿರಲಿಲ್ಲ. ಆತ ನಿಜವಾಗಲೂ ನ್ಯಾಯವಂತನಾಗಿದ್ದರೆ ಸೀತೆಯನ್ನು ಕುರಿತ ಮಿಥ್ಯಾರೋಪಗಳಿಗೆ ತಡೆಹಾಕಬಹುದಿತ್ತು; ರಾಜನಾಗಿದ್ದ ಆತನಿಗೆ ಆ ಅಧಿಕಾರವಿತ್ತು. ತನ್ನ ಪತ್ನಿಯ ಪಾತಿವ್ರತ್ಯದ ಬಗ್ಗೆ ಆತನಿಗೆ ನಿಜವಾಗಲು ನಂಬಿಕೆ ಇದ್ದಿದ್ದರೆ ಅದನ್ನು ಆತ ಸಾಧಿಸಿ ತೋರಬಹುದಿತ್ತು. ಆದರೆ ಆತ ಸಾರ್ವಜನಿಕರ ಮಾತಿಗೆ ತಲೆ ಬಾಗಿದ. ಹಲವು ಹಿಂದೂಗಳು ಈ ಪ್ರಕರಣವನ್ನೇ ರಾಮ ಎಷ್ಟು ಪ್ರಜಾಸತ್ತಾತ್ಮಕವಾಗಿದ್ದ ಎಂದು ತೋರಿಸಲು ಉಪಯೋಗಿಸುತ್ತಾರೆ. ಆದರೆ ಇತರರು ಈ ಪ್ರಕರಣದಿಂದ ರಾಮ ಎಂತಹ ದುರ್ಬಲ ಮತ್ತು ಧೈರ್ಯಗೇಡಿ ರಾಜನಾಗಿದ್ದ ಎಂದು ಗೊತ್ತಾಗುತ್ತದೆ ಎಂದು ವಾದಿಸುತ್ತಾರೆ.

ಅದೇನೇ ಇರಲಿ, ರಾಮ ತನ್ನ ಸೈತಾನರೂಪಿ ಯೋಜನೆಯ ಬಗ್ಗೆ ತನ್ನ ಸಹೋದರರಿಗೆ ಹೇಳಿದನೇ ಹೊರತು ಅದಕ್ಕೆ ತುತ್ತಾಗಲಿರುವ, ಅದರ ಬಗ್ಗೆ ತಿಳಿದುಕೊಳ್ಳುವ ಎಲ್ಲಾ ಹಕ್ಕುಗಳಿದ್ದ ತನ್ನ ಪತ್ನಿ ಸೀತೆಗೆ ಹೇಳಲಿಲ್ಲ. ಸೀತೆಯನ್ನು ಕತ್ತಲಲ್ಲಿ ಇಟ್ಟ. ರಾಮ ತನ್ನ ಯೋಜನೆಯನ್ನು ಜಾರಿಗೆ ತರಲು ಅವಕಾಶಕ್ಕಾಗಿ ಕಾಯುತ್ತಿದ್ದ ಕೊನೆಗೂ ಆತನಿಗೆ ಅಂತಹ ಅವಕಾಶವನ್ನು ಒದಗಿಸಿದ್ದು ಸೀತೆಯೇ ಎಂಬುದು ಆಕೆಯ ದುರ್ದೈವ. ಗರ್ಭ ಧರಿಸಿರುವ ಮಹಿಳೆಯರಿಗೆ ವಿವಿಧ ತರಹದ ಬಯಕೆಗಳಿರುತ್ತವೆ. ಇದರ ಬಗ್ಗೆ ರಾಮನಿಗೆ ಗೊತ್ತಿತ್ತು.



ಶಂಭೂಕನ ವಧೆ

ಕಂಡಹಾಗೆ



• ಗೌರಿ ಲಂಕೇಶ್

ಪ್ರಧಾನ ಸಂಪಾದಕಿ

editorlankesh@gmail.com

ಆದ್ದರಿಂದ ಒಂದು ದಿನ ಸೀತೆಗೆ ಏನಾದರೂ ಬಯಕೆ ಇದೆಯೇ ಎಂದು ರಾಮ ಕೇಳಿದ. ಸೀತೆ ಇದೆ ಎಂದಳು. ಅದೇನೆಂದು ರಾಮ ಕೇಳಿದ. ಗಂಗೆಯ ದಡದಲ್ಲಿರುವ ಯಾವುದಾದರೂ ಋಷಿಯ ಆಶ್ರಮದಲ್ಲಿ ಹಣ್ಣು ಗಿಡಮೂಲಿಕೆಗಳನ್ನು ತಿನ್ನುತ್ತಾ ಒಂದು ದಿನದ ಮಟ್ಟಿಗೆ ಇರಬೇಕೆನಿಸುತ್ತಿದೆ ಎಂದು ಸೀತೆ ಹೇಳಿದಳು. ಸೀತೆ ಹೀಗೆ ಉತ್ತರಿಸಿದ್ದೇ ತಡ, ತನ್ನ ಯೋಜನೆಯ ಜಾರಿಗೆ ಅವಕಾಶ ಸಿಕ್ಕಿತೆಂದು ರಾಮ "ನಾಳೆಯೇ ನಿನ್ನನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ" ಎಂದು ಉತ್ತರಿಸಿದ. ಸೀತೆ ತನ್ನ ಪ್ರೀತಿಯ ಗಂಡ ತನ್ನ ಬಗ್ಗೆ ತೋರುತ್ತಿರುವ ಪ್ರಾಮಾಣಿಕ ಕಾಳಜಿ ಇದೆಂದು ಭಾವಿಸಿದಳು. ಆದರೆ ರಾಮ ಮಾಡಿದ್ದೇನು? ತನ್ನ ಸಹೋದರರೊಂದಿಗೆ ಗುಪ್ತ ಸಮಾಲೋಚನೆ ನಡೆಸಿದ ರಾಮ ಸೀತೆಯನ್ನು ತೊರೆಯಲು ಈ ಅವಕಾಶವನ್ನು ಬಳಸಲು ತಾನು ನಿರ್ಧರಿಸಿರುವುದಾಗಿ ಹೇಳಿದ. ಮಾತ್ರವಲ್ಲ ಸೀತೆಯ ಪರವಾಗಿ ಯಾರೂ ವಾದಿಸಕೂಡದೆಂದು, ಹಾಗೆ ಮಾಡುವವರನ್ನೂ ತನ್ನ ವೈರಿಗಳಾಗಿ ಪರಿಗಣಿಸುತ್ತೇನೆಂದೂ ಎಚ್ಚರಿಸಿದ. ಆನಂತರ ಲಕ್ಷ್ಮಣನಿಗೆ ಮರುದಿನ ಸೀತೆಯನ್ನು ರಥದಲ್ಲಿ ಕೂರಿಸಿಕೊಂಡು ಅರಣ್ಯದಲ್ಲಿರುವ ಆಶ್ರಮದಲ್ಲಿ ತ್ಯಜಿಸಿ ಬರಲು ಹೇಳಿದ. ಸೀತೆಯನ್ನು ಕುರಿತಂತೆ ರಾಮ ತೆಗೆದುಕೊಂಡಿರುವ ನಿರ್ಧಾರವನ್ನು ಹೇಗೆ ಆಕೆಗೆ ಹೇಳುವುದೆಂದು ಲಕ್ಷ್ಮಣ ಯೋಚಿಸಲಾರಂಭಿಸಿದ. ಆತನ ಆತಂಕವನ್ನು ಅರ್ಥಮಾಡಿಕೊಂಡ ರಾಮ ಸೀತೆಯೇ ಆಶ್ರಮಕ್ಕೆ ಹೋಗುವ ಆಶೆ ವ್ಯಕ್ತಪಡಿಸಿದ್ದಾಳೆಂದು ಹೇಳಿದ.

ಈ ಸಭೆ ನಡೆದದ್ದು ರಾತ್ರಿ ಹೊತ್ತು. ಮಾರನೆ ಬೆಳಗ್ಗೆ ಸುಮಂತನಿಗೆ ರಥವನ್ನು ಸಿದ್ಧ ಮಾಡಲು ಲಕ್ಷ್ಮಣ ಹೇಳಿದ. ಆನಂತರ ಅರಮನೆಗೆ ಹೋಗಿ ಸೀತೆಯನ್ನು ಭೇಟಿಯಾಗಿ ಆಕೆಯನ್ನು ಆಶ್ರಮಕ್ಕೆ ಕರೆದುಕೊಂಡು ಹೋಗಬೇಕೆಂದು ರಾಮ ಸೂಚಿಸಿದ್ದಾನೆಂದು ತಿಳಿಸಿದ. ಸಂತೋಷಗೊಂಡ ಸೀತೆ ತನ್ನ ಪತಿ ರಾಮನ ಕಾಳಜಿಯನ್ನು ಮೆಚ್ಚುತ್ತಾ ರಥವನ್ನೇರಿದಳು. ಲಕ್ಷ್ಮಣ ಮತ್ತು ಸುಮಂತ ಆಕೆಯನ್ನು ಪೂರ್ವಭಾವಿಯಾಗಿ ನಿರ್ಧರಿಸಿಕೊಂಡಿದ್ದ ಜಾಗಕ್ಕೆ ಕರೆದುಕೊಂಡು ಹೋದರು. ಅಲ್ಲಿ ಸೀತೆಯ ಕಾಲಿಗೆ ನಮಸ್ಕರಿಸಿದ ಲಕ್ಷ್ಮಣ ಕಣ್ಣೀರನ್ನು ಸುರಿಸುತ್ತಾ "ನನ್ನನ್ನು ಕ್ಷಮಿಸು ಓ ಕಳಂಕರಹಿತ ರಾಣಿಯೇ. ನಿನ್ನನ್ನು ಇಲ್ಲಿ ತ್ಯಜಿಸಿ ಬರಲು ರಾಮ ಆದೇಶಿಸಿದ್ದಾನೆ. ಯಾಕೆಂದರೆ ನಿನ್ನನ್ನು ಮನೆಯಲ್ಲಿ ಇಟ್ಟುಕೊಂಡಿರುವುದರಿಂದ ಜನ ರಾಮನನ್ನು ಆಡಿಕೊಳ್ಳುತ್ತಿದ್ದಾರೆ" ಎಂದು ಹೇಳಿದ.

ಹೀಗೆ ರಾಮ ತಿರಸ್ಕರಿಸಿ ಕಾಡಿನಲ್ಲಿ ಸಾಯಲು ಬಿಟ್ಟ ಸೀತೆ ಹತ್ತಿರದಲ್ಲಿದ್ದ ವಾಲ್ಮೀಕಿಯ ಆಶ್ರಮದಲ್ಲಿ ಆಶ್ರಯ ಪಡೆದಳು. ಅಲ್ಲೇ ಸೀತೆ ಲವ ಮತ್ತು ಕುಶ ಎಂಬ ಅವಳಿ ಪುತ್ರರಿಗೆ ಜನ್ಮ ನೀಡಿದಳು. ವಾಲ್ಮೀಕಿ ತಾನು ಬರೆದಿದ್ದ ರಾಮಾಯಣವನ್ನು ಹಾಡಲು ಆ ಹುಡುಗರಿಗೆ ಕಲಿಸಿದ. ಅಯೋಧ್ಯೆಯಲ್ಲಿ ರಾಮ ಆಳುತ್ತಿದ್ದರೂ ಅದಕ್ಕೆ ಹತ್ತಿರದ ಕಾಡಿನಲ್ಲೇ ಆ ಹುಡುಗರು ಹನ್ನೆರಡು ವರ್ಷಗಳ ಕಾಲ ಬೆಳೆದರು. ಆ ಅವಧಿಯಲ್ಲಿ ಒಮ್ಮೆಯೂ ಆದರ್ಶ ಪತಿ ಎನಿಸಿಕೊಂಡಿರುವ ರಾಮ ಸೀತೆ ಬದುಕಿದ್ದಾಳೆಯೋ ಅಥವಾ ಸತ್ತಿದ್ದಾಳೆಯೋ ಎಂದು ವಿಚಾರಿಸಲಿಲ್ಲ. ಹನ್ನೆರಡು ವರ್ಷಗಳ ನಂತರ ರಾಮ ಮತ್ತು ಸೀತೆ ಭೇಟಿಯಾಗಿದ್ದು ವಿಚಿತ್ರ ಬೆಳವಣಿಗೆಗಳಿಂದ. ರಾಮ ಒಂದು ಯಜ್ಞವನ್ನು ಆಯೋಜಿಸಿ ಅದಕ್ಕೆ ಎಲ್ಲಾ ಋಷಿಗಳಿಗೆ ಆಹ್ವಾನ ನೀಡಿದ. ಆದರೆ ಹತ್ತಿರದಲ್ಲೇ ಇದ್ದ ವಾಲ್ಮೀಕಿ ಋಷಿಯನ್ನು ರಾಮ ಆಮಂತ್ರಿಸಲಿಲ್ಲ.


ಆದರೂ ವಾಲ್ಮೀಕಿ ಸ್ವಯಂಪ್ರೇರಣೆಯಿಂದ ತನ್ನ ಶಿಷ್ಯರಾದ ಸೀತೆಯ ಇಬ್ಬರು ಪುತ್ರರೊಂದಿಗೆ ಯಜ್ಞಕ್ಕೆ

➤ 18

"ಲಿಂಗಾಯತರು ಹಿಂದೂಗಳಲ್ಲ"

ಮಾತೆ ಮಹಾದೇವಿ ಸಂದರ್ಶನ

ಹಿಂದೂ ಧರ್ಮ ಶ್ರೇಣೀಕೃತವಾದ ಸಮಾಜ ವ್ಯವಸ್ಥೆಯನ್ನು ಹೊಂದಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ಅಸ್ಪೃಶ್ಯರಾಗಿರುವ ಪಂಚಮರು ಎಂಬುದಾಗಿ ಸ್ತರಗಳನ್ನು ವಿಭಾಗಿಸಿರುವುದು ಮಾತ್ರವಲ್ಲ ಆಯಾ ವರ್ಣದ ಸಂಸ್ಕಾರಗಳನ್ನು ಕೂಡ ಪ್ರತ್ಯೇಕಿಸಲಾಗಿದೆ. ಅಸಮಾನತೆ, ಭೇದಭಾವಗಳೇ ಹಿಂದೂ ಧರ್ಮದ ತಳಹದಿಯಾಗಿದ ತದ್ವಿರುದ್ಧವಾಗಿ ಸಮಾನತೆಯೇ ಲಿಂಗಾಯತ ಧರ್ಮದ ತಳಹದಿ.



ಲಂಕೇಶ್ : ಲಿಂಗಾಯತ ಒಂದು ಪ್ರತ್ಯೇಕವಾದ ಧರ್ಮ ಎಂದು ಹೇಳುತ್ತಿದ್ದೀರಿ. ನಿಮ್ಮ ಈ ನಿಲುವಿನ ಹಿನ್ನೆಲೆಯೇನು?

ಮಾತೆ : 12ನೇ ಶತಮಾನದಲ್ಲಿ ಗುರು ಬಸವಣ್ಣ ಸಂಸ್ಥಾಪಿಸಿದ ಲಿಂಗಾಯತ ಧರ್ಮ ಯಾವುದೇ ಧರ್ಮದ ಭಾಗವಲ್ಲ. ಆದರೆ ಶಾಲೆಗಳ ಸರ್ಟಿಫಿಕೇಟ್‌ಗಳಲ್ಲಿ ಮುಂತಾದ ಕಡೆ ಹಿಂದೂ-ಲಿಂಗಾಯತ ಎಂದು ಬರೆಯುವ ಪರಿಪಾಠ ಇದೆ. ಅಂದರೆ ಹಿಂದೂ ಎಂಬುದು ಒಂದು ಧರ್ಮ, ಲಿಂಗಾಯತ ಅದರಲ್ಲಿ ಒಂದು ಜಾತಿ ಎಂಬಂತೆ ಚಿತ್ರಿಸುತ್ತಿದ್ದಾರೆ. ಆದರೆ ಅದು ಸತ್ಯ ಅಲ್ಲ.

ಒಂದು ಧರ್ಮ ಅಂತಾ ಕರೆಯಬೇಕಾದರೆ ಅದಕ್ಕೆ ಸಂಸ್ಥಾಪನೆ ಮಾಡಿದ ವ್ಯಕ್ತಿಯಿರಬೇಕು. ಹಿಂದೂ ಧರ್ಮಕ್ಕೆ ಅಂಥಾ ಸಂಸ್ಥಾಪಕನೇ ಇಲ್ಲ. ಬೇರೆ ಬೇರೆ ಜನರು ಆಚರಿಸುತ್ತಿರುವುದನ್ನೆಲ್ಲಾ ಒಟ್ಟುಗೂಡಿಸಿ ಅದನ್ನೇ ಒಂದು ಧರ್ಮ ಅಂತ ವ್ಯಾಖ್ಯಾನ ನೀಡಿದ್ದಾರೆ.

ಲಿಂಗಾಯತ ಧರ್ಮ ಹಾಗಲ್ಲ; ಅದು ಒಂದು ಸ್ವತಂತ್ರ ಧರ್ಮ. ಯಾಕೆಂದರೆ ಅದಕ್ಕೆ ಸ್ಪಷ್ಟವಾದ ಸಂಸ್ಥಾಪಕರಿದ್ದಾರೆ. ಅಲ್ಲದೆ ಲಿಂಗಾಯತ ಧರ್ಮದ ಸಂವಿಧಾನವಾಗಿ ವಚನ ಸಾಹಿತ್ಯವಿದೆ.

ಹಿಂದೂ ಧರ್ಮಕ್ಕೆ ವೇದ, ಆಗಮ, ಉಪನಿಷತ್ತು, ಸ್ಮೃತಿ, ಭಗವದ್ಗೀತೆ ಮುಂತಾದವುಗಳೇ ಸಂವಿಧಾನ. ಈ ಹಿಂದೂ ಸಂವಿಧಾನವನ್ನು ಲಿಂಗಾಯತ ಧರ್ಮ ಸಂಸ್ಥಾಪಕರು ಖಡಾಖಂಡಿತವಾಗಿ ವಿರೋಧಿಸಿದ್ದಾರೆ ಎಂಬುದು ಮಹತ್ವದ ಸಂಗತಿ.

"ವೇದಕ್ಕೆ ಒರೆಯ ಕಟ್ಟುವೆ
ಶಾಸ್ತ್ರಕ್ಕೆ ನಿಗಳನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ
ಆಗಮದ ಮೂಗ ಕೊಯ್ವೆ ನೋಡಯ್ಯ" ಅಂತ

ಬಸವಣ್ಣನವರು ಸಾರಿದ್ದಾರೆ.

"ಶಾಸ್ತ್ರಗಳ ಹಿಂದೆ ಸುಳಿಯದಿರು
ವೇದಗಳ ಹಿಂದೆ ಹರಿಯದಿರು"

ಅಂತಾ ನಮ್ಮ ಇನ್ನಿತರ ಶರಣರು ಬೋಧಿಸಿದ್ದಾರೆ. ಹೀಗೆ ಲಿಂಗಾಯತ ಧರ್ಮ ಒಂದು ಸ್ವತಂತ್ರ ಧರ್ಮವಾಗಿ ಹಿಂದೂ ಧರ್ಮದ ಶ್ರೇಣೀಕೃತ ಆಚಾರ-ವಿಚಾರಗಳನ್ನೂ ಮಾನ್ಯ ಮಾಡದೆ ಪ್ರಗತಿಪರವಾದ, ಕ್ರಾಂತಿಕಾರಕವಾದ ವಿಚಾರಗಳನ್ನು ಪ್ರತಿಪಾದಿಸುತ್ತಾ ಬಂದಿದೆ.

ಲಂಕೇಶ್ : ಲಿಂಗಾಯತ ಆಚಾರ-ವಿಚಾರಗಳು ಹಿಂದೂ ಧರ್ಮಕ್ಕಿಂತ ಯಾವ ರೀತಿಯಲ್ಲಿ ಭಿನ್ನವಾಗಿವೆ?

ನಾವು ವೈದಿಕ ಹಿಂದೂಗಳಂತೆ ಜಾತಿಪದ್ಧತಿ, ಅಸ್ಪೃಶ್ಯತೆ, ವರ್ಣಾಶ್ರಮವನ್ನು ನಂಬೋದಿಲ್ಲ, ಯಜ್ಞ ಯಾಗಾದಿಗಳನ್ನು ಮಾಡೋದಿಲ್ಲ, ಪಂಚ ಸೂತಕಗಳನ್ನು ನಂಬೋದಿಲ್ಲ, ವಾಸ್ತು-ಜ್ಯೋತಿಷ್ಯ ಮುಂತಾದವುಗಳನ್ನು ನಂಬೋದಿಲ್ಲ, ಹಿಂದೂಗಳ ವಿವಾಹಗಳು ಅಗ್ನಿಸಾಕ್ಷಿಯಾಗಿ ನಡೆಯುತ್ತವೆ. ನಮ್ಮಲ್ಲಿ ಗುರುಲಿಂಗ ಜಂಗಮ ಸಾಕ್ಷಿಯಾಗಿ ವಿವಾಹ ನಡೆಯುತ್ತದೆ.

ಅಗ್ನಿಯನ್ನು ನಾವು ದೇವರೆಂದು ಪೂಜಿಸುವುದಿಲ್ಲ.

"ಕಿಚ್ಚು ದೈವವೆಂದು ಹವಿಯನಿಕ್ಕುವ
ಹಾರುವರ ಮನೆಯಲ್ಲಿ ಕಿಚ್ಚೆದ್ದು ಸುಡುವಾಗ
ಬಚ್ಚಲ ನೀರ, ಬೀದಿಯ ಧೂಳ ತಂದು ಹೊಯ್ವರಯ್ಯಾ
ಬೊಬ್ಬಿಟ್ಟೆಲ್ಲರ ಕರೆವರಯ್ಯಾ
ವಂದನೆಯ ಮರೆತು ನಿಂದಿಸುತ್ತಿರ್ದರಯ್ಯಾ" ಎಂದು


ವೈದಿಕರ ಆಷಾಢಭೂತಿತನವನ್ನು ಶರಣರು ಟೀಕಿಸಿದ್ದಾರೆ.

ಮತ್ತೊಂದು ಮಹತ್ವದ ಭಿನ್ನತೆಯೆಂದರೆ ಲಿಂಗಾಯತ ಧರ್ಮಕ್ಕೆ ಇಷ್ಟಲಿಂಗ ದೀಕ್ಷಾ ಸಂಸ್ಕಾರ ಎಂಬ ಒಂದು ಮಹಾದ್ವಾರ ಇದೆ. ಅದರ ಮೂಲಕ ಯಾರು ಬೇಕಾದರೂ ಒಳಗೆ ಪ್ರವೇಶಿಸಬಹುದು; ಆದರೆ ಹಿಂದೂ ಧರ್ಮದ ಸಂಗತಿ ಹಾಗಲ್ಲ; ಅದಕ್ಕೆ ಒಳಬರುವ ಬಾಗಿಲೇ ಇಲ್ಲ; ಇರೋದು ಒಂದೇ ಬಾಗಿಲು. ಅದು ಹೊರ ಹೋಗಲಿಕ್ಕೆ ಮಾತ್ರ. ಅದೊಂದು ರೀತಿಯ ಒನ್‌ವೇ ಇದ್ದಹಾಗೆ.

ಹಿಂದೂ ಧರ್ಮ ಶ್ರೇಣೀಕೃತವಾದ ಸಮಾಜ ವ್ಯವಸ್ಥೆಯನ್ನು ಹೊಂದಿದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರ ಮತ್ತು ಅಸ್ಪೃಶ್ಯರಾಗಿರುವ ಪಂಚಮರು ಎಂಬುದಾಗಿ ಸ್ತರಗಳನ್ನು ವಿಭಾಗಿಸಿರುವುದು ಮಾತ್ರವಲ್ಲದೆ ಆಯಾ ವರ್ಣದ ಸಂಸ್ಕಾರಗಳನ್ನು ಕೂಡ ಪ್ರತ್ಯೇಕಿಸಲಾಗಿದೆ. ಶೂದ್ರ ಹಾಗೂ ಪಂಚಮರಿಗೆ ಹಿಂದೂ ಧರ್ಮದಲ್ಲಿ ಯಾವುದೇ ರೀತಿಯ ಸಂಸ್ಕಾರ ಕೊಡುವ ಆಚಾರವಿಲ್ಲ, ಅಲ್ಲದೆ ಈ ಐದೂ ವರ್ಣದಲ್ಲಿರುವ ಮಹಿಳೆಯರಿಗೂ ಯಾವುದೇ ಸಂಸ್ಕಾರ ಕೊಡಲಾಗುವುದಿಲ್ಲ; ಇಡೀ ಮಹಿಳೆಯರನ್ನೇ ಒಟ್ಟಾರೆಯಾಗಿ ಶೂದ್ರರೆಂದು ಪರಿಗಣಿಸಲಾಗುತ್ತದೆ. ಹೀಗೆ ಅಸಮಾನತೆಯ ತಳಹದಿಯ ಮೇಲೆ ಹಿಂದೂ ಧರ್ಮ ನಿಂತಿದೆ.

ಆದರೆ ಲಿಂಗಾಯತ ಧರ್ಮ ಇದಕ್ಕೆ ತದ್ವಿರುದ್ಧ. ಲಿಂಗಾಯತ ಧರ್ಮದ್ದು ಅತಿ-ವರ್ಣಾಶ್ರಮ ಸಮಾಜ ಶಾಸ್ತ್ರ. ನಮ್ಮಲ್ಲಿ ಭೇದಭಾವಕ್ಕೆ ಆಸ್ಪದವಿಲ್ಲ. "ಅರಿದೊಡೆ ಶರಣ, ಮರೆದೊಡೆ ಮಾನವ" ಇವು ಎರಡೇ ವರ್ಗ. ಒಬ್ಬ ಅಜ್ಞಾನಿ, ಮತ್ತೊಬ್ಬ ಸುಜ್ಞಾನಿ. ಅಜ್ಞಾನಿಯಾಗಿರುವವನು ಜೀವನಪರ್ಯಂತ ಅಜ್ಞಾನಿಯಾಗಿರಬೇಕಿಲ್ಲ, ಆತನನ್ನು ಪರಿವರ್ತನೆ ಮಾಡಿ ಸುಜ್ಞಾನಿಯನ್ನಾಗಿಸಬೇಕು. ಇದೇ ಲಿಂಗಾಯತ ಧರ್ಮದ ಧ್ಯೇಯ. ಆದರೆ ಹಿಂದೂ ಧರ್ಮದಲ್ಲಿ ವ್ಯಕ್ತಿಯ ಸ್ಥಾನಮಾನ ಹುಟ್ಟಿನಿಂದಲೇ ತೀರ್ಮಾನವಾಗಿಬಿಡುತ್ತದೆ.

ಲಿಂಗಾಯತ ಧರ್ಮದಲ್ಲಿ ಬಹಳ ಪ್ರಮುಖವಾಗಿ ಒಂದು ಆರ್ಥಿಕ ಸಿದ್ಧಾಂತ ಇದೆ. "ಕಾಯಕವೇ ಕೈಲಾಸ, ದಾಸೋಹವೇ ದೇವಧಾಮ" ಎಂಬುದು. ಒಂದು



Theory of Production ಮತ್ತೊಂದು Theory of Distribution.

ಕಾಯಕವೇ ಕೈಲಾಸ ಎಂಬ ತತ್ವವನ್ನು ಸಾರಿ ವೃತ್ತಿ ಗೌರವ (**dignity of labour**) ವನ್ನು ಸಾರಿದ್ದು ಬಸವಣ್ಣನವರ ಒಂದು ಮಹತ್ವದ ಕೊಡುಗೆ; ಮಾತ್ರವಲ್ಲ ವೃತ್ತಿ ದೈವತ್ವವನ್ನು ಕೂಡ ಬೋಧಿಸಿದರು.

ಯಾವ ವೃತ್ತಿಯನ್ನು ಕೀಳು ಎಂದು ಭಾವಿಸಲಾಗಿತ್ತೋ, ಅಂಥಾ ವೃತ್ತಿಗಳೇ ದೇವರನ್ನು ಒಲಿಸಿಕೊಳ್ಳುವ ಸಾಧನ ಎಂದು ಸಾರಿ, ಕಾಯಕವೇ ಕೈಲಾಸ ಅಂತ ಬೋಧಿಸಿ, ಕಾಯಕಜೀವಿಗಳಿಗೆ ಸಮಾಜದಲ್ಲಿ ಗೌರವದ ಸ್ಥಾನಮಾನ ಕಲ್ಪಿಸಿಕೊಟ್ಟರು. ವಿದ್ಯೆ, ಪಾಂಡಿತ್ಯಗಳಿಗೆ ಮಾತ್ರ ಮನ್ನಣೆಯಿದ್ದ ಕಾಲದಲ್ಲಿ ಕಾಯಕಕ್ಕೆ ಒಂದು ಗೌರವಯುತವಾದ ಸ್ಥಾನಮಾನ ನೀಡಿದ್ದು ಬಸವಣ್ಣನವರ ಒಂದು ಕ್ರಾಂತಿಕಾರಿ ಕೊಡುಗೆ.

ಹೀಗೆ ಲಿಂಗಾಯತ ಧರ್ಮ 11 ವಿಶೇಷ ಲಕ್ಷಣಗಳಿಂದ ಕೂಡಿದೆ. ಹಾಗಾಗಿ ಲಿಂಗಾಯತ ಧರ್ಮ ಒಂದು ಸ್ವತಂತ್ರ ಧರ್ಮ; ಅದು ಯಾವ ಕಾರಣಕ್ಕೂ ಹಿಂದೂ ಧರ್ಮದ ಭಾಗವಲ್ಲ ಎಂಬುದನ್ನು ನಾವು ಮನಗಾಣಬೇಕು. ಅಸಮಾನತೆ, ಭೇದಭಾವಗಳೇ ಹಿಂದೂ ಧರ್ಮದ ತಳಹದಿಯಾಗಿದೆ. ತದ್ವಿರುದ್ಧವಾಗಿ ಸಮಾನತೆಯೇ ಲಿಂಗಾಯತ ಧರ್ಮದ ತಳಹದಿ.

ಲಂಕೇಶ್ : ವೀರಶೈವ ಹಾಗೂ ಲಿಂಗಾಯತ ಎರಡೂ ಒಂದೇ ಎಂಬ ಅಭಿಪ್ರಾಯವಿದೆಯಲ್ಲ?

ಮಾತೆ : ಹಿಂದೂ ಧರ್ಮದಲ್ಲಿ ವೇದಗಳನ್ನು ಆಧರಿಸಿದ ವೈದಿಕ ಹಾಗೂ ಆಗಮಗಳನ್ನು ಆಧರಿಸಿದ ಶೈವ ಎಂಬ ಎರಡು ಕೊಂಬೆಗಳಿವೆ. ಈ ವೀರಶೈವ ಅನ್ನೋದು ಶೈವ ಪಂಥದ ಒಂದು ಕವಲು. ಇದರ ಅನುಯಾಯಿಗಳು ಜೈನ ಬಸದಿಗಳಲ್ಲಿದ್ದ ಜೈನಮೂರ್ತಿಗಳನ್ನು, ವೈಷ್ಣವ ದೇಗುಲಗಳಲ್ಲಿದ್ದ ವಿಷ್ಣುವಿನ ಮೂರ್ತಿಯನ್ನು ಧ್ವಂಸಗೊಳಿಸಿ, ಬಲಪ್ರಯೋಗದಿಂದ ಶಿವನ ಮೂರ್ತಿ ಪ್ರತಿಷ್ಠಾಪಿಸಿದ ಪ್ರಸಂಗಗಳು ಇತಿಹಾಸದಲ್ಲಿವೆ. ಇಂಥಾ ವೀರಶೈವ ಪಂಥ ಬಸವಣ್ಣನವರಿಗೂ ಪೂರ್ವದಲ್ಲಿ ಅಸ್ತಿತ್ವದಲ್ಲಿತ್ತು.

ಆದರೆ ಶರಣರು ದೇವಸ್ಥಾನಗಳ ಗೋಜಿಗೇ ಹೋಗಲಿಲ್ಲ, ಅವರು ಜನರಿಗೆ ದೇಹವೇ ದೇಗುಲ ಅಂತ ಬೋಧಿಸಿದರು. ದೇವಸ್ಥಾನಗಳಿಗೆ ಹೋಗಬೇಡಿ, ಅವು ಜಾತಿಭೇದ, ವರ್ಣಭೇದ ಮಾಡುವ ಕೇಂದ್ರಗಳು ಅಂತ ಘೋಷಿಸಿದರು. ಲಿಂಗಾಯತ ಧರ್ಮ ಹಿಂದೂ ಪುರಾಣಗಳಲ್ಲಿ ಬರುವ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಪೂಜಿಸುವುದಿಲ್ಲ.

1904ರಲ್ಲಿ ಹಾನಗಲ್ ಕುಮಾರಸ್ವಾಮಿ ಎಂಬ ವ್ಯಕ್ತಿ ದುರುದ್ದೇಶಪೂರ್ವಕವಾಗಿ ವೀರಶೈವ ಮಹಾಸಭಾ ಎಂಬುದನ್ನು ಸ್ಥಾಪಿಸಿದರು. ವೈದಿಕ ಆಚಾರ-ವಿಚಾರಗಳನ್ನು ಲಿಂಗಾಯತರ ಮೇಲೆ ಹೇರಿ, ಬಸವಣ್ಣನನ್ನು ನಿರಾಕರಿಸುವುದು, ಹಿಂದೂ ಧರ್ಮ ಬೋಧಿಸಿರುವ ಅಸಮಾನತೆಯನ್ನು ಆಚರಿಸುವುದು ಇದರ ಹಿಂದಿನ ಕುತರ್ಕ. ವೀರಶೈವ ಎಂಬುದು ಒಂದು ಪರಾವಲಂಬಿ ಸಸ್ಯವಿದ್ದಂತೆ, ಈ ಸಸ್ಯ ಲಿಂಗಾಯತ ಎಂಬ ಮರವನ್ನು ಅಪ್ಪಿಕೊಂಡು ಬೆಳೆದು ಮರವನ್ನೇ ನಾಶಮಾಡಲು ಹೊರಟಿದೆ.

ಲಿಂಗಾಯತ-ವೀರಶೈವ ಎರಡೂ ಒಂದೇ ಎಂಬ ವಾದದ ಹಿಂದೆ ವೈದಿಕಶಾಹಿಯ ಸಂಚು, ಪಂಚಾಚಾರ್ಯರ ಕೈವಾಡ ಇದೆ. ಪರಿಣಾಮವಾಗಿ ಪರಸ್ಪರ ತದ್ವಿರುದ್ಧವಾದ ವಿಚಾರಗಳನ್ನು ಕಲಸುಮೇಲೋಗರ ಮಾಡಿ ಸಮಾಜದಲ್ಲಿ ಭಾರೀ ಗೊಂದಲ ನಿರ್ಮಿಸಿದ್ದಾರೆ. ಈ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ತುರ್ತಾಗಿ ಆಗಬೇಕಿದೆ.

ಲಂಕೇಶ್ : ಲಿಂಗಾಯತರನ್ನು ವೀರಶೈವ ಜಾತಿಯಾಗಿ ಗುರುತಿಸಿದ್ದರಲ್ಲಿ ಸರ್ಕಾರದ ಪಾತ್ರವಿದೆಯೆ?

ಮಾತೆ : ಖಂಡಿತಾ ಇದೆ. ಉದಾಹರಣೆಗೆ, 2003ರಲ್ಲಿ ಕರ್ನಾಟಕ ಸರ್ಕಾರ ಒಂದು ಸುತ್ತೋಲೆ ಹೊರಡಿಸಿತು. ಇದನ್ನು ಯಾರು ಹೊರಡಿಸಿದರು, ಯಾಕೆ ಹೊರಡಿಸಿದರು ಎಂಬುದು ತುಂಬಾ ನಿಗೂಢವಾಗಿದೆ. ಆ ಸುತ್ತೋಲೆಯ ಪ್ರಕಾರ, ಲಿಂಗಾಯತ ಅಂತ ಸರ್ಟಿಫಿಕೇಟ್ ಕೋರಿ ತಹಸೀಲ್ದಾರ್‌ರಿಗೆ ಅರ್ಜಿ ಸಲ್ಲಿಸಿದರೆ ಅವರಿಗೆ 'ವೀರ ಲಿಂಗಾಯತ' ಅಂತ ಸರ್ಟಿಫಿಕೇಟ್ ಕೊಡ್ತಾ ಇದಾ

ಇದು ಒಂದು ದೊಡ್ಡ ಸಂಚು. ಒಂದು ಲಿಂಗಾ ಮತ್ತು ವೀರಶೈವ ಎರಡೂ ಒಂದೇ ಎಂಬ ಗೊ ಮೂಡಿಸುವುದು ಇದರ ಹಿಂದಿನ ಹುನ್ನಾರ. ಇ ವಿರೋಧಿಸಿ ಬೈಲಹೊಂಗಲದ ವೀರೇಶ್ ಹಲ್ಕಿ ನಮ್ಮ ಶಿಷ್ಯರೊಬ್ಬರು ಹೈಕೋರ್ಟ್‌ನಲ್ಲಿ ದಾವೆ ಹೂಡಿ ಲಿಂಗಾಯತ ಜಾತಿ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಿದ ಲಿಂಗಾಯತ ಅಂತ ಪ್ರಮಾಣಪತ್ರ ಕೊಡಬೇಕೇ ಹೊ ವೀರಶೈವ ಅಂತ ಸೇರಿಸಬಾರದು ಅಂತ ಹೈಕೋ ನಿರ್ದೇಶನ ಕೊಟ್ಟಿದೆ. ಸುತ್ತೋಲೆ ವಾಪಸ್ ತೆಗೆದು ಬೇಕೆಂಬ ಹೋರಾಟವನ್ನು ಮುಂದುವರೆಸಿದ್ದೇವೆ.

ಲಂಕೇಶ್ : ಸಮಾನತೆಯ ತತ್ವದ ಆಧಾರದಲ್ಲಿ ತಳೆದ ಲಿಂಗಾಯತದ ಅನುಯಾಯಿಗಳೇ ಇಂದು ತ ಮೇಲ್ಜಾತಿ ಎಂದು ಭಾವಿಸುತ್ತಾ ಹಿಂದುಳಿದ, ದ ಬಗ್ಗೆ ಜಾತಿಭೇದ ಆಚರಿಸುತ್ತಿದ್ದಾರಲ್ಲಾ?

ಮಾತೆ : ಇದು ದುರದೃಷ್ಟಕರವಾದುದು. ಗುರು ಬಸವಣ್ಣ ಮುಂತಾದವರ ಬೋಧನೆಗಳ ಅರಿ ಅಜ್ಞಾನದಿಂದ ಬಂದಿರುವ ಆಚರಣೆ. ಶರಣರ ಬೋಧ ಬಗ್ಗೆ ಇರುವ ಅಜ್ಞಾನವೇ ಇದಕ್ಕೆ ಕಾರಣ. ಇ ಅಜ್ಞಾನವನ್ನು ತೊಡೆದು ಹಾಕಿ, ಲಿಂಗಾಯತ ಧರ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ನಡೆಯಬೇಕಾ

ಈ ಪರಿಸ್ಥಿತಿಗೆ ಐತಿಹಾಸಿಕ ಕಾರಣಗಳಿವೆ. ಕುತಂತ್ರ ನಡೆಸಿದ ವೈದಿಕಶಾಹಿಗಳು ಶರಣರ ಕ್ರಾಂತಿ ಚಳವಳಿಯನ್ನು ಬಿಜ್ಜಳನ ಸೈನ್ಯದ ಮೂಲಕ ನಾಶಪಡಿಸಿ ಭಾರೀ ಪ್ರಮಾಣದಲ್ಲಿ ವಚನಸಾಹಿತ್ಯವನ್ನು ನಾಶಪಡಿಸಿ ಇಂಥಾ ಸಂದಿಗ್ಧ ಪರಿಸ್ಥಿತಿಯಲ್ಲಿ ಶರಣ ಸಾಹಿತ್ಯ ಕಾಪಾಡಲೆಂದು, ಕಾಡುಮೇಡುಗಳಲ್ಲಿ ಅಲೆದ ಶರ ಗುಡ್ಡ-ಗವಿಗಳಲ್ಲಿ ಅವನ್ನು ಸಂರಕ್ಷಿಸಿಟ್ಟರು. ಕೇವಲ ಒ ಶತಮಾನದ ಹಿಂದೆಯಷ್ಟೆ ಫ.ಗು.ಹಳಕಟ್ಟಿಯ ವಿದ್ವಾಂಸರ ವಿಶೇಷ ಪ್ರಯತ್ನದಿಂದ ಶರಣ ಸಾಹಿತ್ಯ ಹೆ ಬೆಳಕಿಗೆ ಬಂದಿದೆ. ಕ್ರಮೇಣ ವಚನಸಾಹಿತ್ಯದ ಕ್ರಾಂತಿ ವಿಚಾರಗಳು ಸಮಾಜದಲ್ಲಿ ಹೆಚ್ಚುಹೆಚ್ಚಾಗಿ ಸ್ವೀಕೃತವಾಗು

ಲಿಂಗಾಯತ ಎಂಬುದು ಒಂದು ಜಾತಿಯಲ್ಲ; ಒ ಧರ್ಮ ಎಂಬ ಜಾಗೃತಿ ಕ್ರಮೇಣ ಹೆಚ್ಚಾಗುತ್ತಿದೆ. ಹೀ ಅನೇಕ ಮಠಾಧಿಪತಿಗಳು, ಹಿಂದುಳಿದ ವರ್ಗದ ವಿಚಾರವಾದಿಗಳು ಹಾಗೂ ವೈಚಾರಿಕ ಜಾಗೃತಿ ಮೂಡಿ ಕೆಲವು ರಾಜಕಾರಣಿಗಳೂ ಸಹ ನಮ್ಮ ಹೋರಾಟ ಜೋಡಿಸ್ತಾ ಇದಾರೆ, ಆರ್ಥಿಕ ನೆರವೂ ಕೂಡ ಕೆ ಇದಾರೆ. ದಿನೇದಿನೇ ನಮ್ಮ ಕೆಲಸ ಹೆಚ್ಚೆಚ್ಚು ಜ ತಲುಪುತ್ತಿದೆ. ಇದು ಸಂತೋಷದ ವಿಷಯ.

ಲಂಕೇಶ್ : ಈ ಮಹತ್ತರ ಉದ್ದೇಶಕ್ಕಾಗಿ ಪೀಠಾಧಿಪತಿಗಳನ್ನು ಒಂದು ಮಾಡುವುದು ಏಕೆ ಸಾಧ್ಯ


ಮಾತೆ : ಜನಸಾಮಾನ್ಯರನ್ನು ತಿದ್ದಬಹುದು. ಮಠಾಧಿಪತಿಗಳನ್ನು ತಿದ್ದುವುದು ಸಾಧ್ಯವೇ ಇಲ್ಲ, ಅದ ಈ ಪಂಚಾಚಾರ್ಯರಿದ್ದಾರಲ್ಲಾ, ಅವರು ಅಪ್ಪಟ ವೈದಿ ಅವರೆಂದಿಗೂ ನಮ್ಮೊಂದಿಗೆ ಒಂದಾಗುವ ಸಾಧ್ಯವೇಯಿಲ್ಲ. ಸಮಾಜದಲ್ಲಿ ವೈಚಾರಿಕ-ಧಾರ್ಮಿಕ ಜ ಮೂಡಿಸುವುದಕ್ಕಿಂತ ಶ್ರೀಮಂತ ಭಕ್ತರು ಕೊ ಕಾಣಿಕೆಯೇ ಅವರಿಗೆ ಮುಖ್ಯ. ಕಾಣಿಕೆ ಬರುತ್ತೆ ಅ ಅವರು ಹೋಮವನ್ನೂ ಮಾಡಿಸ್ತಾರೆ, ಗಣಪತಿ ಪ ನವಗ್ರಹ ಪೂಜೆ ಎಲ್ಲ ಮಾಡಿಸ್ತಾರೆ. ಅವರಿಗೆ ಪರಂಪರೆಯ ಬಗ್ಗೆ ತಿಳಿದೂ ನಿದ್ದೆ ಮಾಡುವವ ನಟಿಸುತ್ತಿದ್ದಾರೆ. ಹೀಗೆ ನಟಿಸುವವರನ್ನು ಎಬ್ಬಿಸು ಸಾಧ್ಯವಿಲ್ಲದ ಮಾತು.

ತಾವು ಮಾಡುತ್ತಿರುವುದು ಬಸವಣ್ಣನ ಬೋಧನ ತದ್ವಿರುದ್ಧವಾಗಿದೆ ಅಂತ ಅವರಿಗೆ ಚೆನ್ನಾಗಿ ಗೊತ್ತು, ಅ ಅದರ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಿದ್ದಾರೆ. ಆದ ಅವರಿಗೆ ನಾವು ಹೇಳೋದು ಇಷ್ಟೆ. ನೀವು ನಮ್ಮೊ ಒಂದಾಗೋದು ಬೇಡ – ಸ್ಪಷ್ಟವಾಗಿ ಬೇರೆಯಾಗಿ

ವೈಜ್ಞಾನಿಕ ಆಚರಣೆ: ಧರ್ಮದ ಮೂಲಚಿಂತನೆ

ಜನರನ್ನು ಸಾತ್ವಿಕಗೊಳಿಸುವಲ್ಲಿ ಧರ್ಮದ ಪಾತ್ರ. ...ನಾಗರಿಕನನ್ನು ನಾಗರಿಕನನ್ನಾಗಿಸಲು ಮಾನವ ಸಮುದಾ...ವು ತನಗೆ ಬೇಕಾದ ಧರ್ಮವನ್ನು ಸೃಷ್ಟಿಸಿಕೊಂಡಿದೆ. ...ರ್ಮದ ಸುತ್ತ ಅನೇಕ ವಿಧವಾದ ಸಂಪ್ರದಾಯಗಳು ...ಷ್ಟಿಯಾಗಿವೆ. ಜಮೀನಿನಲ್ಲಿ ಅಲಕ್ಷ್ಯತನದಿಂದಾಗಿ ಕಳೆಯು ...ೆದು ನಿಲ್ಲುತ್ತದೆ. ಕಳೆಯಿಂದಾಗಿ ನಿರೀಕ್ಷಿತ ಬೆಳೆಯು ...ಯುವುದಿಲ್ಲ. ಬೆಳೆಯನ್ನು ದುರ್ಬಲಗೊಳಿಸಿ ಕಳೆಯು ...ೆದುಬಿಡುತ್ತದೆ. ಅದರ ಪ್ರಕಾರ ಧರ್ಮವೆಂಬ ...ಮಿಯಲ್ಲಿ ಅಂಧಶ್ರದ್ಧೆ-ಮೂಢನಂಬುಗೆಯ ಹೆಸರಿನಲ್ಲಿ ...ಪ್ರದಾಯಗಳು. ಒಮ್ಮೊಮ್ಮೆ ಗೊಡ್ಡು ಸಂಪ್ರದಾಯಗಳೇ ...ರ್ಮವೆನಿಸಿಕೊಂಡುಬಿಡುತ್ತವೆ. ಧರ್ಮವು ಮೂಲೆಗೆ ...ಲ್ಪಟ್ಟು ಅಂಧಶ್ರದ್ಧೆಯು ವಿಜೃಂಭಿಸುತ್ತದೆ. ಸಮಾಜದಲ್ಲಿ ...ಟಾಗುವ ಸಂಪ್ರದಾಯಗಳನ್ನು ನಿವಾರಿಸಲು ಸಮಾಜ ...ಧಾರಕರು ಆಯಾ ಕಾಲದಲ್ಲಿ ಪ್ರಯತ್ನಿಸುತ್ತಾರೆ. ...ಹಾವೀರ, ಗೌತಮ ಬುದ್ಧ, ಏಸು ಕ್ರಿಸ್ತ, ಪೈಗಂಬರ, ...ೀರದಾಸ, ರಮಣ ಮಹರ್ಷಿ, ನಾರಾಯಣಗುರು, ...ದಾಸ, ಗುರು ನಾನಕ, ಅನಿಬೆಸೆಂಟ್ ಮೊದಲಾದವರು ...ಮಾಜ ಸುಧಾರಣೆಯನ್ನು ತಮ್ಮದೇ ಆದ ವಿಧಾನದಲ್ಲಿ ...ಡಿದ್ದಾರೆ.

ಇವರೆಲ್ಲರ ಮುಖ್ಯವಾದ ಧ್ಯೇಯವೆಂದರೆ, ಪರಿವರ್ತನೆ. ಒಂಬೈನೂರು ವರ್ಷಗಳ ಹಿಂದೆ ಬಸವಾದಿ ಶರಣರು ...ಮಾಜಿಕ ಅಸಮಾನತೆಯನ್ನು ತೊಡೆಯುವ ನಿಟ್ಟಿನಲ್ಲಿ ...ಂತಿಯನ್ನು ನಡೆಸಿದರು. ಅಂದು ವರ್ಣ, ವರ್ಗ, ಜಾತಿ, ...ಗ ಮತ್ತು ವಯೋಭೇದಗಳೆಂಬ ಪಂಚಭೇದಗಳು ...ಲ್ತಿಯಲ್ಲಿದ್ದವು. ಪಂಚಭೇದಗಳ ನಿವಾರಣೆಯೇ ಅವರ ...ದೋಲನದ ಉದ್ದೇಶವಾಗಿತ್ತು. ಇದರೊಂದಿಗೆ ...ಢನಂಬುಗೆಗಳ ಮೂಲೋತ್ಪಾಟನೆಗೆ ಎಲ್ಲ ಪ್ರಯತ್ನ ...ಡಿದರು; ಖಂಡಿಸಿದರು. ದೇವರು - ಧರ್ಮದ ಹೆಸರಲ್ಲಿ ...ಯುತ್ತಿದ್ದಂತಹ ದೇವದಾಸಿ ಪದ್ಧತಿ, ಜೀತಪದ್ಧತಿ ...ದಲಾದ ಅವೈಜ್ಞಾನಿಕ ಆಚರಣೆ. ಇವುಗಳ ವಿರುದ್ಧ



ಹೋರಾಡಬೇಕಾದ ಹೊಣೆಗಾರಿಕೆಯು ಧಾರ್ಮಿಕ ಮುಖಂಡರ ಮೇಲಿದೆ. ಅನಿಷ್ಟ ಪದ್ಧತಿಗಳ ವಿಮೋಚನೆ. ವಿಮೋಚನೆ ಮಾಡಬೇಕಾಗಿರುವ ಹಂತದಲ್ಲಿ ಶೋಷಣೆ. ಮುಗ್ಧ ಭಕ್ತರ ಶೋಷಣೆ. ವರದಕ್ಷಿಣೆ, ಬಾಲ್ಯವಿವಾಹ ಪದ್ಧತಿ, ಜಾತ್ರೆಯಲ್ಲಿ ನೆರವೇರುವ ಪಶುಬಲಿ, ವಾಮಾಚಾರ, ಮಾಟ-ಮಂತ್ರ, ಬಾನಾಮತಿ, ಲಿಂಗತಾರತಮ್ಯ, ಅನಕ್ಷರತೆ, ಅನಾಗರಿಕತೆ, ಅಮಾನವೀಯತೆ, ಜಾತೀಯತೆ ಇವುಗಳ ವಿರುದ್ಧ ಸಮರ ಸಾರಬೇಕಾಗಿರುವ ಧಾರ್ಮಿಕರು - ಸಾಧಕರು ಕೇವಲ ಧಾರ್ಮಿಕವಾದ ಆಚರಣೆಗಳಿಗೆ ಸೀಮಿತವಾಗಬಾರದು. ಅವೈಜ್ಞಾನಿಕವಾದ ಆಚರಣೆಗಳಿಗೆ ಒತ್ತು ಕೊಟ್ಟರೆ ಧಾರ್ಮಿಕ ನಿಷ್ಕ್ರಿಯತೆ ಎದ್ದುಕಾಣುತ್ತದೆ.

ನಾವುಗಳು ಅತ್ಯಾಧುನಿಕ ಜಗತ್ತಿನಲ್ಲಿ ಜೀವನ ನಡೆಸುತ್ತಿದ್ದೇವೆ. ಆಧುನಿಕ ಜಗತ್ತಿನ ಎಲ್ಲ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿರುವುದನ್ನು ಕಾಣಬಹುದು. ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರಗಳಿಂದಾಗಿ ಏನೆಲ್ಲ ಸುಧಾರಣೆ. ಮಕ್ಕಳು ಶಾಲೆಗಳಲ್ಲಿ ಕಂಪ್ಯೂಟರ್ ಮುಖಾಂತರ ಕಲಿಯುವ ಅತ್ಯಾಧುನಿಕ ಪದ್ಧತಿ ಬಳಕೆಯಾಗುತ್ತಿದೆ. ಸಂಪರ್ಕ ಜಾಲ (ಇಂಟರ್‌ನೆಟ್) ಎಲ್ಲೆಡೆ ಚಾಚಿಕೊಂಡಿದೆ. ಒಂದೇಕ್ಷಣದಲ್ಲಿ ಜಗತ್ತಿನ ಯಾವುದೇ ಮೂಲೆಯಲ್ಲಿ ಏನೇ ಘಟನೆ ನಡೆದರೂ ಅದರ ಮಾಹಿತಿ. ಸುಧಾರಿತವಾದ ಸಾಧನ-ಸಲಕರಣೆಗಳು. ಬದಲಿ ಮೂತ್ರಕೋಶದ ಜೋಡಣೆ, ಕಣ್ಣಿನ ಬದಲಾವಣೆ, ಹೃದಯದ ತೊಂದರೆಗೆ ಇನ್ನೊಂದು ಹೃದಯದ ಜೋಡಣೆ, ಹೃದಯ ತೊಂದರೆಯಿಂದ ಸತ್ತ ವ್ಯಕ್ತಿಯನ್ನು ಮತ್ತೆ ಬದುಕಿಸುವಷ್ಟು ವೈಜ್ಞಾನಿಕ ಪ್ರಗತಿ.

ಧಾರ್ಮಿಕ ಮಠ-ಪೀಠಗಳನ್ನು ಅಲಂಕರಿಸುವುದೇ ಮುಖ್ಯ ಅಲ್ಲ, ಅದರ ಮುಖಾಂತರ ಸಾಮಾಜಿಕ ಸುಧಾರಣೆ ಮತ್ತು ಸಾರ್ವಜನಿಕ ಕ್ಷೇತ್ರದಲ್ಲಿ ಪರಿವರ್ತನೆಯನ್ನು ತರಬೇಕಾಗಿರುವುದು ಇಂದಿನ ಧಾರ್ಮಿಕರ ಮುಖ್ಯ ಜವಾಬ್ದಾರಿ. ಇಂಥ ಪರಿವರ್ತನೆಗಾಗಿಯೇ ಸಿದ್ಧಾರ್ಥ ಮನೆಯನ್ನು ಬಿಟ್ಟ. ಬೀದಿಗೆ ಬಂದು, ಒಬ್ಬ ಭಿಕ್ಷುಕನಂತೆ ಗುರುತಿಸಿಕೊಳ್ಳುತ್ತ ಅವನು ಅನುಭವಿಸುವ ಎಲ್ಲ ಕಷ್ಟಗಳನ್ನು ತಾನು ಅನುಭವಿಸಿ, ಮಹಾಭಿಕ್ಷುವಾದ. ಸ್ತ್ರೀಸಮಾನತೆ ಮತ್ತು ಸಾಮಾಜಿಕ ಸಮಾನತೆಗಾಗಿ ಬಸವಣ್ಣ ತಂದೆ-ತಾಯಿಗಳನ್ನು, ಜಾತಿಯನ್ನು, ಮನೆಯನ್ನು ತೊರೆದ. ಅರಮನೆಯಲ್ಲಿ ಅಷ್ಟೈಶ್ವರ್ಯ ಮತ್ತು ಭೋಗದ ಬದುಕನ್ನು ನಡೆಸಬಹುದಾಗಿದ್ದ ಅಕ್ಕಮಹಾದೇವಿಯು ಅದನ್ನೆಲ್ಲ ಗಾಳಿಗೆ ತೂರಿ, ಕಲ್ಯಾಣಕ್ಕೆ ಬಂದು, ಸಾತ್ವಿಕ ಜೀವನ ನಡೆಸುತ್ತ ವಚನಕಾರ್ತಿ ಎನಿಸಿಕೊಂಡಳು. ಮೀರಾಬಾಯಿಯು ಆಧ್ಯಾತ್ಮಿಕ ಆನಂದವನ್ನು ಹುಡುಕುತ್ತ ಎಲ್ಲವನ್ನು ತೊರೆದಳು. ಅಹಿಂಸಾವಾದಿ ಮಹಾವೀರರು ವಿರಾಗ ಜೀವನಕ್ಕೆ ಒಳಗಾಗಿ, ತ್ಯಾಗಿಯೆಂದು ಕರೆಸಿಕೊಂಡರು. ಕನಕದಾಸರು ಕನಕ-ಕಾಂಚಾಣದೊಂದಿಗೆ ಬದುಕಬಹುದಿತ್ತು, ಅದನ್ನೆಲ್ಲ ತೊರೆದು ಊರೂರು ತಿರುಗುತ್ತ, ಸಂಕೀರ್ತನೆಗಳನ್ನು ಕಟ್ಟಿ ಹಾಡುತ್ತ ಜನರ ವಿವೇಕವನ್ನು ಜಾಗೃತಿಗೊಳಿಸುತ್ತ ಸಾಗಿದರು. ಅಲ್ಲಮನು ವಿಲಾಸವನ್ನು ಅನುಭವಿಸಬಹುದಿತ್ತು, ಲೋಕಾನುಭವಕ್ಕಾಗಿ ವೈಯಕ್ತಿಕ ಸುಖವನ್ನು ನೀಗಿ ಹೊರಬಂದ. ಅನುಭಾವಿಯೆಂದು ಕರೆಸಿಕೊಂಡ. ನಿಜಗುಣ ಶಿವಯೋಗಿಯ ಬದುಕು ಇಲ್ಲಿ ಸ್ಮರಣೀಯ. ಇವರಂತೆ ತೊರೆದುಹೋಗುವ ಪರಿಸ್ಥಿತಿಯು ಇಂದಿನ ಮಠಾಧೀಶರಿಗೆ ಇರುವುದಿಲ್ಲ, ಕೊನೆಯ ಪಕ್ಷ, ಅವೈಜ್ಞಾನಿಕ ಆಚರಣೆಗಳನ್ನಾದರು ತೊರೆಯಬಹುದು.

ಈಗಲೂ ಕಾಲ ಮಿಂಚಿಲ್ಲ. ಸಂದರ್ಭವನ್ನು ಕಳೆದುಕೊಂಡರೆ ಅಂಥವರನ್ನು ಕಾಲವೆಂಬ ಮಹಾಜ್ಞಾನಿಯು ಪಳಿಗಿಸುತ್ತದೆ.


ನಮ್ಮ ಶ್ರೀಮಠದ ಪರಂಪರೆಯಲ್ಲಿ 60ಕ್ಕೂ ಹೆಚ್ಚು ಬಿರುದಾವಳಿಗಳು, ಬೆಳ್ಳಿಯ ಸಿಂಹಾಸನ, ಮೈಸೂರು ಮಹಾರಾಜರ ರೀತಿಯಲ್ಲಿ ಅಂಬಾರಿ, ಬೆಳ್ಳಿಯ ಪಲ್ಲಕ್ಕಿ, ಚಿನ್ನದ ಕಿರೀಟ, ಮಕರ ತೋರಣ ಮುಂತಾದವುಗಳು ಇದ್ದಾಗ್ಯೂ, ಅವನ್ನೆಲ್ಲ ಬಳಸುವುದನ್ನು ೨೩ ವರ್ಷಗಳ ಹಿಂದೆಯೇ ಕೈಬಿಡಲಾಗಿದೆ. ಅವುಗಳನ್ನು ಮ್ಯೂಸಿಯಂನಲ್ಲಿಟ್ಟು, ಬಂದವರು ನೋಡಿಕೊಂಡು ಹೋಗಲು ವ್ಯವಸ್ಥೆ ಮಾಡಲಾಗಿದೆ. ಪ್ರಗತಿಪರವಾಗಿ ಆಲೋಚಿಸುವ ಕೆಲ ಮಠಾಧೀಶರು ಮಾನವರ ಹೆಗಲಮೇಲೆ ಹೊರೆಸಿಕೊಂಡು ಹೋಗುವ ಪದ್ಧತಿಯನ್ನು ತ್ಯಜಿಸಿ, ಸರಳವಾಗಿದ್ದಾರೆ.

ಇಂಥ ಒಂದು ಆಚರಣೆ ಇಂದು ಸಂಘರ್ಷಕ್ಕೆ ಅವಕಾಶ ನೀಡಿದೆ. ನಾಡಿನಲ್ಲಿ ವೈಚಾರಿಕ ಸಂಘರ್ಷವು ನಡೆಯಬೇಕಾಗಿತ್ತು, ಸಣ್ಣ ವಿಚಾರಗಳು ಹೆಚ್ಚು ಮಹತ್ವ ಪಡೆಯುತ್ತಿವೆ. ಪ್ರತಿಷ್ಠೆಯು ಯಾವಾಗಲು ಮಾದರಿ ಅಲ್ಲ, ತತ್ವನಿಷ್ಠೆಯೇ ಅನುಸರಣೆಗೆ ಸೂಕ್ತ, ವ್ಯಕ್ತಿನಿಷ್ಠೆಯು ಕ್ರಮೇಣ ತತ್ವನಿಷ್ಠೆಯತ್ತ ತಿರುಗಬೇಕಾಗಿದೆ. ಇದು ಪ್ರಬುದ್ಧರ ನಿರ್ಧಾರ, ಬದ್ಧತೆಯೇ ಬದುಕಿನ ಸಾರ. ಹೀಗಿಲ್ಲದ ಬದುಕು ನಿಸ್ಸಾರ.

ಡಾ. ಶಿವಮೂರ್ತಿ ಮುರುಘಾ ಶರಣರು,

ಶ್ರೀ ಮುರುಘಾಮಠ, ಚಿತ್ರದುರ್ಗ

ಜಾತಿ ಜಂಗಮರಿಂದ ಲಿಂಗಾಯತರ ಬಿಡುಗಡೆಗೆ ಜೇವರ್ಗಿಯ ನೆಲ ಸಾಕ್ಷಿಯಾಗಲಿದೆಯೆ?



ಅಡ್ಡಪಲ್ಲಕ್ಕಿಯ ಉತ್ಸವಕ್ಕೆ ವಿರೋಧವಾಗಿ ನಾಯಿಯನ್ನು ...ಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಿಸುತ್ತೇವೆ ಎಂಬ ...ವಿಚಾರವಾದಿಗಾರರು ಪತ್ರಿಕಾ ಹೇಳಿಕೆ ನೀಡಿದಂದಿನಿಂದ ...ನಿತ್ಯವೂ ಜೇವರ್ಗಿ ಹೊಸ ವಿದ್ಯಮಾನಗಳಿಂದ ಗಮನ ...ಯುತ್ತಿದೆ. ಷಣ್ಮುಖ ಶಿವಯೋಗಿಗಳ ಬಳಗ ಹಾಗೂ ...ಡ್ಡಪಲ್ಲಕ್ಕಿ ಉತ್ಸವ ಸಮಿತಿಗಳು ತುರುಸಿನಿಂದ ...ರ್ಯಕ್ರಮಗಳನ್ನು ಆಯೋಜಿಸಿವೆ. ಆರಂಭದ ಒಂದೆರಡು ...ನ ಜನಗಳೇ ಇಲ್ಲದೆ ಕಂಗಾಲಾಗಿದ್ದ ದಸರಾ ದರ್ಬಾರ ...ಡೆಸುವ ಮಂದಿ ಹಮ್ಮಿಗೆ ಬಿದ್ದು ಹಳ್ಳಿ-ಹಳ್ಳಿಗೆ ಹೋಗಿ ...ಜನರನ್ನು ಕರೆತರುತ್ತಿದ್ದಾರೆ. ದಸರಾ ದರ್ಬಾರ್ ಸಭೆಯ ...ಉದ್ಘಾಟನೆಗೆ ಬರಬೇಕಾಗಿದ್ದ ಕೇಂದ್ರ ರೈಲ್ವೆ ಸಚಿವ ...ಮಲ್ಲಿಕಾರ್ಜುನ ಖರ್ಗೆ, ಮಾಜಿ ಮುಖ್ಯಮಂತ್ರಿ ಧರ್ಮ...ಸಿಂಗ್, ಶಾಸಕ ಅಜಯ ಸಿಂಗ್, ಎಂ.ಎಲ್.ಸಿ. ಅಲ್ಲಮಪ್ರಭು ...ಪಾಟೀಲ, ಮಾಜಿ ಶಾಸಕ ದೊಡ್ಡಪ್ಪಗೌಡ ನರಬೋಳಿ ...ಮುಂತಾದವರ ಗೈರುಹಾಜರಿ ಷಣ್ಮುಖ ಶಿವಯೋಗಿಗಳ ...ಅನುಭಾವ ಪ್ರವಚನಕ್ಕೆ ನೈತಿಕ ಬೆಂಬಲ ನೀಡಿದಂತಾಗಿದೆ. ...ಘಟಾನುಘಟಿ ನಾಯಕರಿಲ್ಲದೆ ಕಂಗಾಲಾದ ದರ್ಬಾರ್ ...ಉತ್ಸವ ಸಮಿತಿ ಹಾಗೂ ರಂಭಾಪುರಿ ಸ್ವಾಮಿಯ ...ಪ್ರಭಾಬಲ ಉಡುಗಿ ಹೋಗಿ ಕಳಾಹೀನ ಮುಖವಿಟ್ಟು ...ಕೊಂಡು ಕಾರ್ಯಕ್ರಮ ನಡೆಸಿದ್ದಾರೆ.

ದರ್ಬಾರ್ ಉತ್ಸವ ಸಮಿತಿಯೆ ಡಮ್ಮಿ. ಅಲ್ಲಿ ಏನಿದ್ದರೂ ...ರಂಭಾಪುರಿ ಸ್ವಾಮಿ ಹೇಳಿದಂತೆಯೆ ಎಲ್ಲವೂ ನಡೆಯಬೇಕು. ...ವರ ಮಠದಿಂದ ಬಂದ ಒಕ್ಕಣೆಯ ಅನುಸಾರವೇ ಎಲ್ಲಾ ...ಡೆದಿದೆ. ಕಾರ್ಯಕಾರಿ ಸಮಿತಿಯ ಮಾತಿಗೆ ಅಲ್ಲಿ ಬೆಲೆ ...ಎಂಬುದೇ ಇಲ್ಲ ಎಂದು ಹೇಳುವ ಮೂಲಕ ಕೇದಾರ ...ರಗಳು, ಹಿರೇಮಠ ಅದರಿಂದ ದೂರ ಉಳಿದಿದ್ದಾರೆ. ...ವರೆ ಧಗ ಧಗ ಹತ್ತಿ ಉರಿಯುವ ಬೆಂಕಿಯಲ್ಲಿಯೆ ...ತಮ್ಮ ಮುಂದಿನ ರಾಜಕೀಯ ಭವಿಷ್ಯವನ್ನು ರೂಪಿಸಿಕೊಳ್ಳ...ಬೇಕೆಂಬ ದುರುದ್ದೇಶದಿಂದ, ಪೀಠ ಪರಂಪರೆಯ ...ಆಚಾರಗಳನ್ನು ಇಷ್ಟ ಪಡದಿದ್ದರೂ ಜೈ ಹರಾಕ್ ಹಾಕುತ್ತ ...ದರ್ಬಾರ್ ಗುಂಪಿನ ಜೊತೆ ಮಿಳಿತಗೊಂಡಿದ್ದಾರೆ.

ದರ್ಬಾರ್ ಗುಂಪಿನ ಯಾವೊಂದು ಚಟುವಟಿಕೆಗಳಿಗೆ ...ತಲೆಕೆಡಿಸಿಕೊಳ್ಳದ ಬಸವತತ್ವ ಅನುಯಾಯಿಗಳು ...ನಿತ್ಯ 6-30 ರಿಂದ 7-30 ರವರೆಗೆ ತಮ್ಮ ಶರಣರ ...ಅನುಭಾವ ಪ್ರವಚನ ಮಾಲಿಕೆಯ ಪ್ರವಚನವನ್ನು ಸಾಂಗವಾಗಿ ...ನಡೆಸಿಕೊಂಡು ಹೋಗುತ್ತಿದ್ದಾರೆ. ಶರಣರ ವೈಚಾರಿಕ-ವೈಜ್ಞಾನಿಕ ...ವಿಚಾರಗಳನ್ನು ಸರಳೀಕರಿಸಿ ಹೇಳುವ ಮೂಲಕ ಜನಮಾನಸದಲ್ಲಿ

ಹಬ್ಬಿ ನಿಂತ ಮೂಢನಂಬಿಕೆಯ ಕಳೆಯನ್ನು ತೆಗೆಯಲು ಅಹರ್ನಿಶಿ ಶ್ರಮಿಸುತ್ತಿದ್ದಾರೆ. ಬೈಲಹೊಂಗಲ ತಾಲೂಕಿನ ನಿಷ್ಕಲ ಮಂಟಪದ ನಿಜಗುಣ ಸ್ವಾಮೀಜಿಗಳ ಹರಿತವಾದ, ಸ್ಪಷ್ಟವಾದ, ಅಸ್ಖಲಿತವಾದ ವಚನಾಧಾರಿತ ಮಾತುಗಳಿಗೆ ಮೈಮರೆತು ಜನಸಾಗರ ನಿತ್ಯವೂ ತಾನೇತಾನಾಗಿ ಹರಿದುಬರುತ್ತಿದೆ.

ದರ್ಬಾರ ಉತ್ಸವ ಹಾಗೂ ಅಡ್ಡಪಲ್ಲಕ್ಕಿಯಂಥ ಅಮಾನವೀಯ ಆಚರಣೆಗಳು ಈ ನಾಡಿನಿಂದ ಕಿತ್ತೊಗೆಯಬೇಕೆಂದು ಕೂಗೆಬ್ಬಿಸಿರುವ ಗುಲ್ಬರ್ಗಾ ಜಿಲ್ಲಾ ಜನಪರ ಸಂಘಟನೆಗಳು, ದಲಿತ ಸಂಘರ್ಷ ಸಮಿತಿ, ವಿರಕ್ತ ಮಠಾಧೀಶರ ಬಳಗ ಮಾತ್ರ ಕ್ರಿಯಾಶೀಲವಾಗಿ ದಿನಕ್ಕೊಂದು ಬಗೆಯ ಚಳವಳಿಯನ್ನು ರೂಪಿಸುತ್ತಿವೆ. ಕನ್ನಡ ಭವನದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಬಾಯಿಗೆ ಕಪ್ಪುಬಟ್ಟೆಯನ್ನು ಕಟ್ಟಿಕೊಂಡು ಮೌನ ಮೆರವಣಿಗೆ ನಡೆಸುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು. ದಲಿತ ಸಂಘರ್ಷ ಸಮಿತಿಯ ಪದಾಧಿಕಾರಿಗಳಂತೂ 'ದಲಿತರ ಹೆಣಗಳ ಮೇಲೆ ನಿಮ್ಮ ಅಡ್ಡಪಲ್ಲಕ್ಕಿಯ ಉತ್ಸವ' ಎಂದು ಹೇಳುವ ಮೂಲಕ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ.

ದಿನೇದಿನೇ ಹೆಚ್ಚುಗೊಳ್ಳುತ್ತಿರುವ ಪ್ರತಿಭಟನೆಯ ಕಾವನ್ನು ಗಮನಿಸಿದ ಜಿಲ್ಲಾಧಿಕಾರಿ ಪ್ರಸಾದ ಅಡ್ಡಪಲ್ಲಕ್ಕಿಯ ಮೆರವಣಿಗೆಯನ್ನು ದಸರಾ ದರ್ಬಾರಿಗೆ ಹಾಕಿರುವ ಪೆಂಡಾಲ್‌ನಲ್ಲಿಯೆ ನಡೆಸಲು ಮೌಖಿಕವಾಗಿ ಸೂಚಿಸಿದ್ದಾರೆ. ಜೇವರ್ಗಿಯಲ್ಲಿ ಅಡ್ಡಪಲ್ಲಕ್ಕಿ ನಿಂತು ಹೋದರೆ ಮುಂದೊಂದು ದಿನ ನಾಡಿನಲ್ಲಿಯೆ ತಮ್ಮ ಉತ್ಸವಗಳು ನಿಂತು ಹೋಗಬಹುದು ಎಂದು ಆತಂಕಗೊಂಡ ಪಂಚಾಚಾರಿಗಳು ಏನಕೇನ ಪ್ರಕಾರೇಣ ಅಡ್ಡಪಲ್ಲಕ್ಕಿಯನ್ನು ನಡೆಸಿಯೇ ತೀರಬೇಕೆಂದು ಹಟಕ್ಕೆ ನಿಂತುಬಿಟ್ಟಿವೆ. ಮಠದ ಊಳಿಗಕ್ಕೆ ನಿಂತವರಂತೆ ವರ್ತಿಸುವ ತಮ್ಮ ಬುದ್ಧಿ ಭಾವಗಳನ್ನು ಒತ್ತೆ ಇಟ್ಟ ಲಿಂಗಾಯತರು ಜಾತಿ ಜಂಗಮರ ತಾಳಕ್ಕೆ ತಕ್ಕಂತೆ ಕುಣಿಯುತ್ತ ರಂಗೆಬ್ಬಿಸುತ್ತಿದ್ದಾರೆ.

ಜನಪರವಾದ, ಸಾರ್ವಜನಿಕರ ಹಿತ ಕಾಪಾಡಬೇಕಾದ ದಿನಪತ್ರಿಕೆಗಳೂ ಸಹ ಅದೇನು ಕಾರಣವೊ ರಂಭಾಪುರಿ ಪೀಠದ ಸಭೆಯ ಸಂಪೂರ್ಣ ವಿವರಗಳನ್ನು ಒಂಚೂರು ಬಿಡದಂತೆ ಪ್ರಕಟಿಸುವ ಮೂಲಕ ಎಡಬಿಡಂಗಿ ಧೋರಣೆಯನ್ನು ತಳೆಯುತ್ತಿವೆ. ಇದೆಲ್ಲವನ್ನೂ ತೆರೆದ ಕಣ್ಣು ಹಾಗೂ ಮನಸ್ಸುಗಳ ಮೂಲಕ ಗಮನಿಸುತ್ತಿರುವ ಜಾಗೃತ ಲಿಂಗಾಯತ-ಜಾತಿ ಜಂಗಮರೊಂದಿಗಿನ ತಮ್ಮ ಬಾಂಧವ್ಯವನ್ನೆ ಹರಿದುಬಿಸಾಕಿಬಿಟ್ಟರೆ? ಎಂಬ ಆಲೋಚನೆಗೆ ಬಂದು ನಿಂತಿದ್ದಾನೆ. ಈ ಯೋಜನೆ ಏನಾದರೂ ಜಾರಿಗೆ ಬಂದು ಬಿಟ್ಟರೆ ಎಲ್ಲಾ ಮಠಪೀಠಗಳಿಗೆ ಅಮರಿಕೊಂಡಿರುವ ಜಾತಿ ಜಂಗಮರು ತಮ್ಮ ಮಠಗಳಿಗೆ ಬೀಗ ಜಡಿದುಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಸಂಖ್ಯೆಗಳಿಲ್ಲದೆ ಶೂನ್ಯಕ್ಕೆ ಹೇಗೆ ಬೆಲೆಯಿಲ್ಲವೋ ಹಾಗೆಯೇ ಭಕ್ತರಿಲ್ಲದ ಮಠಕ್ಕೂ ಬೆಲೆಯಿಲ್ಲವಾಗುತ್ತದೆ. ಬಸವಣ್ಣನವರ ವಚನ ಸಾಹಿತ್ಯವೆ ತಮ್ಮ ಬದುಕಿಗೆ ಮೂಲ ಎಂದು ತಿಳಿದುಕೊಂಡರೆ ಭಕ್ತರಿಗೆ ಜಂಗಮರ ಅವಶ್ಯಕತೆ ಬೀಳುವುದಿಲ್ಲ. ಆದರೆ ಜಂಗಮರು ಆಶ್ರಯಿಸಿರುವುದೆ ಭಕ್ತರನ್ನು. ಭಕ್ತರು ಕೈಬಿಟ್ಟರೆ ಜಂಗಮರು ನೇರ ಪ್ರಪಾತಕ್ಕೆ ಬಿದ್ದು ಹೋಗಬೇಕಾಗುತ್ತದೆ. ಹಳ್ಳಿಗೆ ಏಕರಾತ್ರಿ ಪಟ್ಟಣಕ್ಕೆ ಪಂಚರಾತ್ರಿಯೆಂದು ಊರೂರು ತಿರುಗಾಡಿ ತತ್ವಪ್ರಚಾರ ಮಾಡುವ ಜಂಗಮರು ಮರೆಯಾಗಿ ಜಾತಿ ಜಂಗಮರು ಹೆಚ್ಚಾಗಿರುವುದರಿಂದ ಈ ಕಂದರ ಕಾಣಿಸಿಕೊಂಡಿದೆ. ಇದು ಹೆಚ್ಚುತ್ತ ಹೋದರೆ ಮುಂದೊಂದು ದಿನ ಜಂಗಮರು ಹಾಗೂ ಲಿಂಗಾಯತರು ಬೇರೆ ಬೇರೆಯಾಗಿ ಕಾಣಿಸಿಕೊಳ್ಳುವ ಕಾಲ ದೂರವಿಲ್ಲವೆನಿಸುತ್ತದೆ. ಲಿಂಗಾಯತರಲ್ಲಿರುವ ಕೆಲವು ಪ್ರಗತಿಪರ ಚಿಂತಕರು-ವಿಚಾರವಾದಿಗಳು ಈ ವಿಘಟನೆ ಎಷ್ಟು ಬೇಗ ಉಂಟಾಗುತ್ತದೊ ಅದಷ್ಟು ಒಳ್ಳೆಯ ಪರಿಣಾಮ ಉಂಟುಮಾಡುತ್ತದೆ ಎಂದು ಹೇಳುತ್ತಾರೆ. ಕರ್ಮಠತನವನ್ನು ಉಸಿರಾಗಿಸಿಕೊಂಡಿರುವ, ಸನಾತನ ಪರಂಪರೆಗೆ ಜೋತುಬಿದ್ದಿರುವ, ಕಂದಾಚಾರಗಳ ಆಚರಣೆಯಲ್ಲಿ ಹೂತುಹೋಗಿರುವ, ನಿಷ್ಕ್ರಿಯ ಜಂಗಮರು ತಮ್ಮ ಲಿಂಗಾಯತ ಜಾತಿಗೆ ಅಂಟಿದ ಕಳಂಕ! ಎಂದು ಮೂದಲಿಸುತ್ತಿದ್ದಾರೆ. ಈ ವಿಚಾರಗಳ ಹಿನ್ನೆಲೆಯಲ್ಲಿ ಎರಡು ವಿಚಾರಧಾರೆಗಳ ಧ್ರುವೀಕರಣ ನಡೆದರೆ ಅದಕ್ಕೆ ಕೊನೆಯ ವಚನಕಾರ ಷಣ್ಮುಖಶಿವಯೋಗಿಗಳ ನೆಲವೆ ಸಾಕ್ಷಿಯಾಗುತ್ತದೆ! ಎಂಬುದನ್ನು ಮುಂದಿನ ದಿನಗಳ ನಿರ್ಧರಿಸಲಿವೆ.


● ವಿಶ್ವಾರಾಧ್ಯ ಸತ್ಯಂಪೇಟೆ

ಅಡ್ಡಪಲ್ಲಕ್ಕಿ ಹೊರುವುದು ಸಂವಿಧಾನ ವಿರೋಧಿ ಕೃತ್ಯ

ರಂಭಾಪುರಿ ಸ್ವಾಮಿಯ ಅಡ್ಡಪಲ್ಲಕ್ಕಿಗೆ ಈಗ ರಾಜ್ಯದಾದ್ಯಂತ ಉಂಟಾಗಿರುವ ಪ್ರತಿಭಟನೆ ತೀವ್ರವಾದರೆ ಮುಂದೊಂದು ದಿನ ತಮಗೂ ಕುತ್ತು ಬರುತ್ತದೆ ಎಂದು ಎಚ್ಚೆತ್ತುಕೊಂಡ ಉಡುಪಿ ಪಲಿಮಾರು ಮಠಾಧೀಶ ವಿದ್ಯಾಧೀಶತೀರ್ಥ ಸ್ವಾಮಿಗಳು ಭಕ್ತರು ಅಡ್ಡಪಲ್ಲಕ್ಕಿ ಹೊರಲು ರೆಡಿಯಾಗಿದ್ದರೆ ಅದನ್ನು ಅಡ್ಡಿ ಪಡಿಸುವುದೇಕೆ? ಎಂದು ಹೇಳುವ ಮೂಲಕ ತಮ್ಮ ಬಣ್ಣವನ್ನು ಬಯಲು ಮಾಡಿಕೊಂಡಿದ್ದಾರೆ. ಲಿಂಗಾಯತಕ್ಕೆ ಅಂಟಿಕೊಂಡ ಜಾತಿ ಜಂಗಮರು ಹಾಗೂ ಬ್ರಾಹ್ಮಣ್ಯವನ್ನು ಅಂಟಿಸಿಕೊಂಡಿರುವ ಬ್ರಾಹ್ಮಣರು ಮೂಲತಃ ಒಂದೇ ನಾಣ್ಯದ ಎರಡು ಮುಖಗಳು.

ಇಬ್ಬರೂ ನಂಬಿಕೊಂಡಿರುವುದು ವೇದಗಳನ್ನು-ಶಾಸ್ತ್ರಗಳನ್ನು-ಆಗಮಗಳನ್ನು ಹಾಗೂ ಹಿಂದಿನಿಂದ ಬಂದಿರುವುದೆಂದು ಹೇಳಲಾಗುವ ಸತ್ (ಸತ್ತ) ಸಂಪ್ರದಾಯಗಳನ್ನು. ಈ ಕಳ್ಳ ಕೂಟವನ್ನು ಅರಿತುಕೊಂಡಿರುವ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ರವಿ ಮದನಕರ್ ಅತ್ಯಂತ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ. "ಹಿಂದೆ ಸ್ವಇಚ್ಛೆಯಿಂದಲೆ ಹೆಣ್ಣುಮಕ್ಕಳು ತನ್ನ ಗಂಡ ಸತ್ತೊಡನೆಯ ಚಿತೆ ಏರುತ್ತಿದ್ದರು. ಈಗಲೂ ಅಲ್ಲಲ್ಲಿ ತಮ್ಮ ಚಿನ್ನ ಹುಡಿಗೆ ಕೊಂಡಿ ಸಿಕ್ಕಿಸಿಕೊಂಡು ಸಿಡಿ ಆಡಲಾಗುತ್ತದೆ. ಕೆಲವು ಕಡೆ ಹೆಣ್ಣು ಮಕ್ಕಳು ಸ್ವ ಇಚ್ಛೆಯಿಂದಲೆ ದೇವರಿಗೆ ಬೆತ್ತಲೆ ಸೇವೆ ಮಾಡುತ್ತಾರೆ. ಹಲವಾರು ದೇವರುಗಳಿಗೆ ಯಾರ ಒತ್ತಡಕ್ಕೂ ಒಳಗಾಗದೆ ಕುರಿ, ಕೋಳಿ, ದನ-ಕರುಗಳನ್ನು ಬಲಿಕೊಡಲು ಇಚ್ಛಿಸುತ್ತಾರೆ. ಇದನ್ನಾದರೂ ಯಾಕೆ ತಡೆಯಬೇಕು? ಮೂಢನಂಬಿಕೆಯನ್ನು ಬೆಳೆಸುವುದು ಹಾಗೂ ಅವುಗಳನ್ನು ಪೋಷಿಸುವುದು ಹೇಗೆ ಸಂವಿಧಾನ ವಿರೋಧಿ ಕೃತ್ಯವೋ ಹಾಗೆಯೆ ಅಡ್ಡಪಲ್ಲಕ್ಕಿ ಎಂಬ ಮೂಢನಂಬಿಕೆಯನ್ನು ಬೆಳೆಸುವುದು ಸತ್ತ ಸಂಪ್ರದಾಯ" ಎಂದು ಕಟುವಾಗಿ ಟೀಕಿಸುತ್ತಾರೆ.

ಅಹಿಂದ ನೌಕರರ ಸಂಘ
'ದುಡಿಯುವ ಶಕ್ತಿಗಳ ಏಕೀಕರಣವೇ ನಮ್ಮ ಉದ್ದೇಶ'


ಎಸ್.ಎಚ್. ಪ್ರಕಾಶ್

ಅಹಿಂದ ನೌಕರರನ್ನು ಒಗ್ಗೂಡಿಸಿ ಸಂಘಟಿತ ಶಕ್ತಿ ನೀಡುವ ಉದ್ದೇಶದಿಂದ 'ರಾಜ್ಯ ಅಹಿಂದ ನೌಕರರ ಸಂಘ' ಎಂಬ ಹೊಸದೊಂದು ಸಂಘಟನೆ ರೂಪ ತಳೆಯುತ್ತಿದೆ. ಈ ಸಂಘಟನೆಯ ಉದ್ದೇಶ, ಸ್ವರೂಪ, ಕಾರ್ಯಯೋಜನೆಗಳ ಮೇಲೆ ಬೆಳಕು ಚೆಲ್ಲುವ ನಿಟ್ಟಿನಲ್ಲಿ ಇದರ ರಾಜ್ಯಾಧ್ಯಕ್ಷ ಮತ್ತು ಮುಖ್ಯ ರೂವಾರಿಯಾದ ಪ್ರಕಾಶ್ ಎಸ್.ಎಚ್. ರೊಂದಿಗೆ ನಡೆಸಿದ ಕಿರು ಸಂದರ್ಶನ ಇಲ್ಲಿದೆ.

ಲಂಕೇಶ್: ಇಂತಹದ್ದೊಂದು ಸಂಘಟನೆಯ ಅಗತ್ಯತೆ ಇದೆ ಅಂತ ಅನ್ನಿಸಿದ್ದೇಕೆ?

ಪ್ರಕಾಶ್: ಇವತ್ತು ಜಾತಿಗೊಂದು ಸಂಘ, ಸಂಘಟನೆಗಳಿವೆ. ಇದು ಆರೋಗ್ಯಕರ ಬೆಳವಣಿಗೆಯೇನೋ ಹೌದು. ಆದರೆ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ವಲ್ಪ ಮಾತ್ರವೇ ವ್ಯತ್ಯಾಸವಿರುವ ಒಂದು ಬೃಹತ್ ವರ್ಗ ಇದರಿಂದಾಗಿ ವಿಘಟನೆಯಾದಂತಾಗುತ್ತೆ, ಅಷ್ಟೂ ವರ್ಗಗಳಿಗೆ ಸಮಾನ ವೇದನೆಗಳಿದ್ದರೂ ಅವನ್ನು ಬಿಡಿಬಿಡಿಯಾಗಿಯೇ ಪ್ರತಿಪಾದಿಸಬೇಕಾಗುತ್ತೆ. ಇದರಿಂದಾಗಿ ಅಂತಹ ವೇದನೆಗಳು ಸಮಾಜಕ್ಕೆ ತಲುಪಬೇಕಾದ ತೀವ್ರತೆಯೂ ಕ್ಷೀಣಿಸುತ್ತದೆ. ಇದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಛಿದ್ರವಾದ ದುಡಿಯುವ ಅಹಿಂದ ಶಕ್ತಿಯನ್ನು ಒಂದೇ ವೇದಿಕೆಯಡಿ ತಂದು ಸಂಘಟಿಸಬೇಕಾದ ಅನಿವಾರ್ಯತೆ ಇದ್ದುದರಿಂದ ಇದನ್ನು ಹುಟ್ಟುಹಾಕುತ್ತಿದ್ದೇವೆ.

ಲಂಕೇಶ್: ಈ ಸಂಘಟನೆಯ ವ್ಯಾಪ್ತಿ ಎಂತದ್ದು?

ಪ್ರಕಾಶ್: ಈಗಾಗಲೇ ಸಾಕಷ್ಟು ಸರ್ಕಾರಿ ನೌಕರರ ಸಂಘಗಳು ಅಸ್ತಿತ್ವದಲ್ಲಿವೆ. ಆದರೆ ಈ ನಮ್ಮ ಅಹಿಂದ ನೌಕರರ ಸಂಘ ಕೇವಲ ಸರ್ಕಾರಿ ನೌಕರರಿಗೆ ಮಾತ್ರ ಸೀಮಿತವಾದದ್ದಲ್ಲ. ಎಂ.ಎನ್.ಸಿ ಒಳಗೊಂಡಂತೆ ಖಾಸಗಿ ಕ್ಷೇತ್ರ, ಅಸಂಘಟಿತ ಕಾರ್ಮಿಕ ವಲಯದ ದುಡಿಯುವ ಶಕ್ತಿಗಳನ್ನೂ ಏಕೀಕರಿಸುವುದು ನಮ್ಮ ಉದ್ದೇಶ. ಉತ್ತರ ಕರ್ನಾಟಕದಲ್ಲಿ ಆದಾಗಲೇ ಸಂಘಟನೆ ಒಂದು ಹಂತಕ್ಕೆ ಬಂದಿದ್ದು ಆಟೋಡ್ರೈವರ್‌ಗಳು, ಜಾಡಮಾಲಿಗಳೂ ಸಹಾ ನಮ್ಮ ಸಂಘಟನೆಯ ಭಾಗವಾಗುತ್ತಿದ್ದಾರೆ.

ಲಂಕೇಶ್: ಎಂ.ಎನ್.ಸಿ ಕಂಪನಿ ಅಥವಾ ಅದರ ಕ್ಯಾಂಪಸ್‌ಗಳಿಗೆ ಈ ಅಹಿಂದ ನೌಕರರ ಸಂಘಟನೆಯನ್ನು ಕೊಂಡೊಯ್ಯುವ ಅಗತ್ಯ ಇದೆ ಅಂತನ್ನಿಸುತ್ತದೆಯೇ?

ಪ್ರಕಾಶ್: ಖಂಡಿತವಾಗಿಯೂ ಇದೆ. ಇವತ್ತು ಎಂ.ಎನ್.ಸಿ ಕಂಪನಿಗಳ ಸಂಖ್ಯೆ ಹೆಚ್ಚಾಗುತ್ತಿದ್ದಂತೆಯೇ ಅವು ಉದ್ಯೋಗದ ಬಹು ನಿರೀಕ್ಷಿತ ಮೂಲಗಳಾಗಿ ಬದಲಾಗುತ್ತಿವೆ. ಆದರೆ ಅಲ್ಲಿ ನಡೆಯುವ ನೇಮಕಾತಿಗಳಿಗೆ ಮೀಸಲಾತಿಯ ಯಾವ ನಿರ್ಬಂಧವೂ ಇಲ್ಲ, ಹಾಗಾಗಿ ಅಹಿಂದ ವರ್ಗಕ್ಕೆ ಅಪಾರ ಅನ್ಯಾಯವಾಗುತ್ತಿದೆ. ನಮ್ಮ ಸಂಘಟನೆಯನ್ನು ಅಲ್ಲಿಗೂ ವಿಸ್ತರಿಸಿದ್ದೇ ಆದಲ್ಲಿ ಖಾಸಗಿ ಕ್ಷೇತ್ರಗಳಲ್ಲೂ ಮೀಸಲಾತಿಗಾಗಿ ಆಗ್ರಹಿಸಲು ಆಸ್ಪದವಾಗುತ್ತದೆ. ಅಲ್ಲದೆ ಎಂ.ಎನ್.ಸಿ ಕಂಪನಿಗಳಲ್ಲಿ ಜಾತಿ ವ್ಯವಸ್ಥೆ ಶ್ರೇಣೀಕರಣ ಇಲ್ಲವಂತೇನಲ್ಲ, ಅದು ಅಲ್ಲಿನ ಅಹಿಂದ ಸಿಬ್ಬಂದಿಗಳನ್ನು ಪರೋಕ್ಷವಾಗಿಯೋ, ಪ್ರತ್ಯಕ್ಷವಾಗಿಯೋ ಬಾಧಿಸುತ್ತಿರುತ್ತದೆ. ಆ ಉದ್ದೇಶದಿಂದಲೇ ನಾವು ನಮ್ಮ ಸಂಘಟನಾ ವ್ಯಾಪ್ತಿಗೆ ಎಂ.ಎನ್.ಸಿ.ಯನ್ನೂ ಸೇರಿಸಿಕೊಂಡಿದ್ದೇವೆ.

ಲಂಕೇಶ್: ಎಂ.ಎನ್.ಸಿ ಕಂಪನಿಗಳಲ್ಲಿ ದುಡಿಮೆಯೆಂದರೆ ದಿನದ ಇಪ್ಪತ್ನಾಲ್ಕು ಗಂಟೆಯನ್ನೂ ಅಡವಿಟ್ಟಂತೆ. ಅಂತಹದ್ದರಲ್ಲಿ ಅಲ್ಲಿನ ನೌಕರರಿಂದ ನಿಮಗೆ ಸ್ಪಂದನೆ ಸಿಗುತ್ತದೆಯೇ?

ಪ್ರಕಾಶ್: ಹೌದು. ಅಲ್ಲಿ ಕೆಲಸ ಮಾಡುವವರು ಸಕ್ರಿಯವಾಗಿ ನಮ್ಮಂತೆ ಸಂಘಟನೆಯಲ್ಲಿ ನಿರತವಾ ಗಲು ಆಗುವುದಿಲ್ಲ, ಆದರೆ ಆ ಒಂದು ಕಾರಣವೇ ಅವರನ್ನು ಸಂಘಟಿತ ವ್ಯವಸ್ಥೆಯಿಂದ ದೂರ ಉಳಿಸು ವುದೂ ಸರಿಯಲ್ಲ, ಹಾಗಾಗಿ ನಾವು ವೆಬ್‌ಸೈಟ್ ಒಂದನ್ನು ಆರಂಭಿಸಿ ಅದರ ಮೂಲಕ ಸಂಘಟನೆ ಯ ಆಗು-ಹೋಗು ಮತ್ತು ಅವರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ಯೋಜಿಸಿದ್ದೇವೆ.

ಲಂಕೇಶ್: ಸಂಘಟನೆಯ ಕಾರ್ಯ ಇದೀಗ ಯಾವ ಹಂತ ತಲುಪಿದೆ?

ಪ್ರಕಾಶ್: ಈ ಸಂಘವನ್ನು ಹುಟ್ಟುಹಾಕುವ ನಮ್ಮ ಪ್ರಯತ್ನ ಇಂದು ನಿನ್ನೆಯದಲ್ಲ. ಸುಮಾರು ನಾಲ್ಕು ವರ್ಷಗಳಿಂದ ಅಹಿಂದ ವರ್ಗದ ಮುಖಂಡರು, ಪ್ರಗತಿಪರರು ಮತ್ತು ಅಹಿಂದ ವರ್ಗಕ್ಕೆ ಸೇರಿದ ಸಾಹಿತಿಗಳ ಸಮಾಲೋಚನೆ, ರೂಪುರೇಷೆ ನಡೆಯುತ್ತಲೇ ಇತ್ತು, ಆರು ತಿಂಗಳ ಹಿಂದೆ ಅಂತಿಮ ರೂಪ ಪಡೆದುಕೊಂಡಿದ್ದು ನೋಂದಣಿಯಾಗುವ ಮೂಲಕ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದೆ. ಹೈದ್ರಾಬಾದ್-ಕರ್ನಾಟಕ ಮತ್ತು ಮುಂಬೈ-ಕರ್ನಾಟಕ ಪ್ರಾಂತ್ಯದಲ್ಲಿ ಸಂಘಟನೆಯ ಕಾರ್ಯ ಚುರುಕು ಪಡೆದುಕೊಂಡಿದೆ. ರಾಜ್ಯದ 24 ಜಿಲ್ಲೆಗಳಲ್ಲಿ ಆದಾಗಲೆ ಜಿಲ್ಲಾ ಮಟ್ಟದ ಪದಾಧಿಕಾರಿಗಳ ತಂಡ ರಚನೆಯಾಗಿದ್ದು ತಾಲ್ಲೂಕು ಮಟ್ಟದಲ್ಲೂ ಸಂಘಟನಾ ಕಾರ್ಯದಲ್ಲಿ ನಿರತರಾಗಿದ್ದಾರೆ.

ಲಂಕೇಶ್: ಸಂಘಟನೆಗೆ ಜನರ ಪ್ರತಿಸ್ಪಂದನೆ ಹೇಗಿದೆ?

ಪ್ರಕಾಶ್: ನಮಗೇ ಅಚ್ಚರಿ ಹುಟ್ಟಿಸುವಷ್ಟರ ಮಟ್ಟಿಗೆ ಅಹಿಂದ ದುಡಿಯುವ ವರ್ಗ ಸ್ಪಂದಿಸುತ್ತಿದೆ. ಯಾದಗಿರಿ, ಬೀದರ್, ಗುಲ್ಬರ್ಗಾ ಮುಂತಾದ ಕಡೆಗಳಲ್ಲಿ ಸಂಘಟನಾ ಸಮಾರಂಭಗಳಿಗೆ ಒಂದು ಸಾವಿರಕ್ಕೂ ಹೆಚ್ಚು ಜನ ಸೇರುತ್ತಿದ್ದಾರೆ. ಮಾಹಿತಿ ತಲುಪಿದವರು ನಿಷ್ಠೆಯಿಂದ ಸ್ವಯಂಪ್ರೇರಿತರಾಗಿ ಹಾಜರಾಗುತ್ತಿದ್ದಾರೆ. ಇದಿನ್ನೂ ಆರಂಭವಾಗಿರುವುದರಿಂದ ಮಾಹಿತಿಯನ್ನು ತಲುಪಿಸುವುದು ಸ್ವಲ್ಪ ಕಷ್ಟವಾಗುತ್ತಿದೆ. ಮಾಹಿತಿ ಸಮರ್ಪಕವಾಗಿ ತಲುಪಿದರೆ ಇನ್ನೂ ಹೆಚ್ಚಿನ ಪ್ರತಿಸ್ಪಂದನೆ ದೊರಕುವ ಭರವಸೆ ನಮಗಿದೆ.

ಲಂಕೇಶ್: ಸಂಘಟನೆಯ ಅಸ್ತಿತ್ವ ಮತ್ತು ಉದ್ದೇಶಗಳನ್ನು ಜನರ ಬಳಿಗೆ ಕೊಂಡೊಯ್ಯಲು ಯಾವೆಲ್ಲಾ ಯೋಜನೆಗಳನ್ನು ಹಾಕಿಕೊಂಡಿದ್ದೀರಿ?

ಪ್ರಕಾಶ್: ಸದ್ಯದರಲ್ಲೇ ಮಲ್ಲಿಕಾ ಘಂಟಿಯವರ ನೇತೃತ್ವದಲ್ಲಿ ನಮ್ಮ ಸಂಘಟನೆಯ ಉದ್ದೇಶಗಳನ್ನು ಅರ್ಥಮಾಡಿಸುವ ಪ್ರಣಾಳಿಕಾ ಕಿರುಹೊತ್ತಿಗೆಯೊಂದನ್ನು ಹೊರತರಲು ಯೋಜಿಸಿದ್ದೇವೆ. ಇದರ ಕಾರ್ಯ ಅಂತಿಮ ಹಂತದಲ್ಲಿದ್ದು ಕೆಲವೇ ದಿನಗಳಲ್ಲಿ ಅದನ್ನು ಜನರಿಗೆ ತಲುಪಿಸಲಿದ್ದೇವೆ. ಅಲ್ಲದೆ ಮುಂದಿನ ಏಪ್ರಿಲ್ ತಿಂಗಳಿನ ಒಳಗೆ ರಾಜ್ಯಮಟ್ಟದ ಬೃಹತ್ ಸಮಾವೇಶವೊಂದನ್ನು ಆಯೋಜಿಸುವ ಯೋಚನೆಯೂ ಇದೆ. ಮಾಧ್ಯಮಗಳು ಮತ್ತು ನಮ್ಮ ಜಿಲ್ಲಾ ಪದಾಧಿಕಾರಿಗಳ ಮೂಲಕ ಎಲ್ಲರನ್ನೂ ತಲುಪಲಿದ್ದೇವೆ. ಆಗಲೇ ಹೇಳಿದಂತೆ ವೆಬ್‌ಸೈಟ್ ಆರಂಭಿಸಿ, ಆನ್‌ಲೈನ್ ಮೂಲಕವೂ ಎಂ.ಎನ್.ಸಿ ಮತ್ತಿತರೆ ವಲಯದ ನೌಕರರನ್ನು ಸಂಘಟಿಸಲಿದ್ದೇವೆ.

ಲಂಕೇಶ್: ಸದ್ಯ ಸಂಘದ ಆಡಳಿತ ಸ್ವರೂಪ ಹೇಗಿದೆ?

ಪ್ರಕಾಶ್: ಈಗ ನಾನೇ ಸಂಘದ ರಾಜ್ಯಾಧ್ಯಕ್ಷ. ಇಸ್ಮತುಲ್ಲಾ ಖಾನ್ ಎಂಬ ನಿವೃತ್ತ ನೌಕರ ನಾಯಕರೊಬ್ಬರು ಗೌರವಾಧ್ಯಕ್ಷರಾಗಿದ್ದಾರೆ. ಇಲ್ಲಿ ನಮ್ಮ ಸಂಘದ ಮತ್ತೊಂದು ವೈಶಿಷ್ಟ್ಯವನ್ನು ನಿಮಗೆ ತಿಳಿಸಿಬಿಡುತ್ತೇನೆ. ಕೇವಲ ಈಗ ಕೆಲಸ ಮಾಡುತ್ತಿರುವವರಲ್ಲದೆ, ನಿವೃತ್ತ ನೌಕರರಿಗೂ ಸಂಘದ ಪದಾಧಿಕಾರಿಗಳಾಗಲು ಅವಕಾಶವಿದೆ. ತಮ್ಮ ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುವುದರ ಜೊತೆಗೆ ಸಮಾಜದ ವಾಹಿನಿಯಿಂದ ಅವರ ಪ್ರತ್ಯೇಕವಾಗದಂತೆ ಇದು ಅನುಕೂಲವಾಗಲಿದೆ. ಇನ್ನುಳಿದಂತೆ ಮಂಜಪ್ಪ ರಾಜ್ಯ ಸಂಚಾಲಕರಾಗಿದ್ದರೆ, ಈಶ್ವರಪ್ಪ ಖಜಾಂಚಿಯಾಗಿ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಂಗಳೂರಿನ ಶೇಷಾದ್ರಿಪುರಂನಲ್ಲಿ ನಮ್ಮ ಕೇಂದ್ರ ಕಚೇರಿ ಕಾರ್ಯಾರಂಭ ಮಾಡಿದೆ.

ಸಂದರ್ಶನ: ಗಿರೀಶ್ ತಾಳಿಕಟ್ಟೆ

ಮಾತೆ ಮಹಾದೇವಿ ಸಂದರ್ಶನ

04 ◄

ಅಂತ. 'ವೀರಶೈವ' ಅಂತ ಹೆಸರಿಟ್ಟುಕೊಂಡು ಅವರು ತಮ್ಮ ವೈದಿಕ ಆಚರಣೆ ಮುಂದುವರೆಸಿಕೊಳ್ಳಲಿ. ನಾವು ಬಸವಣ್ಣ ಮುಂತಾದ ಶರಣರ ಪರಂಪರೆಯನ್ನು ಮುಂದುವರೆಸ್ತಾ, ಜನರಲ್ಲಿ ಜಾಗೃತಿ ಮೂಡಿಸುತ್ತಾ ಲಿಂಗಾಯತ ಧರ್ಮವನ್ನು ಕಟ್ಟುತ್ತೇವೆ. ವೈದಿಕ ಆಚರಣೆಗಳಿಂದ ಮಲಿನವಾಗಿರುವ ಲಿಂಗಾಯತ ಧರ್ಮ ಆ ಮೂಲಕ ಸ್ವಚ್ಛವಾಗುತ್ತೆ.

ಲಂಕೇಶ್ : ಪುರುಷಾಧಿಪತ್ಯ ಎಲ್ಲೆಡೆ ವ್ಯಾಪಕವಾಗಿರುವ ಇಂದಿನ ಸಂದರ್ಭದಲ್ಲಿ ಒಬ್ಬ ಮಹಿಳೆಯಾಗಿ ನಿಮ್ಮ ಸ್ವಂತ ಅನುಭವವೇನು?

ಮಾತೆ : ಪ್ರಾರಂಭದಿಂದಲೂ ಪುರುಷಾಧಿಪತ್ಯವನ್ನು ಎದುರಿಸುತ್ತಿದ್ದೇವೆ. ಮಹಿಳೆ ಎಂಬ ಕಾರಣಕ್ಕೆ ವಿರೋಧ ವ್ಯಕ್ತಪಡಿಸುವುದು ಇಂದಿಗೂ ಮುಂದುವರೆದಿದೆ.

ಬಸವಣ್ಣನವರು ಮಹಿಳೆಗೆ ಸಮಾನ ಸ್ಥಾನ ನೀಡಿದರು. ಶರಣರು ಅಕ್ಕ ಮಹಾದೇವಿಯನ್ನು ಗುರುಸ್ಥಾನ ನೀಡಿ ಗೌರವಿಸಿದರು. ಆದರೆ ನಂತರ ದಿನಗಳಲ್ಲಿ ವಚನಕಾರರ ಕ್ರಾಂತಿಕಾರಿ ವಿಚಾರಗಳನ್ನು ಮೂಲೆಗುಂಪು ಮಾಡಿ ಗುರುಸ್ಥಾನವನ್ನು ಪುರುಷ ಪೀಠಾಧಿಪತಿಗಳೇ ಕಬ್ಜಾ ಮಾಡಿಕೊಂಡರು.

ಕೆಲವೊಂದು ಹಕ್ಕುಗಳನ್ನು ಕೊಡದೆ ಇದ್ದಾಗ ನಾವು ಅದನ್ನು ಕಸಿದುಕೊಳ್ಳಬೇಕಾಗುತ್ತೆ, ಹೀಗಾಗಿ ನಾವು ಸ್ವತಂತ್ರ ಮಹಿಳಾ ಜಗದ್ಗುರು ಪೀಠವನ್ನು ಸ್ಥಾಪಿಸಿದೆವು. ಆಗ ಪೀಠಾಧಿಪತಿಗಳಿಂದ, ಮಹಾಪಂಡಿತರು ಎನಿಸಿಕೊಂಡವರಿಂದ ತೀವ್ರ ವಿರೋಧ ಬಂತು. 'ಬಸುರಿ, ಬಾಣಂತಿಯಾಗುವ ಹೆಣ್ಣು ಪೀಠಾಧಿಪತಿಯಾಗಲು ಅರ್ಹಳಲ್ಲ' ಅಂತ ಘೋಷಿಸಿದರು. ಮಹಿಳೆ ಬಸುರಿ, ಬಾಣಂತಿಯಾಗದೇ ಹೋಗಿದ್ದರೆ ಯಾವ ಪಂಡಿತನಾಗಲಿ, ಪೀಠಾಧಿಪತಿಯಾಗಲಿ ಈ ಜಗತ್ತಿಗೆ ಬರುತ್ತಿರಲಿಲ್ಲ ಎಂಬುದು ಬೇರೆ ಮಾತು. ಇಂಥಾ ವಿರೋಧದ ನಡುವೆಯೂ ಶರಣ ಪರಂಪರೆ ಬಗ್ಗೆ ಜಾಗೃತಿ ಪಡೆದ ಸಮಾಜ ನಮ್ಮ ಬೆಂಬಲಕ್ಕೆ ನಿಂತ ಪರಿಣಾಮ ಮಹಿಳಾ ಪೀಠ ಬೆಳೆಯಲು ಸಾಧ್ಯವಾಯಿತು.

ಲಂಕೇಶ್ : ಕೆಲವು ಮಠಗಳಲ್ಲೇ ಪಂಕ್ತಿಭೇದ, ಜಾತಿಭೇದ ಆಚರಿಸುತ್ತಿದ್ದಾರಲ್ಲಾ?

ಮಾತೆ : ನಾವು ಸ್ಪಷ್ಟವಾಗಿ ಇದರ ವಿರೋಧಿಗಳು. ನಮ್ಮ ಮಠದಲ್ಲಿ ಅಂಥಾ ಆಚರಣೆಗೆ ಅವಕಾಶವೇ ಇಲ್ಲ. ಪ್ರತಿವರ್ಷ ಲಕ್ಷಾಂತರ ಮಂದಿಯನ್ನು ಸೇರಿಸಿ ಶರಣಮೇಳ ನಡೆಸುತ್ತೇವೆ. ಅಲ್ಲಿ ಎಲ್ಲರಿಗೂ ಸಮಾನ ಪಂಕ್ತಿ, ಸಮಾನ ಭೋಜನ. ಅಸ್ಪೃಶ್ಯರೆನಿಸಿಕೊಂಡವರೂ ಕೂಡ ಸಮಾನವಾಗಿ ಭಾಗವಹಿಸುತ್ತಾರೆ.

ಆದರೆ ಕೆಲವು ಮಠಾಧಿಪತಿಗಳು, ನಿರ್ದಿಷ್ಟವಾಗಿ ವೈದಿಕ ಮಠಾಧೀಶರು ಇದನ್ನು ಆಚರಿಸುವುದು ಮಾತ್ರವಲ್ಲ; ಅದನ್ನು ಸಮರ್ಥನೆ ಮಾಡಿಕೊಳ್ತಾ ಇದಾರೆ. ಯಾವುದೇ ಒಂದು ಧರ್ಮದಲ್ಲಿ ಮಾನವೀಯತೆ ಬೇಕು, ಸಮಾನತೆ ಬೇಕು. ಹಾಗಿಲ್ಲದಿದ್ದರೆ ಅದೊಂದು ಧರ್ಮ ಎನಿಸಿಕೊಳ್ಳುವುದು ಸಾಧ್ಯವೇ ಇಲ್ಲ. 'ದೇವನೊಬ್ಬನೇ ತಂದೆ, ಮನುಜರೆಲ್ಲರೂ ಒಂದೇ' ಎಂಬ ತತ್ವವನ್ನು ಆಚರಿಸಬೇಕು. ವೈದಿಕರು ಹೀಗೆ ಮುಂದುವರೆದರೆ ಅವರ ಧರ್ಮಕ್ಕೆ ಉಳಿಗಾಲವಿಲ್ಲ ಅಂತ ಹೇಳಲೇಬೇಕು.

ಲಂಕೇಶ್ : ಇಂದು ಸಮಾಜದಲ್ಲಿ ಮೂಢನಂಬಿಕೆಗಳು ಹೆಚ್ಚುತ್ತಿವೆಯಲ್ಲ?

ಮಾತೆ : ಮೂಢನಂಬಿಕೆಗಳ ಆಧಾರದಲ್ಲಿ ಧರ್ಮವನ್ನು ಕಟ್ಟಿ, ಪ್ರವಚನದ ಹೆಸರಿನಲ್ಲಿ ಪುರಾಣಗಳನ್ನು ಬೋಧಿಸುತ್ತಿದ್ದಾರೆ. ಇವುಗಳಲ್ಲದೆ ಬೆಳಿಗ್ಗೆ ಎದ್ದ ಕೂಡಲೇ ಜ್ಯೋತಿಷ್ಯ ಮೂಢನಂಬಿಕೆಗಳನ್ನು ಬಿತ್ತಿ ಭಯದ ತಳಹದಿಯ ಮೇಲೆ ಧರ್ಮವನ್ನು ಕಟ್ಟುತ್ತಿದ್ದಾರೆ. ಜೊತೆಗೆ ಕೆಲವು ಮಠಾಧೀಶರು ಮಡೆಸ್ನಾನದಂಥ ಪದ್ಧತಿಯನ್ನು ಬಹಿರಂಗವಾಗಿ ಸಮರ್ಥಿಸುವ ಮಟ್ಟಕ್ಕೆ ಇಳಿದಿದ್ದಾರೆ. ನಾವು ಇವುಗಳನ್ನು ತಿರಸ್ಕರಿಸಿ, ವಚನಸಾಹಿತ್ಯದ ವೈಜ್ಞಾನಿಕ, ಪ್ರಗತಿಪರ ಅಂಶಗಳನ್ನು ಜನರಿಗೆ ತಿಳಿಸಿ, ಜಾಗೃತಿ ಮೂಡಿಸಬೇಕು.

ಲಂಕೇಶ್ : ಇತ್ತೀಚೆಗೆ ಢುಂಢಿ ಕಾದಂಬರಿಯನ್ನು ನಿಷೇಧಿಸಿದ್ದರ ಬಗ್ಗೆ...

ಮಾತೆ : ಇಂಥಾ ವಿದ್ಯಮಾನ ಇಂದು ನಿನ್ನೆಯದಲ್ಲ; ಅನಾದಿಕಾಲದಿಂದಲೂ ವೈದಿಕಶಾಹಿ ಮನಸ್ಥಿತಿಯವರು ಹೊಸ ಚಿಂತನೆಗಳು ಹರಿದು ಬರುವುದನ್ನು ತಡೆಯುವ ಹುನ್ನಾರ ನಡೆಸುತ್ತಲೇ ಬಂದಿದ್ದಾರೆ. ಹೊಸ ಹೊಸ ವಿಚಾರಗಳಿಗೆ, ಅಧ್ಯಯನಗಳಿಗೆ ಸಮಾಜ ತೆರೆದುಕೊಳ್ಳಬೇಕು; ಒಳ್ಳೆಯದನ್ನು ಸ್ವೀಕರಿಸಬೇಕು. ಇಲ್ಲದಿದ್ದರೆ ವೈಚಾರಿಕ ಪ್ರಗತಿ ಹೇಗೆ ಸಾಧ್ಯ?

ಲಂಕೇಶ್ : ಇಂದು ತಮ್ಮ ರಾಜಕೀಯ ಲಾಭಕ್ಕಾಗಿ ಕೋಮುಗಳ ಆಧಾರದಲ್ಲಿ ಸಮಾಜವನ್ನು ಒಡೆಯುವ ವಿದ್ಯಮಾನ ನಡೆಯುತ್ತಿರುವ ಬಗ್ಗೆ ನಿಮ್ಮ ಪ್ರತಿಕ್ರಿಯೆ?

ಮಾತೆ : ಜನರನ್ನು ಒಡೆದು ಆಳುವ ನೀತಿಯನ್ನು ನಾವು ಎಂದಿಗೂ ಒಪ್ಪುವುದಿಲ್ಲ.

"ಇವನಾರವ ಇವನಾರವ
ಇವನಾರವನೆಂದೆಣಿಸದಿರು
ಇವ ನಮ್ಮವ ಇವ ನಮ್ಮವ
ಇವ ನಮ್ಮವನೆಂದೆಣಿಸು"

ಅಂತ ಬಸವಣ್ಣನವರು ಹೇಳಿದ್ದಾರೆ. ಇದೇ ನಮಗೆ ಆದರ್ಶ. ತಮ್ಮ ಲಾಭಕ್ಕಾಗಿ ಕೋಮುಭಾವನೆಯ ಪ್ರಚೋದಿಸುವವರನ್ನು ನಾವು ವಿರೋಧಿಸ್ತೇವೆ.

ಲಂಕೇಶ್ : ನಿಮ್ಮ ಪ್ರಸ್ತುತ ಹೋರಾಟದ ನಿರ್ದಿಷ್ಟ ಗುರಿಯೇನು?


ಮಾತೆ : ಹಿಂದೂ ಧರ್ಮದ ಕಕ್ಷೆಯೊಳಗೆ ಒಂದು ಜಾತಿಯ ರೂಪದಲ್ಲಿ ಸೇರಿಕೊಂಡಿರುವ ಲಿಂಗಾಯತ ಧರ್ಮವನ್ನು ಬೇರ್ಪಡಿಸುವುದೇ ನಮ್ಮ ಹೋರಾಟದ ಗುರಿ. ಲಿಂಗಾಯತ ಧರ್ಮಕ್ಕೆ ಜಾತಿಯೆಂಬ ಕಳಂಕವನ್ನು ತೊಡೆದುಹಾಕಿ, ಅದಕ್ಕೆ ಧರ್ಮದ ಸ್ಥಾನಮಾನ ಕಲ್ಪಿಸಬೇಕು. ಹೀಗಾಗಿ ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ಕೊಡಬೇಕು ಎಂಬುದು ನಮ್ಮ ಬೇಡಿಕೆ. ಕರ್ನಾಟಕ ಸರ್ಕಾರ ಕೂಡಲೇ ಈ ಬಗ್ಗೆ ಒಂದು ನಿರ್ಣಯ ಮಾಡಿ ಅದನ್ನು ಕೇಂದ್ರಕ್ಕೆ ಕಳಿಸಿಕೊಡಬೇಕು.

ಲಂಕೇಶ್ : ಸರ್ಕಾರದಿಂದ ಅಲ್ಪಸಂಖ್ಯಾತ ಧರ್ಮದ ಸವಲತ್ತುಗಳನ್ನು ಪಡೆದುಕೊಳ್ಳುವುದು ನಿಮ್ಮ ಉದ್ದೇಶವೇ?

ಮಾತೆ : ಸರ್ಕಾರದ ಸವಲತ್ತುಗಳು ನಮಗೆ ಎಂದಿಗೂ ಮಹತ್ವದ ಸಂಗತಿಯಾಗಿಲ್ಲ. ಆದರೆ ವೀರಶೈವ ಮಹಾಸಭಾದವರು ದೆಹಲಿಗೆ ಹೋಗಿ, ಸೋನಿಯಾ ಗಾಂಧಿಯವರನ್ನು ಭೇಟಿಯಾಗಿ ಇಂಥಾ ಬೇಡಿಕೆ ಇಟ್ಟಿದ್ದಾರೆ ಅಂತ ವರದಿಯಿದೆ. ಅದು ನಮಗೆ ಅಷ್ಟು ಮಹತ್ವದ ಸಂಗತಿಯಾಗೋದಿಲ್ಲ, ಸಮಾಜದಲ್ಲಿ ವೈಚಾರಿಕ, ಧಾರ್ಮಿಕ ಜಾಗೃತಿ ಮೂಡಿಸುವುದು ನಮ್ಮ ಪ್ರಮುಖ ಧ್ಯೇಯ. ಬಹುಸಂಸ್ಕೃತಿಯ, ಬಹು ಆಚರಣೆಗಳ ನಮ್ಮ ಭಾರತ ದೇಶಕ್ಕೆ ಸೂಕ್ತವಾದ ಲಿಂಗಾಯತ ಧರ್ಮದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಬೇಕೆಂಬುದು ನಮ್ಮ ಪ್ರಯತ್ನ.

ಸಂದರ್ಶನ:
ದೊಡ್ಡಿಪಾಳ್ಯ ನರಸಿಂಹಮೂರ್ತಿ

ಎನ್‌ಕೌಂಟರ್ ಭೀತಿಗೆ ಬಿದ್ದೇ ಊರುಬಿಟ್ಟ ಜೆಸಿಬಿ ನಾರಾಯಣ




ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿಗೆ ಜೆಸಿಬಿಯ ಮೇಲೆ ಕಣ್ಣು. ಕಳೆದ ಪಾಲಿಕೆ ಚುನಾವಣೆಯ ತನಕ ಎಲ್ಲವೂ ಸರಿಯಾಗಿದ್ದದ್ದು ಯಾವತ್ತು ಜೆಸಿಬಿ ಪಾಲಿಕೆ ಚುನಾವಣೆಗೆ ನಿಲ್ಲುತ್ತಾನೆಂಬುದು ಶಾಸಕ ಸತೀಶ್ ರೆಡ್ಡಿಗೆ ಖಾತರಿಯಾಯ್ತೋ, ಸಮಸ್ಯೆ ಶುರುವಾಗಿದ್ದೇ ಅಲ್ಲಿಂದ... 2009 ರಿಂದ ಶುರುವಾದ ಜೆಸಿಬಿಯ ಪೊಲೀಸ್ ಪ್ರಾಬ್ಲಂ ಇವತ್ತಿಗೂ ಮುಗಿದಿಲ್ಲ, ಮುಗಿಯುವ ಲಕ್ಷಣಗಳೂ ಇಲ್ಲ.

ಬಿಜೆಪಿಯ ದುರಾಡಳಿತ ಕಳೆದು ಕಾಂಗ್ರೆಸ್ ಯುಗ ಶುರುವಾದರೂ ಜೆಸಿಬಿ ನಾರಾಯಣನೆಂಬ ರಿಯಲ್ ಎಸ್ಟೇಟ್ ಪುಢಾರಿಯ ಫಜೀತಿ ಮಾತ್ರ ಅಂತ್ಯ ಕಾಣುತ್ತಿಲ್ಲ.

ಯಾವುದೋ ಕಾಲಕ್ಕೆ ಪರಪ್ಪನ ಅಗ್ರಹಾರದ ಪಾತಕಿ ಟಟೋ ಚಂದ್ರನನ್ನು ಮುಗಿಸಿ ಜೈಲುಪಾಲಾದ ಜೆಸಿಬಿ ನಾರಾಯಣನ ಮೂರ್ಖತನಗಳೇ ಆತನ ಪಾಲಿಗೆ ಉರುಳಾಗಿವೆ. ರೌಡಿಯಾದವನು ರೌಡಿಯಾಗಿದ್ದರೇನೇ ಕ್ಷೇಮ. ಕಾಲಾನುಕಾಲಕ್ಕೆ ಪೊಲೀಸರಿಗೂ ರಾಜಕಾರಣಿಗಳಿಗೂ ಸೇವೆ ಸಲ್ಲಿಸಿಕೊಂಡಿದ್ದು ತನ್ನ ಬೇಳೆ ಬೇಯಿಸಿಕೊಂಡರಷ್ಟೇ ಸೇಫು. ಅದನ್ನು ಹೊರತುಪಡಿಸಿ ತಾನೇ ರಾಜಕಾರಣಿಯಾಗ ಹೊರಟರೆ ಏನೆಲ್ಲ ತಾಪತ್ರಯಗಳಿಗೆ ತಲೆ ಒಡ್ಡಬೇಕೆಂಬುದಕ್ಕೆ ತಾಜಾ ಉದಾಹರಣೆಯಂತಿದ್ದಾನೆ ಜೆಸಿಬಿ-

ಸದ್ಯ ದೂರದ ಆಂಧ್ರದಲ್ಲೋ ತಮಿಳುನಾಡಿನಲ್ಲೋ ತಲೆಮರೆಸಿಕೊಂಡಿರುವ ಜೆಸಿಬಿ ನಾರಾಯಣನ ಪತ್ನಿ ಮಂಜುಳಾ ತನ್ನ ಐವರು ಹೆಣ್ಣುಮಕ್ಕಳೊಂದಿಗೆ ಕಂಡಕಂಡ ಕಾಂಗ್ರೆಸ್ ರಾಜಕಾರಣಿಗಳನ್ನು ಕಂಡು ಕಣ್ಣೀರಿಡುತ್ತಿರುವ ಪರಿಯಂತೂ ಕರುಣಾಜನಕ. ಪೊಲೀಸರು ತನ್ನ ಗಂಡನನ್ನು ಎನ್‌ಕೌಂಟರ್ ಮಾಡಲು ಷಡ್ಯಂತ್ರ ರೂಪಿಸಿದ್ದಾರೆಂದೇ ಆಕೆ ಮಾನವಹಕ್ಕು ಆಯೋಗದಲ್ಲಿ ದೂರು ದಾಖಲಿಸಿರುವುದು ಒಂದೆಡೆಯಾದರೆ ಮತ್ತೊಂದೆಡೆ ಸಿಕ್ಕಸಿಕ್ಕ ಪೊಲೀಸ್ ಅಧಿಕಾರಿಗಳು, ಪತ್ರಕರ್ತರು, ಟೀವಿಗಳೆನ್ನದೆ ಮಂಜುಳಾ ಗಂಡನ ಪ್ರಾಣಭಿಕ್ಷೆ ಕೋರಿ ಅಂಗಲಾಚುತ್ತಿದ್ದಾಳೆ.

ಜೆಸಿಬಿ ನಾರಾಯಣ ಅಲಿಯಾಸ್ ನಾರಾಯಣಸ್ವಾಮಿ ಎಂಬ ಆನೇಕಲ್ ಮೂಲದ ಹಳೇ ಪಾತಕಿ ಇತ್ತೀಚೆಗೆ ಸುದ್ದಿಯಾಗುತ್ತಿರುವುದು ಆತನ ಪಾತಕ ಗಳಿಗಿಂತಲೂ ಪೊಲೀಸರೊಂದಿಗಿನ ಆತನ ಸಂಘರ್ಷದಿಂದಾಗಿ. ಅದು ಶುರುವಾಗಿದ್ದು ಬಿಜೆಪಿ ಅಧಿಕಾರಕ್ಕೆ ಬಂದ ನಂತರದಿಂದ. ಆ ಹೊತ್ತಿಗಾಗಲೇ ಟಟೋ ಚಂದ್ರನ ಕೊಲೆ ಕೇಸಿನಲ್ಲಿ ಜೈಲಿನಲ್ಲಿದ್ದ ಜೆಸಿಬಿ ನಾರಾಯಣ ಕೇವಲ ರಿಯಲ್ ಎಸ್ಟೇಟ್ ದಂಧೆಗಷ್ಟೇ ಸೀಮಿತ ನಾಗಿದ್ದರೆ ಯಾರಿಗೂ ಸಮಸ್ಯೆಯಿರಲಿಲ್ಲ. ಹಾಗೆ ಜೈಲಲ್ಲಿದ್ದುಕೊಂಡೇ ಸಮಾಜಸೇವೆ ಶುರುಹಚ್ಚಿಕೊಂಡ-



ಹೊಸೂರು ರಸ್ತೆಯಲ್ಲಿನ ಚಿಕ್ಕಬೇಗೂರು ನಾರಾಯಣನ ಸ್ವಂತ ಊರು. ಜಾತಿಯಲ್ಲಿ ದಲಿತ. ಹೊಸೂರು ರಸ್ತೆಯ ಕೂಡ್ಲು, ಸಿಂಗಸಂದ್ರ, ನಾಗನಾಥಪುರ, ಸರ್ಜಾಪುರ, ಅತ್ತಿಬೆಲೆ, ಹೆಬ್ಬಗೋಡಿ, ಎಲೆಕ್ಟ್ರಾನಿಕ್ ಸಿಟಿ, ಆನೇಕಲ್ ಮತ್ತು ಬನ್ನೇರುಘಟ್ಟ ರಸ್ತೆಗಳಲ್ಲಿ ಜೆಸಿಬಿಗೆ ಆತನದೇ ಬೆಂಬಲಿಗರ ಹಿಂಡಿದೆ. ಅದರಲ್ಲೂ ಹೊಸೂರು ರಸ್ತೆಯ ಸುಭಾಶ್‌ನಗರ, ಬೇಗೂರು, ಹೊಸರೋಡು, ಸಿಂಗಸಂದ್ರ ಪರಿಯಾಗಳೆಂದರೆ ಆತನ ಪಾಲಿಗದು ಭದ್ರಕೋಟೆಯೆ. ಈ ಪೈಕಿ ಸುಭಾಶ್‌ನಗರದ ಬಡ ಮುಸ್ಲಿಮರಿಗೆ ಜೆಸಿಬಿಯೇ ನಿಂತು ಮಸೀದಿ ಕಟ್ಟಿಸಿಕೊಟ್ಟಿದ್ದಾನೆ. ಸಿಂಗಸಂದ್ರ, ಬೇಗೂರುಗಳಲ್ಲಿ ಮಕ್ಕಳ ಓದಿನಿಂದ ಹಿಡಿದು ರೇಷನ್ ಕೊಡುವತನಕ ಜೆಸಿಬಿಯ ಮಾತೇ ವೇದವಾಕ್ಯ.

ಇದು ಗೊತ್ತಾಗಿಯೇ ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿಗೆ ಜೆಸಿಬಿಯ ಮೇಲೆ ಕಣ್ಣು. ಕಳೆದ ಪಾಲಿಕೆ ಚುನಾವಣೆಯ ತನಕ ಎಲ್ಲವೂ ಸರಿಯಾಗಿದ್ದದ್ದು ಯಾವತ್ತು ಜೆಸಿಬಿ ಪಾಲಿಕೆ ಚುನಾವಣೆಗೆ ನಿಲ್ಲುತ್ತಾನೆಂಬುದು ಶಾಸಕ ಸತೀಶ್ ರೆಡ್ಡಿಗೆ ಖಾತರಿಯಾಯ್ತೋ, ಸಮಸ್ಯೆ ಶುರುವಾಗಿದ್ದೇ ಅಲ್ಲಿಂದ.

2009 ರಿಂದ ಶುರುವಾದ ಜೆಸಿಬಿಯ ಪೊಲೀಸ್ ಪ್ರಾಬ್ಲಂ ಇವತ್ತಿಗೂ ಮುಗಿದಿಲ್ಲ, ಮುಗಿಯುವ ಲಕ್ಷಣಗಳೂ ಇಲ್ಲ. ಬಿಬಿಎಂಪಿ ಎಲೆಕ್ಷನ್ನಿಗೆ ಇನ್ನೇನು ಆರು ತಿಂಗಳಿದೆ ಎನ್ನುವಾಗಲೇ ಮೈಕೋ ಲೇಔಟ್ ಇನ್ಸ್‌ಪೆಕ್ಟರ್ ಜನಾರ್ದನ್ ಮತ್ತು ಎಲೆಕ್ಟ್ರಾನಿಕ್ ಸಿಟಿ ಇನ್ಸ್‌ಪೆಕ್ಟರ್ ಪ್ರೇಮ್‌ಸಾಯಿ ಗುಂಡಪ್ಪ ರೈ ಬೆಂಗಳೂರಿನ ಸೆಷನ್ಸ್ ಕೋರ್ಟ್ ಆವರಣದಿಂದಲೇ ಜೆಸಿಬಿಯನ್ನು ಎಳೆದೊಯ್ದರು. ಹಾಗೆ ಎಳೆದೊಯ್ದವರೇನೂ ಸಣ್ಣಪುಟ್ಟ ಕೇಸು ಹಾಕಲಿಲ್ಲ, ನೇರವಾಗಿ ಗೂಂಡಾ ಕಾಯ್ದೆಯಡಿ ಜೈಲಿಗೆ ದಬ್ಬಿಬಿಟ್ಟರು.

ಅದು ಬಿಬಿಎಂಪಿ ಎಲೆಕ್ಷನ್ನಿಗೆ ನಿಲ್ಲದಂತೆ ಬಿಜೆಪಿ ಶಾಸಕ ಸತೀಶ್ ರೆಡ್ಡಿ ಹೆಣೆದ ಷಡ್ಯಂತ್ರವಾಗಿತ್ತು,


ಈ ರೀತಿ ಗೂಂಡಾ ಕಾಯ್ದೆಯಡಿ ಒಂದು ವರ್ಷ ಜೈಲು ಸಜೆ ಜೆಸಿಬಿ 2011 ರ ಜನವರಿ 10 ರಂದು ಜೈಲಿಂದ ಬಿಡುಗಡೆಯಾದರೆ ಬಿಡುಗಡೆಯಾದ ಅರ್ಧ ಗಂಟೆಯಲ್ಲೇ ಮತ್ತೆ ಮೂರು ಖೊಟ್ಟಿ ಕೇಸುಗಳನ್ನು ದಾಖಲಿಸಲಾಗಿತ್ತು, ಮತ್ತೆ ಜೈಲುಪಾಲಾದ ಜೆಸಿಬಿಗೆ ಹೇಗೋ [illegible] ಜಾಮೀನು ಸಿಕ್ಕಿದ ಮೂರೇ ದಿನಕ್ಕೆ ಹುಲಿಮಂಗಲದ ಕಾಂಗ್ರೆಸ್ ಮುಖಂಡ ರಾಜಗೋಪಾಲ ರೆಡ್ಡಿಯ ಮನೆಯಲ್ಲಿ ಸೀರೆ, ದಿನಸಿ, ಪುಸ್ತಕ ಹಂಚುವ ಕಾರ್ಯಕ್ರಮ ರೂಪಿಸುತ್ತಿರುವಾಗಲೇ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮತ್ತೊಂದು ಸುಳ್ಳು ಕೇಸು ದಾಖಲಾಗಿತ್ತು!

ಅದು ಮಧ್ಯರಾತ್ರಿಯಲ್ಲಿ ಪರಪ್ಪನ ಅಗ್ರಹಾರ ಪೊಲೀಸರ ಮೇಲೆ ದಾಳಿ ಮಾಡಿ ಪರಾರಿಯಾದ ಮಗದೊಂದು ಕೇಸು.


ಅಲ್ಲಿಗೆ ಪೊಲೀಸರು ತನ್ನನ್ನು ಎನ್‌ಕೌಂಟರ್ ಮಾಡಲು ಸಾಕ್ಷ್ಯಾಧಾರ ಸೃಷ್ಟಿಸಿಕೊಳ್ಳುತ್ತಿದ್ದಾರೆಂದೂ ಇದೆಲ್ಲವೂ ಬಿಜೆಪಿ ಶಾಸಕ ಸತೀಶ್ ರೆಡ್ಡಿಯ ಕಾರಸ್ಥಾನವೆಂದೂ ಜೆಸಿಬಿಗೆ ಖಾತರಿಯಾಗಿತ್ತು. ಕೇಸು ಬಿದ್ದದ್ದು ಗೊತ್ತಾಗಿದ್ದೇ ತಡ ಬೆಂಗಳೂರು ಬಿಟ್ಟೇ ಪರಾರಿಯಾದ. ಹೀಗೆ ಪರಾರಿಯಾದ ನಂತರ ಒಂದರ ಮೇಲೊಂದು ಸುಳ್ಳು ಕೇಸುಗಳಿಂದಲೇ ಹೈರಾಣಾಗಿ ಹೋಗಿದ್ದ ಜೆಸಿಬಿ ನಾರಾಯಣನ ಪತ್ನಿಗೆ ಈಗಿದ್ದ ಮೂವರು ಹೆಣ್ಣುಮಕ್ಕಳಲ್ಲದೆ ಪೊಲೀಸ್ ಲಾಕಪ್ಪಿನಲ್ಲಿರುವಾಗಲೇ ಅವಳಿ ಹೆಣ್ಣುಮಕ್ಕಳು ಜನಿಸಿದ್ದವು. ಇದರ ಹೊರತಾಗಿಯೂ ತಲೆ ಮರೆಸಿಕೊಂಡಿದ್ದ ಜೆಸಿಬಿ 2011 ರ ಜುಲೈನಲ್ಲಿ ಆರನೇ ಬಾರಿಗೆ ಪೊಲೀಸರಿಗೆ ಸಿಕ್ಕಿಬಿದ್ದದ್ದು ತಿರುಪತಿಯಲ್ಲಿ. ಅದೂ ಪತ್ನಿ ಮತ್ತು ತನ್ನ ಐವರು ಹೆಣ್ಣುಮಕ್ಕಳ ಜೊತೆ ತಿರುಪತಿ ತಿಮ್ಮಪ್ಪನ ದರ್ಶನ ಮುಗಿಸಿ ಹೊರಬಿದ್ದಿದ್ದೇ ತಡ ಪರಪ್ಪನ ಅಗ್ರಹಾರ ಮತ್ತು ಸರ್ಜಾಪುರದ ಪೊಲೀಸರು ಮುತ್ತಿಗೆ ಹಾಕಿದ್ದರು.



ಎಸಿಪಿ ವೀರಭದ್ರೇಗೌಡ



ನಾಗರಾಜ್



ಇನ್ಸ್‌ಪೆಕ್ಟರ್ ಜೈರಮೇಶ್

ಒಂದರಮೇಲೊಂದು ಸುಳ್ಳು ಕೇಸು ದಾಖಲಿಸಿ ಪರಾರಿಯಾಗುವಂತೆ ಮಾಡಿ ಅಂತಿಮವಾಗಿ ಎನ್‌ಕೌಂಟರ್ ಮಾಡಿ ಕೊಲ್ಲುವ ಪೊಲೀಸ್ ಪಿತೂರಿಯ ಅರಿವಿದ್ದ ಆತನ ಪತ್ನಿ ಮಂಜುಳಾ ತನ್ನ ಸಂಬಂಧಿಯೊಬ್ಬರ ಮೂಲಕ ಹೆಬಿಯಸ್ ಕಾರ್ಪಸ್ ಹಾಕಿಸದೆ ಹೋಗಿದ್ದರೆ ಅವತ್ತೇ ಆತನ ಹೆಣ ಬೀಳುತ್ತಿತ್ತು!

ಸಾಲದ್ದಕ್ಕೆ ಜೆಸಿಬಿ ಅರೆಸ್ಟಾದ ಸುದ್ದಿ ಟೀವಿಗಳಲ್ಲಿ ಪ್ರಸಾರವಾಗಿದ್ದರಿಂದಾಗಿ ಹೆದರಿದ ಪೊಲೀಸರು ಉಪಾಯವಾಗಿ ಜೈಲಿಗೆ ಸಾಗಿಸಿ ಕೈತೊಳೆದುಕೊಂಡರು. ಹೀಗೆ ಜೈಲುಪಾಲಾದವನ ವಿರುದ್ಧ ಸರ್ಜಾಪುರ ಠಾಣೆಯಲ್ಲೊಂದು ಹುಳಿಮಾವು ಠಾಣೆಯಲ್ಲಿ ಮತ್ತೊಂದು ಕ್ರಿಮಿನಲ್ ಕೇಸು ದಾಖಲಾಗಿತ್ತು. ಅದು ಜೆಸಿಬಿಯ ಶಿಷ್ಯರ ಮಧ್ಯೆಯೇ ಹುಡುಗಿಯ ಕಾರಣಕ್ಕಾಗಿ ನಡೆದ ಜಿದ್ದಾಜಿದ್ದಾಯಾಗಿತ್ತು. ಯಾರೋ ಸುನೀಲ ಎಂಬಾತ ಜೆಸಿಬಿಯ ಶಿಷ್ಯ ಅನಿಲನನ್ನು ಸಾಯಿಸಿದ್ದಕ್ಕೆ ಜೆಸಿಬಿ ಜೈಲೊಳಗಿದ್ದರೂ ಕೊಲೆಗೆ ಸಂಚು ಮಾಡಿದ್ದಾನೆಂದು ಕೇಸಿಗೆ ಸಿಲುಕಿಸಲಾಗಿತ್ತು. ಸರ್ಜಾಪುರದಲ್ಲಿ ಯಾರೋ ಹೊಡೆದಾಡಿಕೊಂಡರೆ ಅದಕ್ಕೆ ಜೈಲಲ್ಲಿದ್ದ ಜೆಸಿಬಿಯೇ ಪಿತೂರಿ ಮಾಡಿದ್ದಾನೆಂದು ಆರೋಪಿಸಲಾಗಿತ್ತು.

ರಾಜಕೀಯವಾಗಿ ಜೆಸಿಬಿಯನ್ನು ತಲೆ ಎತ್ತದ ಹಾಗೆ ಮಾಡುವುದು ಶಾಸಕ ಸತೀಶ್ ರೆಡ್ಡಿಯ ಹುನ್ನಾರವಾಗಿದ್ದರೆ ಇದನ್ನೇ ನೆಪ ಮಾಡಿಕೊಂಡು ಆತನ ರಿಯಲ್ ಎಸ್ಟೇಟ್ ಲಾಭವನ್ನು ದೋಚುವುದು ಪೊಲೀಸರ ಚಾಳಿಯಾಯಿತು. ಸಿಸಿಬಿಯ ಓರ್ವ ಇನ್ಸ್‌ಪೆಕ್ಟರ್ ಭರ್ಜರಿ ಸೈಟೊಂದನ್ನು ಲಪಟಾಯಿಸಿದರೆ ಮತ್ತೊಬ್ಬ ಇನ್ಸ್‌ಪೆಕ್ಟರ್ ಜೆಸಿಬಿಯ ವಶದಲ್ಲಿದ್ದ ಮೂರು ಸೈಟುಗಳನ್ನು ಕಮ್ಮಿ ರೇಟಿಗೆ ಕಿತ್ತಿದ್ದ. ಬರೋಬ್ಬರಿ ಮುಕ್ಕಾಲು ಡಜನ್ ಪೊಲೀಸ್ ಅಧಿಕಾರಿಗಳಿಗೆ ಜೆಸಿಬಿಯನ್ನು ಎಳೆತಂದು ರೊಕ್ಕ ಕೀಳುವುದೇ ಕಸುಬಾಗಿ ಹೋಗಿತ್ತು.



2009 ರಿಂದ 2013 ರ ವಿಧಾನಸಭೆ ಚುನಾವಣೆ ತನಕ ಜೆಸಿಬಿಯ ಮೇಲೆ ಒಂದು ಡಜನ್ ಖೊಟ್ಟಿ ಕೇಸುಗಳನ್ನು ದಾಖಲಿಸಲಾಗಿತ್ತು. ಹೊಸಕೋಟೆ, ವರ್ತೂರು ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲೂ ಕೇಸು ಬಿದ್ದಿತ್ತು. ಬಹುಶಃ ಬೆಂಗಳೂರಿನ ಯಾವೊಬ್ಬ ರೌಡಿಗೂ ಪೊಲೀಸರು ಈ ಪಾಟಿ ಕಾಡಿರಲಿಕ್ಕಿಲ್ಲ.

ಈ ಎಲ್ಲವುಗಳ ಹಿಂದಿದ್ದ ಸೂಕ್ಷ್ಮವೊಂದೆ. ಅದು ಸತೀಶ್ ರೆಡ್ಡಿಯ ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಜೆಸಿಬಿ ಕಾಲಿಡದ ಹಾಗೆ ಮಾಡುವುದು ಮತ್ತು ವಿಧಾನಸಭಾ ಚುನಾವಣೆಯುದ್ದಕ್ಕೂ ಜೆಸಿಬಿ ಪೊಲೀಸರಿಂದ ತಲೆ ಮರೆಸಿಕೊಂಡಿರುವಂತೆ ನೋಡಿಕೊಳ್ಳುವುದು. ಬಹುಶಃ ಜೆಸಿಬಿಯನ್ನು ಓಡಾಡಲು ಬಿಟ್ಟಿದ್ದರೆ ಬೊಮ್ಮನಹಳ್ಳಿಯಲ್ಲಿ ಸತೀಶ್ ರೆಡ್ಡಿಯಾಗಲಿ ಬೆಂಗಳೂರು ದಕ್ಷಿಣದಲ್ಲಿ ಕೃಷ್ಣಪ್ಪನಾಗಲಿ ಗೆಲ್ಲಲು ಸಾಧ್ಯವಿರುತ್ತಿರಲಿಲ್ಲ.

ಇಷ್ಟಾಗ್ಯೂ ಪೊಲೀಸರಿಂದ ತಲೆಮರೆಸಿಕೊಂಡಿದ್ದೇ ತನ್ನ ಹುಡುಗರನ್ನು ಬಿಟ್ಟು ಕಾಂಗ್ರೆಸ್ ಅಭ್ಯರ್ಥಿ ತೇಜಸ್ವಿನಿ ಪರವಾಗಿ ಜೆಸಿಬಿ ಪ್ರಾಮಾಣಿಕವಾಗೇ ಕೆಲಸ ಮಾಡಿದ್ದ. ಇದೇ ಕಾರಣಕ್ಕೆ ಸತೀಶ್ ರೆಡ್ಡಿಯ ವಿರುದ್ಧವಿದ್ದ ಜೆಡಿಎಸ್ ನಾಯಕ ಗೊಟ್ಟಿಗೆರೆ ಮಂಜನೂ ಜೆಸಿಬಿ ವಿರುದ್ಧ ತಿರುಗಿಬಿದ್ದ. ಮತ್ತೊಂದೆಡೆ ಸತೀಶ್ ರೆಡ್ಡಿಯನ್ನು ಸೋಲಿಸಲು ಒಳಗಿಂದೊಳಗೇ ಕಾಂಗ್ರೆಸ್ ಅಭ್ಯರ್ಥಿ ನಾಗಭೂಷಣ ರೆಡ್ಡಿಗೂ ಜೆಸಿಬಿ ಓಟು ಹಾಕಿಸಿದ್ದ. ಆದರೆ ಗೆದ್ದದ್ದು ಪೊಲೀಸ್ ಪಿತೂರಿಯೇ.

ಜೆಸಿಬಿ ಬೆಂಬಲಿಸಿದ್ದ ತೇಜಸ್ವಿನಿ ಡೀಲ್ ಮಾಡಿದ ಷಡ್ಯಂತ್ರದ ಫಲವಾಗಿ ಸೋತು ಹೋದರೆ ಬೊಮ್ಮನಹಳ್ಳಿಯಲ್ಲಿ ಸತೀಶ್ ರೆಡ್ಡಿ ತನ್ನೆಲ್ಲಾ ಪೊಲೀಸ್ ಬಲ, ಗೂಂಡಾಬಲದ ಮೂಲಕ ಗೆದ್ದುಬಿಟ್ಟ. ಅಷ್ಟಾಗ್ಯೂ ಅಧಿಕಾರಕ್ಕೆ ಬಂದದ್ದು ಕಾಂಗ್ರೆಸ್ ಸರ್ಕಾರ ತಾನೆ? ಬಿಜೆಪಿ ತೊಲಗಿದ ಮೇಲಾದರೂ ತನ್ನ ದುರ್ಗತಿಗೆ ಅಂತ್ಯ ಕಾಣಲಿದೆಯೆಂದೇ ಭಾವಿಸಿದ್ದ ಜೆಸಿಬಿಗೆ ಆಘಾತವಾಗಿದ್ದು ಇಲ್ಲಿಗೆ ತಿಂಗಳಿನಿಂದೀಚೆಗೆ ಇನ್ನೆರಡು ಖೊಟ್ಟಿ ಕೇಸುಗಳು ಬಿದ್ದನಂತರವೆ. ಇಲ್ಲಿಗೆ ತಿಂಗಳ ಹಿಂದೆ ಸರ್ಜಾಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಯಾರೋ ಹುಡುಗರು ಹೊಡೆದಾಡಿಕೊಂಡರೆ ಅದರಲ್ಲಿ ಜೆಸಿಬಿಯೇ ಭಾಗವಹಿಸಿದ್ದ ಎಂಬಂತೆ ಸರ್ಜಾಪುರ ಎಸ್‌ಐ ಪ್ರಕಾಶ್ ಕೇಸು ದಾಖಲಿಸಿದ್ದರು. ಇದರ ಹಿಂದಿದ್ದದ್ದು ಅತ್ತಿಬೆಲೆ ಸರ್ಕಲ್ ಇನ್ಸ್‌ಪೆಕ್ಟರ್ ವೆಂಕಟಶೆಟ್ಟಿ ಮತ್ತವರ ಗಾಡ್‌ಫಾದರ್ ಸತೀಶ್ ರೆಡ್ಡಿ!

ಇದು ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಜೆಸಿಬಿ ವಿರುದ್ಧ ಬಿದ್ದ ಮೊದಲ ಕೇಸಾದರೆ ಇಲ್ಲಿಗೆ ವಾರದ ಹಿಂದೆ ಅಂದರೆ ಅಕ್ಟೋಬರ್ 1 ರಂದು ಅಂದರೆ ಗಾಂಧಿ ಜಯಂತಿಯ ಮುನ್ನಾದಿನವೇ ಸಿಸಿಬಿ ಪೊಲೀಸರು ಮತ್ತೊಂದು ಸುಳ್ಳು ಕೇಸು ದಾಖಲಿಸಿದ್ದರು. ಅದು ಉದ್ಯಮಿಯೊಬ್ಬರನ್ನು ಕೊಲೆ ಮಾಡಿ ಹಣ ದೋಚಲು ಜೆಸಿಬಿ ತನ್ನ ಹುಡುಗರ ಮೂಲಕ ಸಂಚು ರೂಪಿಸಿದ್ದರ ವಿರುದ್ಧ ಪೊಲೀಸ್ ಕಾರ್ಯಾಚರಣೆ ಎಂಬಂತೆ ದಾಖಲಾದ ಕೇಸು.

ಬನ್ನೇರುಘಟ್ಟ ರಸ್ತೆಯ ವೆಂಕಿ, ಹರೀಶ, ವಿಜಯಕುಮಾರ್ ಹಾಗೂ ಅರುಣ ಎಂಬ ಜೆಸಿಬಿ ಬೆಂಬಲಿಗರನ್ನು ಬಂಧಿಸಿ ತಂದ ಸಿಸಿಬಿ ಪೊಲೀಸರು ಅವರನ್ನು ಹುಳಿಮಾವು ಠಾಣೆಗೊಪ್ಪಿಸಿ ಇಂಥದ್ದೊಂದು ಕಟ್ಟುಕತೆ ಹೆಣೆದಿದ್ದರು. ಅಲ್ಲಿಗೆ, ಬಿಜೆಪಿ ಕಾರಣಕ್ಕಾಗಿ ಶುರುವಾದ ಜೆಸಿಬಿಯ ದುರಂತ ಕಾಂಗ್ರೆಸ್ ಬಂದ ನಂತರವೂ ಮುಂದುವರಿದಂತಾಗಿತ್ತು. ವರ್ಷದ ಹಿಂದೆಯೇ ಭೂಗತನಾಗಿದ್ದ ಜೆಸಿಬಿ ಕನಿಷ್ಠ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರವಾದರೂ ಸರೆಂಡರಾಗಿ ತನ್ನ ಪಾಡಿಗೆ ತಾನಿದ್ದು ಬಿಡುವ ಯೋಚನೆಯಲ್ಲಿದ್ದ. ಈಗ ನೋಡಿದರೆ ಕಾಂಗ್ರೆಸ್ ಸರ್ಕಾರದ ಪೊಲೀಸರದ್ದೂ ಇದೇ ಕತೆ.

ಹಾಗಂಥ ಕೈಕಟ್ಟಿ ಕೂರಲಾದಿತೆ? ಅವತ್ತು ಚುನಾವಣೆಯಲ್ಲಿ ಬೆಂಬಲಿಸಿದ ತೇಜಸ್ವಿನಿಯನ್ನು ಕಂಡು ಕಣ್ಣೀರಿಟ್ಟರೆ: ಡೋಂಟ್ ವರಿ, ನೀನು ನನ್ನ ತಮ್ಮನಿದ್ದಂತೆ. ನಾನೇ ಹೋಮ್ ಮಿನಿಸ್ಟರ್ ಬಳಿ ಮಾತಾಡಿ ಎಲ್ಲಾ ಸರಿ ಮಾಡ್ತೀನಿ ಎಂದಿದ್ದ ತೇಜಸ್ವಿನಿ ಒಂದು ಹಂತದವರೆಗೆ ಓಡಾಡಿದ್ದೇನೋ ಸರಿ. ಆದರೆ ಈಗ ಫೋನೇ ಸ್ವಿಚ್ ಆಫ್ ಆಗಿದೆ. ಇನ್ನು ಬೊಮ್ಮನಹಳ್ಳಿಯ ಕಾಂಗ್ರೆಸ್ ನಾಯಕರ ಮನೆಬಾಗಿಲು ಬಡಿದರೆ ಅವರ್‍ಯಾರೂ ಪತ್ತೆಯೇ ಇಲ್ಲ. ಮನೆಯಲ್ಲಿದ್ದೂ ಇಲ್ಲ ಎಂದು ತಲೆ ತಪ್ಪಿಸಿಕೊಳ್ಳುತ್ತಿದ್ದಾರೆ.

ಇನ್ನು ಯಾರೇ ಪೊಲೀಸ್ ಅಧಿಕಾರಿಯನ್ನು ಕಂಡು ಕಷ್ಟ ಹೇಳಹೊರಟರೂ ಪ್ರಯೋಜನವಿಲ್ಲ. ಏಕೆಂದರೆ ಕೇಸುಗಳ ಮೇಲೆ ಸುಳ್ಳು ಕೇಸು ದಾಖಲಿಸಿ ಪೊಲೀಸ್ ಕಾಟಕ್ಕೆ ಹೆದರಿ ಪರಾರಿಯಾಗುವಂತೆ ಮಾಡಿದ ಪೊಲೀಸರ ದೃಷ್ಟಿಯಲ್ಲಿ ಜೆಸಿಬಿ ಮೋಸ್ಟ್ ವಾಂಟೆಡ್ ಕ್ರಿಮಿನಲ್. ಮಾನವಹಕ್ಕು ಆಯೋಗದ ಮುಂದೆ ನಿಂತು ಕಣ್ಣೀರಿಡುವ ಆತನ ಹತಾಶ ಪತ್ನಿ ಮತ್ತು ಐವರ ಹೆಣ್ಣುಮಕ್ಕಳ ಮನವಿಯನ್ನು ಆಲಿಸುವ ವ್ಯವಧಾನವಾದರೂ ಯಾರಿಗಿದೆ?

ದಲಿತನೊಬ್ಬ ರೌಡಿಯಾಗಿದ್ದು ರಾಜಕಾರಣಿಯಾಗ ಹೊರಟದ್ದೇ ಮಹಾಪರಾಧವಾಯಿತೆ? ಅಥವಾ ರಿಯಲ್ ಎಸ್ಟೇಟ್‌ನ ಪಾಲನ್ನು ಪೊಲೀಸರಿಗೆ ತಪ್ಪಿಸಿದ್ದೇ ತಪ್ಪಾಯಿತೆ?

● ರಾ. ಸೋಮನಾಥ್

'ಅರ್ಚಕಿ' ದೀಕ್ಷೆ: ಪೂಜಾರಿಯ ಮತ್ತೊಂದು ಪರಾಕ್ರಮ!!

ಕರಾವಳಿಯ ದೊಡ್ಡ ಬಾಯಿ ರಾಜಕಾರಣಿ ಜನಾರ್ದನ ಪೂಜಾರಿ ಈಗೀಗ ನಿಜ ಸಮಾಜ ಸುಧಾರಕನಾಗಿ 'ಸದ್ದು' ಮಾಡುತ್ತಿದ್ದಾರೆ. ಕ್ರಾಂತಿಕಾರಿ ಸಂತ ನಾರಾಯಣ ಗುರುಗಳ 'ಒಂದೇ ಜಾತಿ-ಒಂದೇ ಮತ- ಒಂದೇ ದೇವರು' ಎಂಬ ತತ್ವಾದರ್ಶದ ಬದಲಾವಣೆ ತರುವ 'ರಿಸ್ಕ್' ತೆಗೆದುಕೊಳ್ಳುತ್ತಿದ್ದಾರೆ. ಪುರೋಹಿತಶಾಹಿ ನಿರ್ಮಿತ ಮನು ವ್ಯವಸ್ಥೆಯಲ್ಲಿ 'ಅಮಂಗಳೆ' ಎನಿಸಿಕೊಂಡ ಗಂಡನಿಲ್ಲದ ಹೆಂಗಸರಿಗೆ 'ಸುಮಂಗಲೆ' ಸ್ಥಾನ-ಮಾನ, ಅರ್ಚಕಿ ದೀಕ್ಷೆ ಕೊಡುವಂಥ ಸರಣಿ ಪರಾಕ್ರಮ ಪೂಜಾರಿ ಮಾಡುತ್ತಿದ್ದಾರೆ...

ಬ್ರಾಹ್ಮಣಿಕೆಯ ಹಂಗು-ಗುಂಗು ಇಲ್ಲದ ಗೋಕರ್ಣನಾಥ ದೇವಾಲಯವನ್ನು ನಾರಾಯಣ ಗುರುಗಳು 1912ರಲ್ಲಿ ಮಂಗಳೂರಿನ ಕುದ್ರೋಳಿ ಎಂಬಲ್ಲಿ ಸ್ಥಾಪಿಸಿದ್ದರು. ಇದು ಕಾಲಕ್ರಮೇಣ ಜಾತಿ ಹಿತಾಸಕ್ತರ ಕೈಗೆ ಜಾರಿತ್ತು. ಇದೀಗ ಅದರ ಉಸ್ತುವಾರಿ ಜನಾರ್ದನ ಪೂಜಾರಿ ವಹಿಸಿಕೊಂಡಿದ್ದಾರೆ. ಒಂದೊಂದೇ ಪುರೋಹಿತಶಾಹಿ ರೀತಿ-ರಿವಾಜಿಂದ ಸದ್ರಿ ದೇಗುಲವನ್ನು ಪೂಜಾರಿ ಮುಕ್ತವಾಗಿಸುವ ಪ್ರಯತ್ನ ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ. ಈ ದೇವಸ್ಥಾನದಲ್ಲಿ ಕಳೆದ ನವರಾತ್ರಿ ಹೊತ್ತಲ್ಲಿ ಗಂಡ ಗತಿಸಿದ ಹೆಂಗಸರಿಗೆ ಅರಿಶಿಣ, ಕುಂಕುಮ, ಬಳೆ, ಬಾಗೀನ ಕೊಡಿಸಿದ್ದರು ಪೂಜಾರಿ. ಅಷ್ಟೇ ಅಲ್ಲ, ಬೆಳ್ಳಿ ರಥವನ್ನು ಇದೇ ಅಮಂಗಳೆಯರಿಂದ ಎಳೆಸಿ 'ಅನಿಷ್ಟ' ತೊಡೆದು ಹಾಕುವ ಕೆಲಸ ಮಾಡಿದ್ದರು; ಗೊಡ್ಡು ದೂಷಣ ಬಗ್ಗೆ ಜಾಗೃತಿ ಮೂಡಿಸಿದ್ದರು; ಗಂಡನಿಲ್ಲದವರು ಮಂಗಳ ಕಾರ್ಯದಲ್ಲಿ ಭಾಗವಹಿಸದಂತೆ ಜನಿವಾರಿಗಳು ತಲತಲಾಂತರದಿಂದ ಹೇರಿದ್ದ ನಿಷೇಧವನ್ನು ಧಿಕ್ಕರಿಸಿದ್ದರು. ಅಂದು ಲೋಕನಿಂದಿತ ಹೆಂಗಸರಲ್ಲಿ ಆತ್ಮಸ್ಥೈರ್ಯ ತುಂಬುವ, ಅವರಿಗೆ ಸಮಾಜ ಗೌರವ ಕೊಡುವ ಹೊಸ ಸಂಪ್ರದಾಯ ಶುರು ಮಾಡಲಾಗಿತ್ತು.

ಇದೇ ಗೋಕರ್ಣನಾಥ ದೇಗುಲದಲ್ಲಿ ಪೂಜಾರಿಯ ಸುಧಾರಣಾವಾದಿಗಳ ಟೀಮು ಕಳೆದ 6ನೇ ತಾರೀಖಿನಂದು ಇಬ್ಬರು ಮಹಿಳೆಯರನ್ನು 'ಅರ್ಚಕಿ'ಯರಾಗಿ ನೇಮಿಸಿದೆ.



ಲಾಗಾಯ್ತಿನ ಪುರುಷ ಅರ್ಚಕ ನಿಯಮವನ್ನು ಪ್ರಜ್ಞಾಪೂರ್ವಕವಾಗೇ ಉಲ್ಲಂಘಿಸಲಾಗಿದೆ. ಇವರು ಬರೇ ಹೆಂಗಸರಷ್ಟೇ ಅಲ್ಲ, ಕಳಂಕಿತರು-ವಿಧವೆಯರು ಎಂದು ಮೇಲ್ವರ್ಣೀಯರ ಕೊಂಕು-ಕುಹಕಕ್ಕೆ ಈಡಾಗಿದ್ದ ಗಂಡನನ್ನು ಕಳೆದುಕೊಂಡು ಹೆಂಗಸರು; ಶೂದ್ರರೆಂಬ ದೂಷಣೆಗೆ-ತಾತ್ಸಾರಕ್ಕೆ ತುತ್ತಾಗಿದ್ದ ಸಮಾಜದಿಂದ ಬಂದವರು. ಇಂಥ ತಿರಸ್ಕೃತ ಹೆಂಗಸರಿಬ್ಬರನ್ನು ಗರ್ಭಗುಡಿಯೊಳಗೆ ತಂದು ನಿಲ್ಲಿಸಿರುವ ಪೂಜಾರಿ ಮತ್ತವರ ಪಡೆಯ ಸಾಹಸ ಶ್ಲಾಘನೀಯವೇ ಸರಿ. ಹೆಣ್ಣನ್ನು ದೇವತೆ ಎನ್ನುತ್ತಲೇ ಆಕೆಯನ್ನು ಕೀಳಾಗಿ-ಕೊಳಕಾಗಿ ನಡೆಸಿಕೊಳ್ಳುವ 'ಧರ್ಮಾತ್ಮ'ರಿಗೆ ಪೂಜಾರಿ ಪಾಠ ಹೇಳಿದಂತಿದೆ.

ಪೂಜಾರಿಯ ಮುಂದಾಳತ್ವದಲ್ಲಿ ಮಹಿಳೆಯರ ಸ್ಥಾನಮಾನ ಎತ್ತಿ ಹಿಡಿಯುವ ಕ್ರಾಂತಿಗೆ ವೇದಿಕೆಯಾಗಿರುವ ಕುದ್ರೋಳಿ ದೇವಾಲಯ ಸ್ಥಾಪನೆ ಆಗಿದ್ದೇ ಬ್ರಾಹ್ಮಣಿಕೆಗೆ ಸೆಡ್ಡು ಹೊಡೆದು. ಉತ್ತರ ಕನ್ನಡದ ಕುಪ್ರಸಿದ್ಧ ಗೋಕರ್ಣ ಮಹಾಬಲೇಶ್ವರ ದೇವಸ್ಥಾನದಲ್ಲಿ ಬಿಲ್ಲವ (ಈಡಿಗ) ಹಿರಿಯರೊಬ್ಬರಿಗೆ ಜಾತಿ-ಜನಿವಾರದ ನೆಪದಿಂದ ಅವಮಾನಿಸಲಾಗಿತ್ತು. ಈ ಢೋಂಗಿ ಮಡಿ-ಮೈಲಿಗೆ ಪದ್ಧತಿಯಿಂದ ಘಾಸಿಗೊಂಡ ಆತ ಆಗ ಕೇರಳದಾದ್ಯಂತ 'ಶೂದ್ರ ಧರ್ಮ' ಪ್ರಸಾರದಲ್ಲಿ ತೊಡಗಿಕೊಂಡಿದ್ದ ನಾರಾಯಣ ಗುರುಗಳ ಸಾನಿಧ್ಯದಲ್ಲಿ ಕುದ್ರೋಳಿ ದೇವಸ್ಥಾನ ಆರಂಭಿಸಿದ್ದರು. ಅಂದು ಈ ಗೋಕರ್ಣನಾಥ ದೇಗುಲದ ಅರ್ಚಕರಾಗಿದ್ದವರು ಬ್ರಾಹ್ಮಣರಲ್ಲ, ಜನಿವಾರ ರಹಿತ ಪಕ್ಕಾ ಶೂದ್ರರೇ ಈ ದೇವಸ್ಥಾನದಲ್ಲಿ ಪೂಜಾ ವಿಧಿ ನೆರವೇರಿಸಿಕೊಂಡು ಹೋಗುತ್ತಿದ್ದರು. 'ಶಾಂತಿ' ನಾಮಾಂಕಿತದ ಜನಿವಾರ ಇಲ್ಲದ ಅಬ್ರಾಹ್ಮಣರಿಗೆ ನಾರಾಯಣ ಗುರುಗಳು ತರಬೇತಿ ನೀಡಿ ಅರ್ಚಕರಾಗಿಸುತ್ತಿದ್ದ ಕಾಲವದು. ಕೇರಳದಾದ್ಯಂತ ಬ್ರಾಹ್ಮಣಿಕೆ-ಪುರೋಹಿತಶಾಹಿಕೆ ವಿರುದ್ಧ ಮಾನವತಾವಾದದ 'ಪಂಥ'ವನ್ನೇ ಕಟ್ಟಿದ್ದ ನಾರಾಯಯಣ ಗುರುಗಳು ಅನೇಕ ಶೂದ್ರ ದೇವಾಲಯಗಳನ್ನು ಸ್ಥಾಪಿಸಿದ್ದರು. ಕೇರಳದ ಉದ್ದಗಲಕ್ಕೂ ವ್ಯಾಪಿಸಿದ್ದ ಈ ದೇಗುಲಗಳಲ್ಲಿ

ಮಡಿ-ಮೈಲಿಗೆ ಇಲ್ಲ!


ಕ್ರಾಂತಿಕಾರಿ ಶೂದ್ರ ಸಂತ ನಾರಾಯಣ ಗುರುವಿನ ತತ್ವ-ಸಿದ್ಧಾಂತದಲ್ಲಿ ಮಡಿ-ಮೈಲಿಗೆ-ಮುಟ್ಟಿಗೆ ಆಸ್ಪದವೇ ಇಲ್ಲ! ಅವರದು ಮಹಿಳೆಯರನ್ನು ಗೌರವಾದರದಿಂದ ಕಾಣುವ ಪ್ರಾಮಾಣಿಕ ಚಿಂತನೆ. ಸ್ತ್ರೀಯರನ್ನು ಮಾತೆ-ದೇವತೆ ಎನ್ನುತ್ತಲೇ ಹಿಡಿದು ಬಡಿಯುವ, ಬೆತ್ತಲಾಗಿಸಿ ಕೇಕೆ ಹಾಕುವ, ಅಮಂಗಲೆಯರೆಂದು ಮೂದಲಿಸುವ ಎಡಬಿಡಂಗಿತನ ನಾರಾಯಣ ಗುರು ಎಂದೂ ತೋರಿಸಿದವರಲ್ಲ. ಅವರ ಧರ್ಮ-ಕರ್ಮ ನೇರಾನೇರ; ದೋಷ ರಹಿತ.

ನಾರಾಯಣ ಗುರುಗಳ ಮಾರ್ಗದರ್ಶನದಲ್ಲಿ ಬದಲಾವಣೆಗೆ ತೆರೆದುಕೊಂಡಿರುವ ಕುದ್ರೋಳಿಯ ಗೋಕರ್ಣನಾಥ ದೇವಾಲಯದಲ್ಲಿ ಸೂತಕದ ನಂಬಿಕೆಯಿಲ್ಲ. ಮುಟ್ಟು-ಮೈಲಿಗೆ ಎಂದು ಹೆಂಗಸರನ್ನು ದೂರ ಇಡುವ ಕೊಳಕು ಪದ್ಧತಿಯಿಲ್ಲ. ಹೆಣ್ಣು ಮಕ್ಕಳಿಗೆ ಮುಟ್ಟಾದಾಗಲೂ ದೇವಸ್ಥಾನ ಪ್ರವೇಶ ಮುಕ್ತವಾಗಿದೆ. ಹೆಂಗಸರು ವರ್ಷದ 365 ದಿನವೂ ಈ ದೇವಸ್ಥಾನಕ್ಕೆ ನಿರಾತಂಕವಾಗಿ ಬಂದುಹೋಗಬಹುದು!


ಇಲ್ಲಿ ದಲಿತರಿಗೂ ಪೂಜೆಗೆ ಅವಕಾಶ ಕೊಡುವುದಾಗಿ ಜನಾರ್ದನ ಪೂಜಾರಿ ಹೇಳುತ್ತಿದ್ದಾರೆ. ಗರ್ಭಗುಡಿಯೊಳಗೆ ದಲಿತರ ಬಿಟ್ಟುಕೊಳ್ಳಲು ಸಿದ್ಧವಾಗಿರುವ ಕುದ್ರೋಳಿ ದೇವಸ್ಥಾನದಲ್ಲಿ ಎಲ್ಲರೂ ಒಂದೇ! ಇದೇ ತಾನೆ ನಿಜವಾದ ಧರ್ಮ?!

ಮಂಡ್ಯ: ಕಾಣದಂತೆ ಮಾಯವಾದ ಸಮಾಜಸೇವಕರು

ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಅಶೋಕ್ ಜಯರಾಂ ಮೂವತ್ತನೇ ವಯಸ್ಸಿಗೆ ಎಂಎಲ್‌ಎ ಆಗೇಬಿಟ್ಟೆನೆಂಬ ಹುಳು ಅಶೋಕ್ ಜಯರಾಂ ತಲೆಗೆ ಹೊಕ್ಕಿದ್ದರಿಂದ ದೇವೇಗೌಡರು ಹೇಳಿದರೂ ಕೇಳದೆ ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲುಳಿದ. ಎಳಸು ರಾಜಕೀಯ ನಿರ್ಧಾರದಿಂದಾಗಿ ಕ್ಷೇತ್ರದಿಂದಲೇ ಕಣ್ಮರೆಯಾಗಿದ್ದಾನೆ. ಮಂಡ್ಯ ವಿಧಾನಸಭಾ ಕ್ಷೇತ್ರವನ್ನೇ ಟಾರ್ಗೆಟ್ ಆಗಿ ಇಟ್ಟುಕೊಂಡ ಗಣಿಗ ರವಿಕುಮಾರ್ ಮಂಡ್ಯಕ್ಕೆ ಬಂದಾಗಲೆಲ್ಲ ಐಷಾರಾಮಿ ಕಾರುಗಳಲ್ಲೇ ಬರುತ್ತಿದ್ದ. ಈತನಲ್ಲಿದ್ದ ಹಣದ ಥೈಲಿ ಕಂಡೇ ಹಲವರು ಈತನ ಅಭಿಮಾನಿಗಳಾಗಿ ಹೋದರು.ಆದರೆ ಚುನಾವಣೆ ಮುಗಿದು ಅಂಬಿ ಎಂಎಲ್‌ಎ ಆಗಿ ಮಿನಿಷ್ಟ್ರು ಆದ ಮೇಲೆ ಮಂಡ್ಯದಲ್ಲಿ ಆತನ ಮುಖದರ್ಶನ ಕಾಣುವುದೇ ತೀರಾ ಅಪರೂಪವಾಗಿದೆ.



ಅಶೋಕ್ ಜಯರಾಂ



ಗಣಿಗ ರವಿಕುಮಾರ್

ಎಂಎಲ್‌ಎ ಆಗುವ ಹುಚ್ಚು ಹತ್ತಿಸಿಕೊಂಡು ಕಳೆದ ವಿಧಾನಸಭಾ ಚುನಾವಣೆಗೂ ಎರಡು ವರ್ಷಗಳ ಮುನ್ನ ಮಂಡ್ಯ ವಿಧಾನಸಭಾ ಕ್ಷೇತ್ರದ ಗಲ್ಲಿಗಲ್ಲಿಗಳಲ್ಲಿ ದಿನನಿತ್ಯ ತನ್ನ ಬೆಂಬಲಿಗರನ್ನು ಕಟ್ಟಿಕೊಂಡು ಮದುವೆ, ಮುಂಜಿ, ತಿಥಿ ಮೊದಲಾದ ಕಡೆ ಸುತ್ತುತ್ತಾ, ದೇವಸ್ಥಾನ ಕಟ್ಟಲು, ಸಭೆ-ಸಮಾರಂಭ ನಡೆಸಲು ಕಾಸು ಕೊಡುತ್ತಾ ಎಂಎಲ್‌ಎ ಆಗೇ ಬಿಟ್ಟಿದ್ದೇವೆಂಬ ಕನಸು ಹೊತ್ತಿದ್ದ ಸ್ವಯಂಘೋಷಿತ ಸಮಾಜಸೇವಕರಾದ ಅಶೋಕ್ ಜಯರಾಂ ಹಾಗೂ ಗಣಿಗ ರವಿಕುಮಾರ್ ಈಗ ಹುಡುಕಿದರೂ ಸಿಗುತ್ತಿಲ್ಲ. ಮಂಡ್ಯ ಕ್ಷೇತ್ರದಲ್ಲಿ ಒಂದಷ್ಟು ಹವಾ ಎಬ್ಬಿಸಿದ್ದ ಈ ನಾಯಕರು ಕಾಣದಂತೆ ಮಾಯವಾಗಿದ್ದಾರೆ. ಎಲ್ಲಿ ಹೋದರೋ, ಕಣ್ಣಿಗೆ ಕಾಣದಾದರೋ ಎಂದು ಜನ ಆಡಿಕೊಳ್ಳುವಂತಾಗಿದೆ.

ನಾಟ್‌ರೀಚಬಲ್ ಆದ ಅಶೋಕ್ ಜಯರಾಂ

ಮಾಜಿ ಸಚಿವ ಎಸ್.ಡಿ.ಜಯರಾಂ ಪುತ್ರ ಅಶೋಕ್ ಜಯರಾಂ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಿದ್ದ. ಅದ್ಯಾರು ಈತನ ತಲೆಗೆ ಎಂಎಲ್‌ಎ ಆಗುವ ಹುಚ್ಚು ಹತ್ತಿಸಿದರೋ ಗೊತ್ತಿಲ್ಲ, ಈಗ್ಗೆ ಎರಡು ವರ್ಷಗಳ ಹಿಂದೆ ದಿಢೀರ್ ಎಂದು ಮಂಡ್ಯ ರಾಜಕೀಯಕ್ಕೆ ಕಾಲಿಟ್ಟ ಅಶೋಕ್ ಜಯರಾಂ ಎಸ್.ಡಿ.ಜಯರಾಂ ಗ್ರಾಮೀಣಾಭಿವೃದ್ಧಿ ಸಂಸ್ಥೆಯಡಿ ಮಂಡ್ಯ ವಿಧಾನಸಭಾ ಕ್ಷೇತ್ರವನ್ನು ಗುರಿಯಾಗಿಟ್ಟುಕೊಂಡು ಹತ್ತಾರು ಕಡೆ ಉಚಿತ ಆರೋಗ್ಯ ಶಿಬಿರಗಳನ್ನು ನಡೆಸಿ ಜನರಿಗೆ ಹತ್ತಿರವಾದ. ಆತನ ತಾಯಿ ಪ್ರಭಾವತಿ, ಈತನ ಅಕ್ಕ ಅನುರಾಧ, ಭಾವ ಡಾ.ಪರಮೇಶ್ ಕೂಡ ಆತನ ಹಿಂದೆ ನಿಂತು ಸಾಥ್ ನೀಡಿದ್ದರು.

ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಅಶೋಕ್ ಜಯರಾಂ ಜೆಡಿಎಸ್‌ನ ಯಾರೇ ವರಿಷ್ಠರು ಬಂದರೂ ನಗರದೆಲ್ಲೆಡೆ ಫ್ಲೆಕ್ಸ್-ಬ್ಯಾನರ್‌ಗಳನ್ನು ಹಾಕಿಸಿಕೊಂಡು ಎಂಎಲ್‌ಎ ಆಕಾಂಕ್ಷಿ ಎಂದು ಭರ್ಜರಿಯಾಗೇ ಬಿಂಬಿಸಿಕೊಳ್ಳುತ್ತಿದ್ದ. ಒಂದಷ್ಟು ಯುವಕರನ್ನು ಕಾರಿಗೆ ತುಂಬಿಕೊಂಡು ಮದುವೆ, ಮುಂಜಿ, ತಿಥಿ ಎಂದೆಲ್ಲಾ ಸುತ್ತುತ್ತಿದ್ದ. ಗಣೇಶೋತ್ಸವ, ರಾಜ್ಯೋತ್ಸವ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹಣ ಕೊಡುತ್ತಿದ್ದ ಅಶೋಕ್ ಜಯರಾಂ ವಿಧಾನಸಭೆ ಟಿಕೆಟ್ ತನಗೇ ಗ್ಯಾರಂಟಿ ಎಂದು ನಂಬಿಕೊಂಡಿದ್ದ. ಹೆಚ್.ಡಿ.ಕುಮಾರಸ್ವಾಮಿ, ದೇವೇಗೌಡರ ಮುಂದೆ ತನ್ನ ಭಾರೀ ಬೆಂಬಲಿಗರನ್ನು ಸೇರಿಸಿ ಅವರ ಗಮನ ಸೆಳೆದು ಟಿಕೆಟ್ ಗಿಟ್ಟಿಸುವ ಸರ್ಕಸ್ ಮಾಡಿದ್ದ. ಇಷ್ಟಾದರೂ ಎಂಎಲ್‌ಎ ಟಿಕೆಟ್ ಎಂ.ಶ್ರೀನಿವಾಸ್‌ಗೆ ಕೊಟ್ಟ ಕುಮಾರಸ್ವಾಮಿ ಮತ್ತು ದೇವೇಗೌಡ ಈತನ ಎಂಎಲ್‌ಎ ಕನಸಿಗೆ ತಣ್ಣೀರೆರಚಿದರು. ಯಾವಾಗ ಟಿಕೆಟ್ ಸಿಗಲಿಲ್ಲವೋ ಈತನ ಹಿಂದಿದ್ದ ಕೆಲ ನಾಯಕರು, ರಾಜಕೀಯದ ಗಂಧ-ಗಾಳಿ ಗೊತ್ತಿಲ್ಲದ ಯುವಕರು ಆತನ ಬಂಡಾಯ ಜೆಡಿಎಸ್ ಅಭ್ಯರ್ಥಿಯಾಗಿ ನಿಲ್ಲುವಂತೆ ತಲೆತಿಂದರು. ತಾಯಿ ಪ್ರಭಾವತಿ ಇದಕ್ಕೆ ಅಸಮ್ಮತಿ ಸೂಚಿಸಿದರೂ ಈತನ ಅಕ್ಕ ಅನುರಾಧ, ಭಾವ ಡಾ.ಪರಮೇಶ್ ಒತ್ತಡ, ಬೆಂಬಲಿಗರ ಒತ್ತಾಯಕ್ಕೆ ಮಣಿದ ಅಶೋಕ್ ಜಯರಾಂ ಬಂಡಾಯ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದ. ಮೂವತ್ತನೇ ವಯಸ್ಸಿಗೆ ಎಂಎಲ್‌ಎ ಆಗೇಬಿಟ್ಟೆನೆಂಬ ಹುಳು ಅಶೋಕ್ ಜಯರಾಂ ತಲೆಗೆ ಹೊಕ್ಕಿದ್ದರಿಂದ ದೇವೇಗೌಡರು ಹೇಳಿದರೂ ಕೇಳದೆ ಬಂಡಾಯ ಅಭ್ಯರ್ಥಿಯಾಗಿ ಕಣದಲ್ಲುಳಿದ.

ಕೈಕೊಟ್ಟ ಬೆಂಬಲಿಗರು

ಬಂಡಾಯ ಜೆಡಿಎಸ್ ಅಭ್ಯರ್ಥಿಯಾಗಿ ಕಣಕ್ಕಿಳಿದ ಮಾರನೆ ದಿನದಿಂದಲೇ ಅಶೋಕ್ ಜಯರಾಂ ಸುತ್ತಲಿದ್ದ ಬೆಂಬಲಿಗರ ಪಡೆ ನಿಧಾನವಾಗಿ ಕರಗತೊಡಗಿತು. ಗಾಂಧಿನಗರ ಅನಿಲ್, ಅನುಪ್, ಆನಂದರಂತಹ ಒಂದಷ್ಟು ಯುವಕರೊಂದಿಗೆ ಏಕಾಂಗಿಯಾಗಿ ಕ್ಷೇತ್ರವನ್ನು ಸುತ್ತುತ್ತಿದ್ದ ಅಶೋಕ್ ಜಯರಾಂಗೆ ಆಗ ಚುನಾವಣೆಯ ವಾಸ್ತವ ಸತ್ಯ ಗೊತ್ತಾಯಿತು. ಲೆಕ್ಕಾಚಾರದ ಮನುಷ್ಯರಾದ ಕಲ್ಲಹಳ್ಳಿ ನಾಗೇಂದ್ರ, ಶಿವನಂಜು ಮತ್ತಿತರರು ಅಂಬಿ ಜೊತೆ ನಿಂತರೆ ಸೇಫು ಎಂದು ಭಾವಿಸಿ ಕಾಂಗ್ರೆಸ್ ಸೇರಿಕೊಂಡರು. ಇತ್ತ ಸರಿಯಾದ ನಿರ್ಧಾರ ತೆಗೆದುಕೊಳ್ಳಲಾಗದ ಅಶೋಕ್ ಜಯರಾಂ ತನ್ನ ಹಿಂದಿದ್ದ ಬೆಂಬಲಿಗರೇ ಕಾಂಗ್ರೆಸ್ ಕದ ತಟ್ಟಿದ್ದರಿಂದ ಉತ್ಸಾಹವನ್ನೇ ಕಳೆದುಕೊಂಡಿದ್ದ.

ಕಡೆಗೆ ದೇವೇಗೌಡರು ಕಣದಿಂದ ನಿವೃತ್ತಿಯಾಗುವಂತೆ ಕೇಳಿಕೊಂಡರು. ಇದನ್ನೇ ಕಾಯುತ್ತಿದ್ದ ಅಶೋಕ್ ಜಯರಾಂ ತನಗೆ ಎಂಪಿ ಟಿಕೆಟ್ ಕೊಡುವ ಭರವಸೆ ನೀಡಿದ್ದಾರೆಂದು ಹೇಳಿ ಕಣದಿಂದಲೇ ನಿವೃತ್ತಿ ಘೋಷಿಸಿದ. ಈ ಬೆಳವಣಿಗೆಯಿಂದ ಸಿಟ್ಟುಗೊಂಡ ಬೆರಳೆಣಿಕೆಯ ಬೆಂಬಲಿಗರು ಅಶೋಕ್ ಜಯರಾಂನಿಂದ ದೂರವಾದರು. ಅದಾದನಂತರ ಕ್ಷೇತ್ರದಲ್ಲೇ ಕಾಣಿಸಿಕೊಳ್ಳದ ಅಶೋಕ್ ಜಯರಾಂ ಮಂಡ್ಯದಿಂದಲೇ ಕಣ್ಮರೆಯಾಗಿಬಿಟ್ಟ.

ಎಲ್ಲವೂ ಬಂದ್

ಚುನಾವಣೆಗೂ ಮುನ್ನ ಅಲ್ಲಿ ಕಾರ್ಯಕ್ರಮ, ಇಲ್ಲಿ ಕಾರ್ಯಕ್ರಮ ಎಂದೆಲ್ಲಾ ಕ್ಷೇತ್ರದ ಜನರಿಗೆ, ಪತ್ರಕರ್ತರಿಗೆ ಮೆಸೇಜ್ ಮೇಲೆ ಮೆಸೇಜ್ ರವಾನಿಸುತ್ತಿದ್ದ, ಫೋನ್ ಮಾಡಿ ಕರೆಯುತ್ತಿದ್ದ ಅಶೋಕ್ ಜಯರಾಂ ತನ್ನ ಮದುವೆಗೆ ಯಾವ ಪತ್ರಕರ್ತರನ್ನೂ ಆಹ್ವಾನಿಸಲೇ ಇಲ್ಲ. ಅದು ಹೋಗಲಿ, ತನ್ನ ಜೊತೆಗಿದ್ದ ಬೆರಳೆಣಿಕೆಯ ಬೆಂಬಲಿಗರನ್ನೂ ತನ್ನ ಮದುವೆಗೆ ಕರೆಯಲಿಲ್ಲ. ಈ ಹಿಂದೆ ಈತ ನಡೆಸಿದ ಆರೋಗ್ಯ ಶಿಬಿರ, ಕಣ್ಣಿನ ತಪಾಸಣೆ ಕಾರ್ಯಕ್ರಮಗಳೆಲ್ಲ ಈತ ಶಾಸಕನಾಗಲು ಮಾಡಿದ ಯೋಜನೆಗಳೇ ಹೊರತು ನಿಸ್ವಾರ್ಥ ಸಮಾಜಸೇವೆಯಲ್ಲ ಎಂದು ತಿಳಿದ ಕ್ಷೇತ್ರದ ಜನ ಎಲ್ಲಾ ರಾಜಕಾರಣಿಗಳಂತೆ ಈತನೂ ಕೂಡ ಎಂದು ಬೈದುಕೊಂಡು ಸುಮ್ಮನಾದರು.

ಅಶೋಕ್ ಜಯರಾಂನನ್ನು ನಂಬಿ ಈತನ ಜೊತೆಯಿರಲು ಕೆಎಸ್‌ಆರ್‌ಟಿಸಿ ನೌಕರಿಯನ್ನೇ ತೊರೆದ ಗಾಂಧಿನಗರದ ಅನಿಲ್ ಕುಮಾರ್‌ರಂತಹ ಅನೇಕರನ್ನು ಈತ ನಡುನೀರಿನಲ್ಲಿ ಕೈಬಿಟ್ಟು ಬೆಂಗಳೂರು ಸೇರಿಕೊಂಡಿದ್ದಾನೆ. ಅಲ್ಲದೆ ಈತನನ್ನೇ ನಂಬಿ ಎಂಎಲ್‌ಎ ಮಾಡಲು ಹೊರಟಿದ್ದ ಅನೇಕರು ಈಗ ಈತನ ಸಹವಾಸವೇ ಬೇಡವೆಂದು ದೂರ ಸರಿದಿದ್ದಾರೆ.

ಅಶೋಕ್ ಜಯರಾಂನ 'ಸಮಾಜಸೇವೆ'ಯಲ್ಲಿ ಕೈಜೋಡಿಸಿದ್ದ ಭಾವ ಡಾ.ಪರಮೇಶ್ ಆಗ ತನ್ನ ಹತ್ತಿರ ಬಂದ ರೋಗಿಗಳನ್ನು ಜಿಲ್ಲಾಸ್ಪತ್ರೆ ಅಥವಾ ತಮ್ಮದೇ ನರ್ಸಿಂಗ್ ಹೋಂಗೆ ಸೇರಿಸಿ ಚಿಕಿತ್ಸೆ ಕೊಡಿಸುತ್ತಿದ್ದರು. ಆದರೀಗ ಅವರು ಯಾರ ಫೋನ್ ಕರೆಯನ್ನೂ ಸ್ವೀಕರಿಸುತ್ತಿಲ್ಲ.

ಎಸ್.ಡಿ.ಜಯರಾಂ ಕಾಲದಿಂದಲೂ ಜೊತೆಯಲ್ಲಿದ್ದ

...ಗಳೇ ಪೂಜಾರಿಗಳಾಗಿದ್ದರು. ತನ್ಮೂಲಕ ಶೂದ್ರ ...ಮುದಾಯದಲ್ಲಿ ಆತ್ಮವಿಶ್ವಾಸ-ಆತ್ಮ ಗೌರವ ಮೂಡಿಸಲು ...ಗಿದ್ದವರು ನಾರಾಯಣ ಗುರುಗಳು.

ಶೂದ್ರರು ದೇವಾಲಯದ ಒಳಗೆ ಪ್ರವೇಶಿಸುವುದಿರಲಿ, ...ವಾಲಯದ ಮುಂದಿನ ರಸ್ತೆಯಲ್ಲಿ ಅಡ್ಡಾಡದಂಥ ಪರಿಸ್ಥಿತಿ ...ದ್ದಾಗ ಕೆಳಜಾತಿಯ ಜನ ದಿಕ್ಕೆಟ್ಟು ಹೋಗಿದ್ದರು. ...ರಿಗೆಲ್ಲಾ ಆಗ ಧೈರ್ಯ ತುಂಬಿ ಶೂದ್ರರು ತಮ್ಮದೇ ...ವಾಲಯ ಕಟ್ಟಿಕೊಳ್ಳಲು ಪ್ರೇರೇಪಿಸಿದವರು ನಾರಾಯಣ ...ರುಗಳು. ಆ ಅಬ್ರಾಹ್ಮಣ 'ಧಾರ್ಮಿಕ ಪ್ರಜ್ಞೆ' ಹೊತ್ತಲ್ಲೇ ...ದ್ರೋಳಿ ದೇವಸ್ಥಾನ ನಿರ್ಮಾಣ ಆಗಿತ್ತು. ಆದರೆ ...ಬಗಳೆದಂತೆ ನಾರಾಯಣ ಗುರುಗಳ ಮೂಲ ...ಆದರ್ಶದಿಂದ ವಿಮುಖವಾದ ಕುದ್ರೋಳಿ ದೇವಸ್ಥಾನದ ...ಮುಖ್ಯಗಾರರು ಮತ್ತದೇ ಪುರೋಹಿತಶಾಹಿ ಕಪಿಮುಷ್ಟಿಗೆ ...ಸಿಕೊಂಡಿದ್ದರು. ಯಾವಾಗ ಜನಾರ್ದನ ಪೂಜಾರಿ ...ಬ ಶೂದ್ರ ಸಿದ್ಧಾಂತಿ ಕೈಗೆ ದೇವಸ್ಥಾನದ ಆಡಳಿತ ...ತೋ, ಆಗ ಒಂದೊಂದೇ ಶೂದ್ರ ಧರ್ಮಸ್ಥಾಪನೆ ...ವಾಯ್ತು. ಈ ಕಾರಣಕ್ಕೇ ಪೂಜಾರಿ ಲೋಕಸಭೆ ...ನಾವಣೆಯಲ್ಲಿ ಸತತವಾಗಿ ಸೋಲಬೇಕಾಗಿ ಬಂತು. ...ಲ್ಲಿಯ ಬಲಾಢ್ಯ ಸ್ವಯಂಘೋಷಿತ ಧರ್ಮಾಧಿಕಾರಿಗಳ, ...ಮಿಗಳ ವಿರೋಧ ಕಟ್ಟಿಕೊಳ್ಳಬೇಕಾಗಿತ್ತು.

ಈಗ ಕುದ್ರೋಳಿ ದೇವಸ್ಥಾನದ 'ಕ್ರಾಂತಿ' ರಾಜ್ಯದ ...ಮೆ ದಾಟಿ ದೇಶದಲ್ಲಿ ಚರ್ಚೆ ಆಗುತ್ತಿದೆ. ನಾರಾಯಣ ...ರುಗಳ ಸ್ತ್ರೀ ಕಾಳಜಿ, ಶೂದ್ರ ಕಾಳಜಿಯ ಆದರ್ಶ ಎತ್ತಿ ...ಹಿಡಿಯುವ ಮೂಲಕ ಕುದ್ರೋಳಿ ದೇವಸ್ಥಾನ (ಅರ್ಥಾತ್ ...ಜನಾರ್ದನ ಪೂಜಾರಿ) ಮೇಲುವರ್ಗದ ಸನಾತನಿಗಳ ...ಕಣ್ಣಿಗೆ ತುತ್ತಾಗಿದ್ದಾರೆ. ಇದಕ್ಕೆ ಸಮಾನಾಂತರವಾಗಿ ...ವರ್ಗದ ಮಂದಿ ಕುದ್ರೋಳಿ ದೇಗುಲದತ್ತ ಅತ್ಯಾಸಕ್ತಿ-...ಸ್ವಾಭಿಮಾನದಿಂದ ಓಡೋಡಿ ಬರುವಂತಾಗಿದೆ. ...ಶತಲಾಂತರದಿಂದ ಅವಜ್ಞೆ-ಅವಹೇಳನಕ್ಕೆ ತುತ್ತಾಗಿ ...ನೋಯುತ್ತ-ನವೆಯುತ್ತ ಬಂದ ಹೆಣ್ಣು ಮಕ್ಕಳಿಗೆ ಗೌರವಾದರ ...ನೀಡುವ ಸಾಮಾಜಿಕ ಪರಿವರ್ತನೆಯ ಪುಣ್ಯ ಕಾರ್ಯದಲ್ಲಿ ...ಪೂಜಾರಿ ಕಾಂಗ್ರೆಸ್ ಪಾಲಿಟಿಸಿಯನ್ ಎಂಬ ಒಂದೇ ...ಕಾರಣಕ್ಕೆ ಸನಾತನಿಗಳು ರಾಜಕಾರಣ ಮಾಡುತ್ತಿದ್ದಾರೆ; ...ಇದೊಂದು ಪೂಜಾರಿಯ ಪಾಲಿಟಿಕಲ್ ಸ್ಟಂಟ್ ...ಎನ್ನುತ್ತಿದ್ದಾರೆ.

ಇರಬಹುದು; ರಾಜಕಾರಣವೇ ಇರಬಹುದು. ಪೂಜಾರಿ ಪರಿಶುದ್ಧ ರಾಜಕಾರಣಿ. ಆತ ಈ ಸಾಮಾಜಿಕ ಬದಲಾವಣೆ ಕೈಂಕರ್ಯವನ್ನು ರಾಜಕಾರಣಕ್ಕಾಗೇ ಮಾಡಿದ್ದಾರೆಂದು ಇಟ್ಟುಕೊಂಡರೂ, ಈ ಈಶ್ಯೂ ಅಷ್ಟು ಸುಲಭದಲ್ಲಿ ಪಾಲಿಟಿಕಲ್ ಮೈಲೇಜು ಕೊಡುವಂಥದ್ದೇನೂ ಅಲ್ಲ. ಕುದ್ರೋಳಿ ದೇವಾಲಯದಲ್ಲಿ ಸರಣಿಯಾಗಿ ಪೂಜಾರಿ ಮಾಡುತ್ತಿರುವ ಸಾಮಾಜಿಕ ಕ್ರಾಂತಿ ಮಾಡುವ ಛಾತಿ ಎಲ್ಲರಿಗೂ ಇರಲಾರದು. ಸಮಾಜದ ಮೇಲ್ವರ್ಗವಷ್ಟೇ ಅಲ್ಲ, ಕೆಳವರ್ಗದಲ್ಲೂ ಹಾಸುಹೊಕ್ಕಾಗಿರುವ ಮನು ಮಸಲತ್ತುಗಳನ್ನು ಧ್ವಂಸ ಮಾಡುವ ತಾಕತ್ತು ಯಾರೂ ತೋರಿಸಲಾರರು. ಇಂಥ ರಾಜಕಾರಣ ಪೂಜಾರಿ ಮಾಡಿದ್ದೇ ಆದರೆ ಅದು ಇತರ ರಾಜಕಾರಣಿಗಳಿಗೂ ಮಾದರಿ ಆಗಬೇಕು. ರಾಜಕೀಯಕ್ಕಾಗಿ-ಅಧಿಕಾರಕ್ಕಾಗಿ ಸಮಾಜವನ್ನು ಒಡೆಯುವ, ಕೋಮು ಕಿತಾಪತಿ-ರಕ್ತಪಾತ ಮಾಡುವಷ್ಟು ಸುಲಭವಲ್ಲ ನಾರಾಯಣ ಗುರುವಂಥ ಸಮಾಜೋದ್ಧಾರಕ ಸಂತನ ತತ್ವದ ಬದಲಾವಣೆಗೆ ಪ್ರಯತ್ನಿಸುವುದು. ಈ ಅಂಶ ಕುದ್ರೋಳಿ ದೇವಸ್ಥಾನದ ಕ್ರಾಂತಿಯಲ್ಲಿ ಅಡಗಿರುವುದು ಸೂಕ್ಷ್ಮವಾಗಿ ಅವಲೋಕಿಸಿದರಷ್ಟೇ ಗೊತ್ತಾಗುತ್ತದೆ.

ಗಂಡನಿಲ್ಲದ ಹೆಂಗಸರಿಗೆ ಅರಿಶಿಣ-ಕುಂಕುಮ 'ಭಾಗ್ಯ' ಕೊಡುವ ಮತ್ತು ಅರ್ಚಕಿ ಪಟ್ಟ ನೀಡುವ ಮೂಲಕ ಕುದ್ರೋಳಿ ದೇವಳ ಮಂಡಳಿ ನಾರಾಯಣ ಗುರುಗಳ ಚಿಂತನೆಪಾಲನೆಗೆ ಚಾಲನೆ ನೀಡಿದೆಯೇನೋ ನಿಜ. ಆದರೆ ಬಿಲ್ಲವರನ್ನಷ್ಟೇ ಅಲ್ಲ, ಮೇಲು ವರ್ಗದ ಹಿಡಿತದಲ್ಲಿ ಸಿಕ್ಕಿಬಿದ್ದು ಒದ್ದಾಡುತ್ತಿರುವ ಇತರ ಹಿಂದುಳಿದವರನ್ನು ಮತ್ತು ದಲಿತರನ್ನು ಬಚಾಯಿಸಲು ನಾರಾಯಣ ಗುರುತತ್ವ ಆಧಾರವಾಗಬೇಕು. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಡೆಸ್ನಾನ ಮಾಡಿಸೋರಿಗೆ, ಉಡುಪಿ ಕೃಷ್ಣ ಸನ್ನಿಧಿಯಲ್ಲಿ ಪಂಕ್ತಿಭೇದ ಮಾಡೋರಿಗೆ ಮತ್ತು ಧರ್ಮಸ್ಥಳದ ಮಂಜನಾಥನ ಭೋಜನಾಲಯದಲ್ಲಿ ಮೂರ್ನಾಲ್ಕು ಥರದ ಶ್ರೇಣೀಕೃತ ಊಟ ತಯಾರಿಸಿ ಬಡಿಸೋರಿಗೆಲ್ಲ ನಾರಾಯಣ ಗುರುವಿನ ಮನುಷ್ಯತ್ವದ ಸರಳ ಧರ್ಮ ಅರ್ಥವಾಗದಿರುವುದು ವಿಚಿತ್ರವಾದರೂ ಸತ್ಯ!!

● ಶುದ್ಧೋಧನ

...ದಷ್ಟು ಮುಸಲ್ಮಾನರು ಅಶೋಕ್ ಜಯರಾಂ ಹಿಂದೆ ...ನಿಂತಿದ್ದರು. ಈಗ ಅಶೋಕ್ ಅವರ ಕೈಗೂ ಕಣ್ಣಿಗೂ ...ಸಿಗದಿರುವುದರಿಂದ ಅವರೆಲ್ಲಾ ಅಸಮಾಧಾನಗೊಂಡಿದ್ದಾರೆ. ... ಎಂಪಿ ಚುನಾವಣೆಯಲ್ಲಿ ತನಗೆ ಟಿಕೆಟ್ ನೀಡುವ ...ಭರವಸೆ ನೀಡಿದ್ದಾರೆಂದು ಹೇಳಿದ್ದ ಅಶೋಕ್ ಜಯರಾಂ ...ಅವರು ಉಪಚುನಾವಣೆಯ ಯಾವ ಸಂದರ್ಭದಲ್ಲೂ ...ಪರಿಗಣನೆಗೆ ಬರಲೇ ಇಲ್ಲ. ಒಂದಷ್ಟು ವರ್ಷ ತಾಳ್ಮೆಯಿಂದ ...ಸೇವೆ ಮಾಡಿಕೊಂಡು ಕಾದಿದ್ದರೆ ಅಶೋಕ್ ಜಯರಾಂಗೆ ...ಮಂಡ್ಯ ರಾಜಕೀಯದಲ್ಲಿ ಉತ್ತಮ ಭವಿಷ್ಯವಿತ್ತು. ಆದರೆ ...ನೇ ವಯಸ್ಸಿಗೆ ಎಂಎಲ್‌ಎ ಆಗೇ ತೀರಬೇಕೆಂಬ ಹಪಾ...ಹಪಿಗೆ ಬಿದ್ದ ಅಶೋಕ್ ಜಯರಾಂ ಎಳಸು ರಾಜಕೀಯ ...ವ್ಯವಹಾರದಿಂದಾಗಿ ಕ್ಷೇತ್ರದಿಂದಲೇ ಕಣ್ಮರೆಯಾಗಿದ್ದಾನೆ.

ಗಾಯಬ್ ಆದ ಗಣಿಗ ರವಿ

... ಯಾವ ರಾಜಕೀಯ ಹಿನ್ನೆಲೆಯೂ ಇಲ್ಲದೆ ಎರಡು ...ವರ್ಷಗಳ ಹಿಂದೆ ಮಂಡ್ಯದಲ್ಲಿ ದಿಢೀರ್ ಎಂದು ...ಪ್ರತ್ಯಕ್ಷವಾಗಿದವನು ಗಣಿಗ ರವಿಕುಮಾರ್. ಮಂಡ್ಯ ತಾಲ್ಲೂಕಿನ ...ಬಸರಾಳು ಹೋಬಳಿಗೆ ಸೇರಿದ ಗಣಿಗ ಎಂಬ ಗ್ರಾಮ ...ಮಂಡ್ಯದ ಜನರಿಗೆ ಗೊತ್ತಾಗಿದ್ದೇ ಈ ಗಣಿಗ ರವಿಕುಮಾರ್ ...ನಿಂದ. ಮೊದಮೊದಲು ಒಂದಷ್ಟು ಯುವಕರಿಂದ ...ಹುಟ್ಟುಹಬ್ಬ ಶುಭಾಶಯ ಕೋರುವ ಫ್ಲೆಕ್ಸ್‌ಗಳಲ್ಲಿ ತನ್ನ ...ಮುಖದರ್ಶನ ಮಾಡಿಸಿದ್ದನ್ನು ಕಂಡ ಮಂಡ್ಯದ ಜನ ...ಈತ ಯಾರೆಂದು ಕೇಳಲು ಶುರು ಮಾಡಿದರು. ...ಬೆಂಗಳೂರಲ್ಲಿ ಕೇಬಲ್ ನೆಟ್‌ವರ್ಕ್ ನಡೆಸ್ತಾನಂತೆ, ಆತನ ...ಬಳಿ ಹತ್ತಾರು ಕೋಟಿ ದುಡ್ಡಿದ್ದು, ಮಂಡ್ಯದಿಂದ ಎಂಎಲ್‌ಎ ...ಆಗ್ತಾನಂತೆ ಎಂಬ ಮಾತುಗಳು ಜನರ ಬಾಯಲ್ಲಿ ...ಹರದಾಡಲಾರಂಭಿಸಿದವು. ನಂತರ ಮಂಡ್ಯ ಕ್ಷೇತ್ರಕ್ಕೆ ಎಂಟ್ರಿ ...ಕೊಟ್ಟ ಗಣಿಗ ರವಿಕುಮಾರ್ ಮದುವೆ, ಮುಂಜಿ, ತಿಥಿಗಳಿಗೆ ...ದುಡ್ಡು ಹಂಚುವ ಮೂಲಕ ಸುದ್ದಿ ಮಾಡಿದ. ಈತ ...ಯುವಕ ಸಂಘಗಳಿಗೆ ಧಾರಾಳವಾಗಿ ಧನಸಹಾಯ ಮಾಡುತ್ತಾ ...ಯುವಕರನ್ನು ಸಂಘಟಿಸಲು ಶುರು ಮಾಡಿದ. ದೇವಸ್ಥಾನ ...ಗಳು, ಮದುವೆ, ಮುಂಜಿ, ಅನಾರೋಗ್ಯ, ತಿಥಿ ಅಂತ ...ದ ಜನರಿಗೆ ಸಾವಿರ ರೂ.ಗಳ ಗರಿಗರಿ ನೋಟುಗಳನ್ನೇ ...ನೀಡಿಕೊಡುತ್ತಿದ್ದ ಗಣಿಗ ರವಿಕುಮಾರ್ ಹೆಸರು ಮಂಡ್ಯ ...ವಿಧಾನಸಭಾಕ್ಷೇತ್ರದಲ್ಲಿ ಮಿಂಚಿನಂತೆ ಸುಳಿದಾಡಲಾರಂಭಿಸಿತು. ...ಅಶೋಕ್ ಜಯರಾಂನಂತೆ ಯಾವುದೇ ರಾಜಕೀಯ ಹಿನ್ನೆಲೆ ...ಇಲ್ಲದ ಗಣಿಗ ರವಿಕುಮಾರ್ ತನ್ನಲ್ಲಿರುವ ಹಣದಿಂದಲೇ ...ಸದ್ದು ಸೌಂಡ್ ಮಾಡಿದ ಆಸಾಮಿ.

...ಮಂಡ್ಯ ವಿಧಾನಸಭಾ ಕ್ಷೇತ್ರವನ್ನೇ ಟಾರ್ಗೆಟ್ ಆಗಿ ...ಇಟ್ಟುಕೊಂಡ ಗಣಿಗ ರವಿಕುಮಾರ್ ಮಂಡ್ಯಕ್ಕೆ ಬಂದಾಗಲೆಲ್ಲ ...ಐಷಾರಾಮಿ ಕಾರುಗಳಲ್ಲೇ ಬರುತ್ತಿದ್ದ, ಈತನಲ್ಲಿದ್ದ ಹಣದ ...ಕಂಡೇ ಹಲವರು ಈತನ ಅಭಿಮಾನಿಗಳಾಗಿ ...ದ್ದರು. ಪ್ರತಿ ಗ್ರಾಮದಲ್ಲೂ ಗಣಿಗ ರವಿಕುಮಾರ್ ...ಬೆಂಬಲಿಗರು ಹುಟ್ಟಿಕೊಂಡರು. ಮಂಡ್ಯ ವಿಧಾನಸಭಾ

ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲೂ ಗಣಿಗ ರವಿಕುಮಾರ್ ಹೆಸರು ಸಾಕಷ್ಟು ಸದ್ದು ಮಾಡುತ್ತಿತ್ತು. "ನನಗೆ ಪರಮೇಶ್ವರ್ ಗೊತ್ತು. ಎಸ್.ಎಂ.ಕೃಷ್ಣರ ಆಶೀರ್ವಾದವಿದೆ. ಡಿ.ಕೆ.ಶಿವಕುಮಾರ್ ಟಿಕೆಟ್ ಕೊಡಿಸ್ತಾರೆ" ಎಂದೆಲ್ಲಾ ಹೇಳುತ್ತಿದ್ದ ಗಣಿಗ ರವಿಕುಮಾರ್ ಮತ್ತೊಂದೆಡೆ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿಯೊಂದಿಗೂ ಉತ್ತಮ ಬಾಂಧವ್ಯ ಹೊಂದಿದ್ದ. ಕುಮಾರಸ್ವಾಮಿಯೊಂದಿಗೆ ಹುಟ್ಟುಹಬ್ಬ ಆಚರಿಸಿಕೊಂಡ ಫೋಟೊಗಳನ್ನು ಮಾಧ್ಯಮಗಳಿಗೆ ತಲುಪಿಸಿ, ಈತ ಯಾವ ಪಕ್ಷದಿಂದ ಟಿಕೆಟ್ ತರುತ್ತಾನೆಂಬ ಗೊಂದಲವನ್ನು ಜನರಲ್ಲಿ ಮೂಡಿಸಿದ್ದ.

ಸದಾ ಎರಡು ಭರ್ತಿ ಕಾರುಗಳಲ್ಲಿ ಯುವಕರನ್ನು ತುಂಬಿಕೊಂಡು ನಗರದ ಹರಿಪ್ರಿಯ ಹೋಟೆಲ್, ಐಬಿಯಲ್ಲಿ ಠಿಕಾಣಿ ಹೂಡುತ್ತಿದ್ದ ರವಿಕುಮಾರ್ ನಗರದ ಹಲವು ಶಾಲೆಯ ಮಕ್ಕಳಿಗೆ ಲಕ್ಷಾಂತರ ಸಂಖ್ಯೆಯಲ್ಲಿ ನೋಟ್‌ಬುಕ್ ಹಂಚಿದ್ದ, ಮಹಿಳಾ ಸ್ವಸಹಾಯ ಸಂಘಗಳಿಗೆ ಧನಸಹಾಯ, ಅಶಕ್ತರು-ಅಂಗವಿಕಲರಿಗೆಂದು ಲಕ್ಷಾಂತರ ರೂ. ಖರ್ಚು ಮಾಡಿದ್ದ, ಎಂಎಲ್‌ಎ ಆಗಲೇಬೇಕೆಂದು ಕೋಟ್ಯಾಂತರ ಬಂಡವಾಳ ಹಾಕಿದ್ದ ರವಿಕುಮಾರ್ ಅಂಬಿ ಮಂಡ್ಯದಿಂದ ನಿಲ್ಲುತ್ತಿದ್ದಂತೆ ಅವರ ಮಾತಿಗೆ ಬೆಲೆಕೊಟ್ಟು ಅವರಿಗೆ ಬೆಂಬಲ ನೀಡಿ ಚುನಾವಣಾ ಪ್ರಚಾರದಲ್ಲೂ ಭಾಗಿಯಾದ. ತನ್ನ ಕೈಯಿಂದಲೇ ಸಾಕಷ್ಟು ಹಣವನ್ನು ಖರ್ಚು ಮಾಡಿದ. ಆದರೆ ಚುನಾವಣೆ ಮುಗಿದು ಅಂಬಿ ಎಂಎಲ್‌ಎ ಆಗಿ ಮಿನಿಷ್ಟ್ರು ಆದ ಮೇಲೆ ಮಂಡ್ಯದಲ್ಲಿ ಆತನ ಮುಖದರ್ಶನ ಕಾಣುವುದೇ ತೀರಾ ಅಪರೂಪವಾಗಿದೆ.

ಅಮಾವಾಸ್ಯೆ ಪೌರ್ಣಮಿಗೊಮ್ಮೆ ಕಂಡೂಕಾಣದಂತೆ ಬಂದುಹೋಗುವ ರವಿಕುಮಾರ್ ಸುತ್ತಾ ಈಗ ಯಾವುದೇ ಬೆಂಬಲಿಗರು ಕಂಡುಬರುತ್ತಿಲ್ಲ. ಹೊಸಹಳ್ಳಿ ಸತೀಶ್, ಹಾಲಹಳ್ಳಿ ಪಂಚಾಕ್ಷರಿ, ಗಾಂಧಿನಗರದ ಮನು, ಬಸರಾಳು ಲೋಕೇಶ್, ಮಹೇಶ್ ಮೊದಲಾದ ಒಂದಷ್ಟು ಜನ ಬಿಟ್ಟರೆ ಬೇರೆ ಯಾರಿಗೂ ಸಿಕ್ಕಿಲ್ಲ. ನಗರಸಭೆ ಚುನಾವಣೆಯಲ್ಲಿ ಪಕ್ಷೇತರರಾದ ನಯಾಜ್‌ಪಾಷ, ಚಂದ್ರುಕುಮಾರ್, ನರಸಮ್ಮ ಎಂಬುವರಿಗೆ ಹಣ ಕೊಟ್ಟು ಗೆಲ್ಲಿಸಿದ ರವಿಕುಮಾರ್ ಅಂಬಿ ಮಂತ್ರಿಯಾದ ಮೇಲೂ ಅವರ ಆಸ್ಥಾನದಲ್ಲೂ ಕಾಣಿಸಿಕೊಂಡಿಲ್ಲ.

ಮುಂದಿನ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಅಶೋಕ್ ಜಯರಾಂ, ಗಣಿಗರವಿಕುಮಾರ್ ಕಾಣಿಸಿಕೊಳ್ಳಬಹುದು. ಇವರ ಜೊತೆ ಇನ್ನೂ ಒಂದಷ್ಟು ಮಂದಿ ಎಂಎಲ್‌ಎ ಹುಚ್ಚು ಹತ್ತಿಸಿಕೊಂಡು ಬರಬಹುದು. ಈ ರೀತಿ ಸಮಾಜಸೇವಕರಂತೆ ಪೋಜು ಕೊಡುತ್ತಾ ತಮ್ಮಲ್ಲಿರುವ ಹಣಬಿಟ್ಟ ದುಡ್ಡನ್ನು ಬಂಡವಾಳವಾಗಿ ಹೂಡಿ ಎಂಎಲ್‌ಎ ಆಗಲು ಬರುವ ಮಂದಿಯ ಬಗ್ಗೆ ಮಂಡ್ಯದ ಜನರು ಪಾಠ ಕಲಿಸುವಷ್ಟು ಸಮರ್ಥರು ಎಂಬುದು ಗೊತ್ತಿದ್ದರೆ ಒಳ್ಳೆಯದು.

● ನಾಗೇಶ್

ನೀವು ಪೂಜಾರಿ ಆಗಿದ್ದಕ್ಕೂ ಸಾರ್ಥಕವಾಯ್ತು ಬಿಡಿ

ಥೂತ್ತೇರಿ

▸ ಯಾಹೂ

ನಮ್ಮ ಆದಿಚುಂಚನಗಿರಿ ಮಠದವರು ಬಾಲಗಂಗಾಧರ ನಾಥರು ಭೈರವನ ಪಾದ ಸೇರಿದ ನಂತರವಾದರೂ ಬುದ್ಧಿ ಕಲಿಯುತ್ತಾರೆಂದು ಭಾವಿಸಿದ್ದರೆ ಅಂತಹ ಯಾವ ಸೂಚನೆಗಳೂ ಕಾಣುತ್ತಿಲ್ಲವಂತಲ್ಲಾ. ಏಕೆಂದರೆ ಹೇಳಿಕೇಳಿ ಸಂತೆ ಶಿವರದ ಭೈರಣ್ಣ ಹುಟ್ಟಿದ ಹತ್ತು ವರ್ಷಕ್ಕೆ ಚಿಡ್ಡಿ ಇಕ್ಕಿ, ಬಡಿಗೆ ಹಿಡಿದ ನಂತರ ಆತನ ಇಡೀ ಸಾಹಿತ್ಯದಲ್ಲಿ ಪುರೋಹಿತಶಾಹಿಯ ಅಜೆಂಡಾ ಹಾಸು ಹೊಕ್ಕಾಗಿದೆ. ಸಂತೆ ಶಿವರದಲ್ಲಿ ರೊಟ್ಟಿ ಕೊಟ್ಟ ಒಕ್ಕಲಿಗರನ್ನು, ಮುದ್ದೆ ಕೊಟ್ಟ ಕುರುಬರನ್ನು ಮರೆತು ಬರೀ ಬ್ರಾಹ್ಮಣರ ಪಡಿಪಾಟಲನ್ನು ದಾಖಲಿಸಿರುವ ಭೈರಣ್ಣ ಇತ್ತೀಚೆಗೆ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರನ್ನೂ ಬಿಟ್ಟಿಲ್ಲ. ಇಂತಹ ಪುಣ್ಯಾತ್ಮನನ್ನು ಕರೆದು ಬರೋಬರಿ ಅರ್ಧ ಲಕ್ಷ ರೂ.ಗಳ ಚುಂಚಶ್ರೀ ಪ್ರಶಸ್ತಿ ಕೊಟ್ಟಿದ್ದಾರಂತಲ್ಲಾ. ಈ ಬಗ್ಗೆ ಮಠೋಪಜೀವಿಯನ್ನು ಕೇಳಲಾಗಿ "ಭೈರಪ್ಪ ನಮ್ಮ ಜನಾಂಗದ ಸಾಹಿತಿ ಕಂಡ್ರೀ. ಭೈರಪ್ಪ ಬ್ರಾಹ್ಮಣನಾಗಿದ್ದರೆ ಭೈರಾಜೋಯಿಸ, ಭೈರಾಶಾಸ್ತ್ರಿ ಭೈರಾಭಟ್ಟ, ಭೈರಾಶರ್ಮ ಅಂತ ಹೆಸರಿಟ್ಟುಕೊಳ್ಳುತ್ತಿರಲಿಲ್ಲವೆ" ಎಂದು ಮರುಪ್ರಶ್ನೆ ಎಸೆದನಂತಲ್ಲಾ. ಅದೇನಾದರಾಗಲಿ "ದೊಡ್ಡ ರಂಗೇಗೌಡನಂತಹ ಕವಿಯನ್ನು ಸಾಕುತ್ತಿರುವ ಚುಂಚನಗಿರಿ ಮಠ, ಭೈರಪ್ಪನಂತಹ ಕಾದಂಬರಿಕಾರನನ್ನು ಗುರುತಿಸಿ ಚುಂಚಶ್ರೀ ಪ್ರಶಸ್ತಿ ಕೊಟ್ಟಿರುವುದರಿಂದ ಬಾಲಗಂಗಾಧರನಾಥರ ಆತ್ಮಕ್ಕೆ ಶಾಂತಿ ನೆಮ್ಮದಿ ತಂದು ಕೊಟ್ಟಿರಬಹುದೇ ಹೊರತು, ನಮ್ಮ ಹೊಟ್ಟೆಗಂತೂ ಸುಣ್ಣದ ನೀರು ಬಿದ್ದಂತಾಗಿದೆ" ಎಂದು ಕವಿ ಮುಕುಂದರಾಜ್ ಮಾರ್ಮಿಕವಾಗಿ ಪ್ರತಿಭಟಿಸಿದ್ದಾರಂತಲ್ಲಾ, ಥೂತ್ತೇರಿ!

****

ಕುದ್ರೋಳಿಯ ಗೋಕರ್ಣನಾಥನಿಗೆ ವಿಧವೆಯರಾದ ಹೆಣ್ಣುಮಕ್ಕಳನ್ನು ಪೂಜಾರಿಗಳನ್ನಾಗಿ ನೇಮಿಸಿರುವ ಜನಾರ್ದನ ಪೂಜಾರಿಯವರನ್ನು ಅಭಿನಂದಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಎಂತು ವರ್ಣಿಸಲಿ ಈ ವನವಾ..... ಎಂತೂ 'ವರ್ಣಿಸಲೀ.....'"

"ಹಲೋ ಯಾರು?"

"ನಾನು ಸಾರ್ ಯಾಹು. ನಿಮ್ಮ ಫೋನಿನ ರಿಂಗ್ ಟೋನ್ ಕೇಳಿದ ಕೂಡಲೇ ಕುದ್ರೋಳಿಗೇ ಬಂದಂಗಾಯ್ತು ಸಾರ್."

"ಅದು ನಮ್ಮ ಕಾಳಿಂಗ ನಾವಡನ ಹಾಡು. ಅದರಲ್ಲಿ ಅವ ಎಷ್ಟು ಚೆನ್ನಾಗಿ ವನವನ್ನು ವರ್ಣಿಸಿದ್ದಾನೆ ಗೊತ್ತಾ?"

"ಗೊತ್ತು ಸಾರ್. ನಾನು ಸುಮಾರು ಪ್ರಸಂಗದಲ್ಲಿ ಅವರ ಹಾಡು ಕೇಳಿದ್ದೀನಿ. ಯಕ್ಷರಂಗ ಎಂದೂ ಮರೆಯಲಾರದ ಧ್ವನಿ ಅವರದು. ಪಾಪ ಇಷ್ಟು ಬೇಗ ತೀರಿಕೊಬಾರದಿತ್ತು."

"ಅವ ಬೈಕ್ ಆಕ್ಸಿಡೆಂಟನಲ್ಲಿ ತೀರಿಕೊಂಡಿದ್ದು. ಅವ ತೀರಿಕೊಂಡಿದ್ದರಲ್ಲಿ ಅವನ ಹೆಂಡತಿಯ ತಪ್ಪೇನು. ಈ ಸಮಾಜ ಆಕೆಗೆ ವಿಧವೆ ಪಟ್ಟ ಕಟ್ಟಿ ಹೇಯವಾಗಿ ನಡೆಸಿಕೊಳ್ಳುವುದನ್ನು ನೀವು ಒಪ್ಪುತೀರ."

"ನಾನು ಯಾವತ್ತು ಒಪ್ಪಲ್ಲ ಸಾರ್. ಆದ್ರೆ ನೀವು ಒಂದು ಕ್ರಾಂತಿನೆ ಮಾಡಿದ್ದೀರಿ. ಅದಕ್ಕಾಗಿ ನಿಮಗೆ ಅಭಿನಂದನೆ."

"ನೀವು ಅಭಿನಂದನೆ ಅಂತ ಹೇಳುವುದುಂಟು. ಆದರೆ ಕೆಲವು ಪುರೋಹಿತಶಾಹಿ ಪಟ್ಟಭದ್ರ ಹಿತಾಸಕ್ತರ ಪಿಂಡಗಳು ನನ್ನ ಬಗ್ಗೆ ಇವ ಹುಚ್ಚ ಇವನ ಮಂಡೆ ಸರಿಯಿಲ್ಲ ಅಂತ ಹೇಳಿ ಆಡಿಕೊಳ್ಳುವುದುಂಟು."

"ಆಡಿಕೊಳ್ಳಲ್ಲವಾ ಸಾರ್. ನೀವು ಅವರ ವೃತ್ತಿಗೆ ಸಂಚಕಾರ ತಂದ್ರೆ ಅವರು ಸುಮ್ಮನಿರತರಾ."

"ಅದೌವುದು. ನಮ್ಮ ಕೆಲಸದಿಂದ ಅವರ ವೃತ್ತಿಗಳು ಹೋಗುವುದಾದರೆ ಮುಂದೆ ಅವರು ವಿಧವೆಯರನ್ನು ಮದುವೆಯಾಗಲು ಮುಂದೆ ಬರುವುದುಂಟು."

"ಅದೇನೊ ನಿಜ ಸಾರ್. ನನಗನ್ನಿಸಿದಂಗೆ ಗರ್ಭಗುಡಿ ಪೂಜಾರಿಗಳು ಯಾವತ್ತೂ ಗಂಡಸರ ತರ ಕಂಡೇಯಿಲ್ಲ. ಅವರ ಲಾಳಾಕಾರದಲ್ಲಿ ಬೋಳಿಸಿದ ತಲೆ, ಈರುಳ್ಳಿ ಗಾತ್ರದ ಶಿಕೆ, ಹೊಳೆಯುವ ಓಲೆ, ದೇವರ ಒಡವೆ ಕದ್ದು ಮಾಡಿಸಿಹಾಕಿಕೊಂಡ ಚಿನ್ನದ ಸರಗಳು, ರವಿಕೆ ಮರೆತು ಬಂದ ಸುಬ್ಬಲಕ್ಷ್ಮಿಯಂತೆ ಕಾಣುವ ಅವರ ಆಕಾರ ನೋಡಿ ನಾನು ಬಹಳ ಹೊತ್ತು ಧ್ಯಾನ ತಪ್ಪಿದವನಂತೆ ನಿಂತಿದ್ದೂ ಇದೆ. ಈ ಕಾರಣಕ್ಕೆ ನನಗೆ ಪೂಜಾರಿಗಳ ಗರ್ಭಗುಡಿ ಬಾಗಿಲೆಂದರೆ ತುಂಬಾ ಇಷ್ಟ ಸಾರ್. ಇಂತವರನ್ನು ಮದುವೆಯಾಗಲು ನಿಮ್ಮ ಹೆಣ್ಣು ಪೂಜಾರಿಗಳು ಒಪ್ಪಬೇಕಲ್ಲ."

"ಒಪ್ಪಲಿ, ಬಿಡಲಿ ನನ್ನ ಮುಂದಿನ ಪ್ರಶ್ನೆ ಅದಲ್ಲ, ನಮ್ಮ ಧರ್ಮ ಹೇಳುವುದೇನು? 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೇ ತತ್ರ ದೇವತಾ' ಅಂತ. ಹೀಗೆ ಹೇಳಿಕೊಂಡು ಮಾಡುವುದೇನು? ವಿಧವೆಯಾದವಳು ಅಮಂಗಲೆ, ಅವಳು ಶುಭಕಾರ್ಯದ ವೇಳೆ ಕಾಣಿಸಿಕೊಳ್ಳಬಾರದು- ಮದುವೆ ಶಾಸ್ತ್ರಗಳಲ್ಲಿ ಸುಳಿಯಬಾರದು. ಹೀಗೆ ಹೆಜ್ಜೆಹೆಜ್ಜೆಗೆ ಅವಮಾನ ಮಾಡುವುದು- ಇಂತಹ ಅವಮಾನವನ್ನು ಹೆಂಡತಿ ಸತ್ತ ವಿಧುರ ಅನುಭವಿಸುತ್ತಾನಾ? ಲೋಕದ ನಿಯಮದಲ್ಲಿ ಹೆಣ್ಣು ಗಂಡು ಸಮ ಅಲ್ಲವ?"

"ನಿಜ ಸಾರ್. ನಿಸರ್ಗ ಅಥವಾ ನಿಮ್ಮ ದೇವರು ಹೆಣ್ಣಿಗೆ ಹೆಚ್ಚು ಜವಾಬ್ದಾರಿ ಕೊಟ್ಟಿದೆ. ಆ ಕಾರಣಕ್ಕೆ ಅವಳು ಪೂಜನೀಯಳು. ಈ ಪುರೋಹಿತಶಾಹಿಗಳು ಅವಳನ್ನು ಪೂಜೆನೂ ಮಾಡ್ತಾರೆ, ಜೊತೆಗೆ ಚಂಡಿ, ಕಾಳಿ, ದುರ್ಗೆ, ಮೋಹಿನಿ, ಮಾಯಾವಿ, ವ್ಯಭಿಚಾರಿಣಿ ಅಂತಲೂ ಪರಿಗಣಿಸಿವೆ. ಇಂತ ಟೈಮಲ್ಲಿ ನಿಮ್ಮ ಈ ಧೈರ್ಯವನ್ನು ಅದರಲ್ಲೂ ದಕ್ಷಿಣ ಕನ್ನಡದಲ್ಲಿ ಮಾಡಿದ ಈ ಕ್ರಾಂತಿಯನ್ನು ಮೆಚ್ಚಬೇಕು. ಇದರ ಮುಂದೆ ಜುಜುಬಿ ಎಮ್ಮೆಲ್ಲೆ ಎಂಪಿ ಸ್ಥಾನಗಳು ಏನೇನೂ ಅಲ್ಲ. ಮುಂದೆ ಚರಿತ್ರೆಲಿ ಉಳಿಯೋದು ನಿಮ್ಮ ಈ ಕೆಲಸನೆ ಸಾರ್."

"ಥ್ಯಾಂಕ್ಸ್ ಇವರೆ. ನಿಮ್ಮಂತವರ ಮೆಚ್ಚುಗೆ ಇದ್ದರೆ ನಾನು ಈ ಫ್ಯಾನ್ಸಿ ಡ್ರೆಸ್ಸಿನ ಪುರೋಹಿತರನ್ನು ಹೆದರಿಸ್ತೇನೆ."

"ಯಾರು ಸಾರ್ ನಿಮ್ಮನ್ನ ಹೆದರಿಸೋರು."

"ಯಾರೊ ಇಬ್ಬರು ಹಣೆಬರ ಕೆಟ್ಟವರು, ಟಿವಿಯಲ್ಲಿ ಬಂದು ಕುಳಿತುಕೊಂಡು ಬಾಯಿಗೆ ಬಂದಹಾಗೆ ಮಾತನಾಡಿದ್ದರು."

"ಓ, ಆ ಕಳ್ರು ಗೊತ್ತು ಸಾರ್ ನನಗೆ. ಚಾಮುಂಡೇಶ್ವರಿ ಚುನಾವಣೆಲಿ ಒಬ್ಬ ದುಡ್ಡು ತಗೊಂಡು ಸಿದ್ದರಾಮಯ್ಯ ಸೋಲ್ತನೆ ಅಂತ ಹೇಳಿದ್ದ. ಆದ್ರೂ ಸಿದ್ದರಾಮಯ್ಯ ಗೆದ್ದ.



ಇಷ್ಟಾದ್ರು ಆ ಸುಳ್ಳು ಜ್ಯೋತಿಷಿ ಭವಿಷ್ಯ ಹೇಳೋದು ಬಿಟ್ಟಿಲ್ಲ. ನಾವೇ ಬಿಡುಸಬೇಕು ಅಂತ ತೀರ್ಮಾನ ಮಾಡಿದ್ದಿವಿ. ಏನಂತೆ ಅವನ ತಕರಾರು?"

"ವಿಧವೆಯರು ಪೂಜಾರಿಗಳಾಗಲು ಏನು ಅರ್ಹತೆ ಅಂತ ಕೇಳುವುದಾ? ಅದಕ್ಕೆ ನಾನು ಹೇಳಿದೆ ನಿನಗೆ ಏನು ಅರ್ಹತೆಯುಂಟು, ಪೂಜಾರಿಗಳಾಗಲು ಭಕ್ತಿಯಿದ್ದರೆ ಸಾಕು ಅಂತ ಹೇಳಿದೆ. ಅವ ಟಿವಿಯನ್ನು ಬಿಟ್ಟು ಓಡಿಹೋದ."

"ನಿಜಕ್ಕೂ ಪೂಜಾರಿಗಳಾಗಕ್ಕೆ ಭಕ್ತಿ ಅವಶ್ಯಕತೆಯಿಲ್ಲ ಸಾರ್. ಅದು ಭಕ್ತರಿಗೆ ಇರಬೇಕಾಗುತ್ತೆ. ಕರ್ತವ್ಯನಿಷ್ಠೆಯಿದ್ರೆ ಸಾಕು. ಅಂತ ಕರ್ತವ್ಯ ಕೂಡ ಕ್ರಮೇಣ ಯಾಂತ್ರಿಕವಾಗಿ ಅನಂತಮೂರ್ತಿಯವರ ಭಾರತೀಪುರದ ಗಣೇಶನ ತರ ಆಗೋದು ಉಂಟು."

"ಅನಂತಮೂರ್ತಿಯವರ ಭಾರತೀಪುರದಲ್ಲಿ ಯಂತ ಆಗಿದ್ದು?"

"ಅದರಲ್ಲಿ ಮಂಜುನಾಥನ ಪೂಜಾರಿ ಗಣೇಶ ಅಂತ ಇರತನೆ ಸಾರ್. ಬ್ರಾಹ್ಮಣ ಕೇರೀಲಿ ಸಿಗೋ ಅಂತ ಬುದ್ದಿ ಮಾಂದ್ಯ ಹುಡುಗ. ಅಪ್ಪನ ಒತ್ತಾಯಕ್ಕೆ ಪೂಜೆ ಮಾಡಿ ಮಾಡೋ ದೇವರ ವಿಗ್ರಹನೆ ಕಿತ್ತು ಬಿಸಾಡೋವಷ್ಟು ಸಿಟ್ಟು ಬಂದಿರುತ್ತೆ. ಯಾಕಂದ್ರೆ ಹೆಂಡತಿ ಜೊತೆ ಪ್ರೀತಿ ಮಾಡಕ್ಕೂ ಟೈಮಿರಲ್ಲ, ಅಷ್ಟು ಪೂಜೆ ಮಾಡಬೇಕು. ಸಿಟ್ಟು ಮಿತಿಮೀರಿ ಒಂದು ದಿನ ಹಾರೆಕೋಲು ತಗಂಡು ದೇವರ ವಿಗ್ರಹವನ್ನು ಮೀಟಿ ಎತ್ತಿ ತಗೊಂಡೋಗಿ ಹೊಳೆಗೆ ಬಿಸಾಕ್ತಾನೆ. ಅವನಿಗೆ ಭಕ್ತಿ ಇದ್ರೆ ಹಿಂಗೆ ಮಾಡ್ತಿದ್ನಾ. ಕರ್ತವ್ಯದ ಪರ್ಸಂಟೇಜು ಜಾಸ್ತಿಯಾಗಿ ಅಂಗೆ ಮಾಡಿದ. ಹಿಂಗೆ ಯಾವನೇ ಪೂಜಾರಿಗೆ ದೇವರ ಮೇಲೆ ಭಕ್ತಿ ಭಯ ಇದೆ ಅಂತ ಹೇಳಕ್ಕೆ ಬರಲ್ಲ. ನಿಮಗೆ ಉತ್ತರ ಕೊಡಕ್ಕಾಗದ ಟಿವಿಯಿಂದ ಎದ್ದು ಓಡಿದವ್ನೂ ಅಷ್ಟೆ, ಹೊಟ್ಟೆಪಾಡಿನ ಢೋಂಗಿ ಆಸಾಮಿ. ನಿಮ್ಮಂತವರು ಜಾಸ್ತಿಯಾದಾಗ ಅಂಥವರ ವೃತ್ತಿಗೇ ಆಪತ್ತು ಬರುತ್ತೆ. ಅದ್ಕೆ ಅವರು ನಿಮ್ಮ ಬಗ್ಗೆ ಸಿಟ್ಟಾಗಿರೋದು."

"ನನ್ನ ಬಗ್ಗೆ ಸಿಟ್ಟು ಮಾಡಿಕೊಂಡರೆ ನಾನು ಸರಿಗೆ ಪೆಟ್ಟು ಕೊಡುವುದುಂಟು."

"ಥೂತ್ತೇರಿ!!"

ದರ್ಶನ್ ಈಗ ಏಕಾಂಗಿ!



ಅತ್ತ ಮಹಾರಾಷ್ಟ್ರದ ಲೋನಾವಾಲಾದ ಬಿಗ್‌ಬಾಸ್ ಸೆಟ್‌ನಿಂದ ಹೊರಬಿದ್ದಿದ್ದೇ ತನ್ನ ನಾಲ್ವರು ಬಿಗ್‌ಬಾಸ್ ಪ್ರತಿ ಸ್ಪರ್ಧಿಗಳನ್ನು ಬಾಂಬೆ-ಪೂನಾ ಮಧ್ಯದ ತನ್ನ ಹೊಚ್ಚ ಹೊಸ ಫ್ಲಾಟಿಗೆ ಕರೆದೊಯ್ದ ಹೀರೋಯಿನ್ ನಿಖಿತಾ ತುಕ್ರಲ್ 'ಇದನ್ನು ನನಗೆ ಗಿಫ್ಟ್ ಮಾಡಿದ್ದು ಯಾರು ಗೊತ್ತಾ...?' ಎಂದು ಕೇಳುವುದಕ್ಕೂ-

-ಇತ್ತ ರಾಜರಾಜೇಶ್ವರಿನಗರದ ಬಂಗಲೆಯಲ್ಲಿ ದರ್ಶನ್ ಒಬ್ಬಂಟಿಯಾಗಿರುವುದಕ್ಕೂ ಪರಸ್ಪರ ಸಂಬಂಧವಿದೆಯೇ?

ಸದ್ಯ ಗಾಂಧಿನಗರದಲ್ಲಿ ಈ ಥರದ ಪ್ರಶ್ನೆಯೊಂದಕ್ಕೆ ಜೀವ ಬಂದಿರುವುದಂತೂ ಸತ್ಯ. 'ಸಂಗೊಳ್ಳಿ ರಾಯಣ್ಣ' ಹೀರೋಯಿನ್ ನಿಖಿತಾ ಬಾಂಬೆ-ಪೂನಾ ಮಧ್ಯೆ ಖರೀದಿಸಿದ ಹೊಸ ಫ್ಲಾಟು ಹೇಗೆ ದರ್ಶನ್ ಕಾಣಿಕೆಯೆಂಬುದಕ್ಕೆ ಸಾಕ್ಷ್ಯಾಧಾರಗಳಿಲ್ಲವೋ ಹಾಗೆ ದರ್ಶನ್ ಮನೆಯಲ್ಲಿ ಏಕಾಂಗಿಯಾಗಿದ್ದಾನೆಂಬುದಕ್ಕೂ ಪುರಾವೆಯಿಲ್ಲ. ಆದರೆ 'ಸತ್ಯ' ಮಾತ್ರ ಇವೆರಡರ ಮಧ್ಯೆಯೇ ತಕ್ಕಡಿ ಬಟ್ಟನಂತೆಯೇ ಓಲಾಡುತ್ತಿದೆ!

ಗಾಂಧಿನಗರದ ಗಾಸಿಪ್‌ಕೋರರಷ್ಟೇ ಅಲ್ಲ, ನಟ ದರ್ಶನ್ ಪರಮಾಪ್ತ ವಲಯದಲ್ಲೂ ಹೊಗೆಯಾಡುತ್ತಿರುವ ವದಂತಿಗಳು ಚಿತ್ರವಿಚಿತ್ರ ಪ್ರಸಂಗವೊಂದರ ಫಲಶ್ರುತಿಯಂತಿವೆ.

ಬಿಗ್‌ಬಾಸ್...!

ಸುದೀಪ್ ಸಾರಥ್ಯದ ಬಿಗ್‌ಬಾಸ್ ರಿಯಾಲಿಟಿ ಶೋಗೆ ನಿಖಿತಾ ಗೊತ್ತಾಗಿದ್ದೇ ದರ್ಶನ್‌ನ ಶಿಫಾರಸ್ಸಿನಿಂದಲೆ? ಇನ್ನೇನು ಬಿಗ್‌ಬಾಸ್ ಫೈನಲ್ ವಿನ್ನರ್ ಆಗಿ ನಿಖಿತಾ ಘೋಷಿಸಲ್ಪಡುತ್ತಾಳೆ ಎನ್ನುವ ಹಂತದಲ್ಲೇ ಆಕೆಯ ಸಹಸ್ಪರ್ಧಿಗಳು ಬಿಗ್‌ಬಾಸ್ ಮನೆಯಲ್ಲೇ ಧರಣಿ ಕೂತು ಪ್ರತಿಭಟಿಸಿದರೆಂಬುದು ಎಷ್ಟು ನಿಜ? ಹಾಗೆ ನಿಖಿತಾ ಬಿಗ್‌ಬಾಸ್‌ನ ಹಾಟ್ ಫೇವರಿಟ್ ಆಗುವಂತೆ ಮಾಡಿದ್ದೇ ದರ್ಶನ್ ಎಂಬುದಕ್ಕೂ ಸಾಕ್ಷ್ಯವಿದೆಯೇ?

ದರ್ಶನ್ ಮತ್ತು ಸುದೀಪ್ ಸ್ನೇಹದ ಫಲವಾಗಿಯೇ ನಿಖಿತಾ ಬಿಗ್‌ಬಾಸ್‌ಗೆ ಆಯ್ಕೆಯಾದಳೆ? ಅದೇ ಸುದೀಪ್-ದರ್ಶನ್ ಸ್ನೇಹದ ಕಾರಣಕ್ಕಾಗಿಯೇ ನಿಖಿತಾ ಕೊನೇತನಕ ಬಿಗ್‌ಬಾಸ್ ಮನೆಯಲ್ಲಿ ಇರುವಂತಾಯಿತೆ? ಸಹಸ್ಪರ್ಧಿಗಳು ಪ್ರತಿಭಟಿಸದೇ ಹೋಗಿದ್ದರೆ ವಿಜಯ ರಾಘವೇಂದ್ರನ ಬದಲಿಗೆ ನಿಖಿತಾಳೇ ಬಿಗ್‌ಬಾಸ್‌ನ ವಿನ್ನರ್ ಆಗುತ್ತಿದ್ದಳೇ?



ಇತ್ತೀಚೆಗೆ ದರ್ಶನ್ ನಟಿಸಿದ್ದ 'ಸಾರಥಿ' ಹಿಟ್ಟಾಯಿತು. ಆನಂತರ 'ಚಿಂಗಾರಿ'ಯೂ ಹಿಟ್ಟಾಯಿತು. 'ಸಂಗೊಳ್ಳಿ ರಾಯಣ್ಣ' ಇವೆಲ್ಲವುಗಳ ಮುಂದುವರಿಕೆಯಂತಿತ್ತು. ಇದೇ ನಾಗಾಲೋಟಕ್ಕೆ 'ಬುಲ್‌ಬುಲ್' ಕೂಡ ಸಾಕ್ಷಿಯಾಗಿತ್ತು. 'ಬುಲ್‌ಬುಲ್' ಮುಹೂರ್ತ ಮತ್ತು ಬಿಡುಗಡೆಯತನಕ ಒಂಟಿಯಾಗಿ ಯಾವ ಸಮಾರಂಭಕ್ಕೂ ಬರದಿದ್ದ ದರ್ಶನ್ 'ಬುಲ್‌ಬುಲ್'ನ ಐವತ್ತನೇ ದಿನೋತ್ಸವದ ಹೊತ್ತಿಗೆ ಉಲ್ಟಾ ಹೊಡೆದಿದ್ದು ಯಾಕೆ?

ಇಲ್ಲಿಗೆ ಆರು ತಿಂಗಳಿನಿಂದೀಚೆಗೆ ದರ್ಶನ್‌ಗೆ ಸಂಬಂಧಪಟ್ಟ ಪ್ರತಿಯೊಂದು ಕಾರ್ಯಕ್ರಮದಲ್ಲೂ ತಾಯಿ ಮೀನಾ ತೂಗುದೀಪ್ ಮಿಂಚುತ್ತಿದ್ದಾರೆ.



ಇತ್ತೀಚೆಗೆ ನಡೆದ 'ಬುಲ್‌ಬುಲ್' ಚಿತ್ರದ ಐವತ್ತನೇ ದಿನೋತ್ಸವವಾಗಲಿ, ಆ ನಂತರ ದರ್ಶನ್ ಹುಟ್ಟುಹಬ್ಬವಾಗಲಿ, ಕೆಲದಿನಗಳ ಹಿಂದಷ್ಟೇ ನಡೆದ 'ಬುಲ್‌ಬುಲ್'ನ ಶತದಿನೋತ್ಸವವಾಗಲಿ, ತೀರ ಇತ್ತೀಚೆಗೆ 'ಬೃಂದಾವನ' ಚಿತ್ರದ ಬಿಡುಗಡೆಯಲ್ಲಾಗಲಿ ದರ್ಶನ್ ಬಳಗದ ಬೇರೆಲ್ಲರೂ ಕಾಣಸಿಗುತ್ತಾರೆ.

'ಬುಲ್‌ಬುಲ್' ಐವತ್ತನೇ ದಿನೋತ್ಸವ ಅದ್ದೂರಿಯಾಗೇ ನಡೆಯಿತು. ಗೀತ ರಚನೆಕಾರ ಕವಿರಾಜ್, ಅಂಬಿ, ರಾಕ್‌ಲೈನ್, ಮ್ಯೂಜಿಕ್ ಡೈರೆಕ್ಟರ್ ಹರಿಕೃಷ್ಣ ಇತ್ಯಾದಿ ಪ್ರತಿಯೊಬ್ಬರೂ ಆ ಸಮಾರಂಭದಲ್ಲಿ ಮಿಂಚಿದ್ದೇ ಮಿಂಚಿದ್ದು. ವಿಶೇಷವಾಗಿ ದರ್ಶನ್ ತಾಯಿ ಮೀನಾ ತೂಗುದೀಪ ಇಡೀ ಸಮಾರಂಭದ

ಶ್ರುತಿ ನಾಯ್ಡುಗೆ ದರ್ಶನ್ ಖಡಕ್ ಸಪೋರ್ಟ್



ಇಲ್ಲಿಗೆ 6 ತಿಂಗಳ ಹಿಂದೆ ಮೈಸೂರು-ಬೆಂಗಳೂರು ರಸ್ತೆಯಲ್ಲಿ ಮಂಡ್ಯ ಸಮೀಪ ಸಣ್ಣದೊಂದು ಆಕ್ಸಿಡೆಂಟಾಗಿ ಗುದ್ದಿದ್ದು ದರ್ಶನ್ ಕಾರೆಂದು ಗೊತ್ತಾಗಿದ್ದೇ ನೂರಾರು ಜನ ಸೇರಿಬಿಟ್ಟರು. ವಿಚಿತ್ರವೆಂದರೆ ಅವತ್ತು ದರ್ಶನ್ ಜೊತೆ ಕಾರಿನಲ್ಲಿದ್ದದ್ದು ಶ್ರುತಿ ನಾಯ್ಡು ಎಂಬ ಫಲವತ್ತು ನಟಿ!

ಗುದ್ದಿದ ಕಾರನ್ನು ಅಲ್ಲೇ ಬಿಟ್ಟು ಬೇರೊಂದು ಕಾರ್ ಹತ್ತಿದ ದರ್ಶನ್ ಜೊತೆಗೆ ದಷ್ಟಪುಷ್ಟ ಶ್ರುತಿ ನಾಯ್ಡು ಕೂಡ ಕಣ್ಮರೆಯಾದಳಾದರೂ ಸುದ್ದಿ ಮಾತ್ರ ಗುಟ್ಟಾಗುಳಿಯಲಿಲ್ಲ. ಒಂದೆರಡು ಪತ್ರಿಕೆಗಳಲ್ಲಿ ಈ ಬಗ್ಗೆ ಚಿಕ್ಕಪುಟ್ಟ ಗಾಸಿಪ್ ಪ್ರಕಟಗೊಂಡಿತ್ತು. ಈ ಬಗ್ಗೆ ಸಿನಿಮಾ ಮಂದಿ ಅಷ್ಟೇನೂ ತಲೆಕೆಡಿಸಿಕೊಂಡಿರಲಿಲ್ಲ. ಆದರೆ ಪ್ರತಿಯೊಬ್ಬರೂ ಹುಬ್ಬೇರಿಸುವಂತಾಗಿದ್ದು 'ಜೀ ಕನ್ನಡ'ದ ಚಾನೆಲ್ಲಿನಲ್ಲಿ ದರ್ಶನ್ ಪ್ರತ್ಯಕ್ಷನಾದಾಗಲೇ!

ಅದೆಂಥಾ ಟೀವಿ ಶೋಗೂ ಎಷ್ಟೇ ದುಡ್ಡು ಕೊಟ್ಟರೂ ಬಾರದ ದರ್ಶನ್; ಪುನೀತ್, ಶಿವಣ್ಣ ಸುದೀಪ್ ಥರದವರೇ ಖುದ್ದಾಗಿ ಬಂದು ಕುಣಿದರೂ ಅಂಥ ಅವಾರ್ಡ್ ಫಂಕ್ಷನ್ನುಗಳತ್ತ ತಲೆಹಾಕದ ದರ್ಶನ್; ತನಗೇ ಅವಾರ್ಡು ಕೊಟ್ಟಿದ್ದರೂ ಅದಕ್ಕೆ ಚಕ್ಕರ್ ಹಾಕಿ ತಮ್ಮ ದಿನಕರ್‌ನನ್ನು ಕಳಿಸಿ ಅವಾರ್ಡ್ ಸ್ವೀಕರಿಸುವ ದರ್ಶನ್; ಯಾವತ್ತೂ ಇಲ್ಲದೆ ಏಕಾಏಕಿ 'ಜೀ ಕನ್ನಡ'ದ ಚಿ.ಸೌ. ಸಾವಿತ್ರಿ ಧಾರಾವಾಹಿಯ ಶೋಗೆ ದಿನವಿಡೀ ಹಾಜರಾಗಿರುತ್ತಾರೆಂದರೆ ಅದೊಂದು ಪವಾಡವಲ್ಲವೇ?

ಅಂಥಾ ಪವಾಡಕ್ಕೆ ಕಾರಣಳಾದವಳೇ ಶ್ರುತಿ ನಾಯ್ಡು. ಸದ್ಯ 'ಜಯಮ್ಮನ ಮಗ' ಎಂಬ ವಿಜಯ್‌ನ ಚಿತ್ರವನ್ನು ನಿರ್ದೇಶಿಸಿ ಅದಕ್ಕೊಂದೇ ತನ್ನ ಹೆಸರನ್ನು ವಿಕಾಸ್ ಎಂದು ಬದಲಾಯಿಸಿಕೊಂಡಿರುವ ರವಿಕಿರಣ್ ಎಂಬಾತನೇ ಈಕೆಯ ಮಾಜಿ ಗಂಡ. ಸದ್ಯ ತಾನು 'ಒಬ್ಬಂಟಿ' ಎಂದೇ ಹೇಳಿಕೊಳ್ಳುವ ಶ್ರುತಿ ನಾಯ್ಡು ನಿರ್ದೇಶನದ ಚಿ.ಸೌ. ಸಾವಿತ್ರಿ ಎಂಬ ಧಾರಾವಾಹಿ 'ಜೀ ಕನ್ನಡ' ಟೀವಿಯಲ್ಲಿ ಪ್ರಸಾರವಾಗುತ್ತಿದೆ. ಈಕೆಯ ಸಂಗಾತಿ ಎಂದೇ ಪರಿಚಯಿಸಿಕೊಳ್ಳುವ ರಮೇಶ್ ಎಂಬಾತನ 'ದೇವಿ' ಎಂಬ ಮತ್ತೊಂದು ಧಾರಾವಾಹಿ ಸೇರಿದಂತೆ ಶ್ರುತಿನಾಯ್ಡು ಕೃಪೆ ಯಿಂದಲೇ 'ಜೀಕನ್ನಡ'ದಲ್ಲಿ ಮೂರ್ನಾಲ್ಕು ಧಾರಾವಾಹಿಗಳು ನಡೆಯುತ್ತಿವೆ.

ತನ್ನ ಚಿ.ಸೌ. ಸಾವಿತ್ರಿ ಧಾರಾವಾಹಿಯ ಹೀರೋಯಿನ್‌ಳನ್ನು ವಿಶಿಷ್ಟ ಶೋ ಒಂದರ ಮೂಲಕ ಪರಿಚಯಿಸಲು ಅಂಥಾ ದರ್ಶನ್‌ನನ್ನೇ 'ಜೀ' ಚಾನಲ್‌ಗೆ ಬರುವಂತೆ ಮಾಡಿದ ಹೆಗ್ಗಳಿಕೆಗೆ ಪಾತ್ರಳಾದ ಶ್ರುತಿ ನಾಯ್ಡು ಕೈಚಳಕಕ್ಕೆ ಇಡೀ 'ಜೀ' ಟೀವಿ ಬಳಗವೇ ಬೆಕ್ಕಸಬೆರಗಾಗಿ ಹೋಗಿತ್ತು. ಧಾರಾವಾಹಿಯ ಹೀರೋಯಿನ್‌ಳನ್ನು ಪಲ್ಲಕ್ಕಿಯಲ್ಲಿ ಮೆರೆದಾಡಿಸಿ ಖುದ್ದು ದರ್ಶನ್‌ನೇ ಪಲ್ಲಕ್ಕಿಯ ಪರದೆ ಸರಿಸಿ 'ಸಾವಿತ್ರಿ'ಯನ್ನು ಪರಿಚಯಿಸಿಕೊಡುವ ಶೋ ಹೇಗೆ ಶ್ರುತಿ ನಾಯ್ಡುವಿನ ಟೀವಿ ಕಿಮ್ಮತ್ತನ್ನು ಹೆಚ್ಚಿಸಿತೋ ಹಾಗೆಯೇ ದರ್ಶನ್ ಮೇಲಿರುವ ಆಕೆಯ ಪ್ರಭಾವವನ್ನೂ ಜಗಜ್ಜಾಹೀರುಗೊಳಿಸಿತ್ತು.

ಇದನ್ನು ಸಾಬೀತುಮಾಡುವಂತೆ ದರ್ಶನ್ ಮಾಡಿದ ಮತ್ತೊಂದು ಯಡವಟ್ಟೆಂದರೆ ಸಂಗೀತ ನಿರ್ದೇಶಕ ಹರಿಕೃಷ್ಣರ 'ಜೈ ಭಜರಂಗಿ ಬಲಿ' ಚಿತ್ರಕ್ಕೂ ಶ್ರುತಿ ನಾಯ್ಡುವನ್ನೇ ಹಾಕಿಕೊಳ್ಳುವಂತೆ ಹಠಕ್ಕೆ ಬಿದ್ದದ್ದು. ಹೇಳಿಕೇಳಿ ಮ್ಯೂಜಿಕ್ ಡೈರೆಕ್ಟರ್ ಹರಿಕೃಷ್ಣ ಕೂಡ ದರ್ಶನ್ ಪರಮಾಪ್ತನೆ. ಇಲ್ಲಿಗೆ ವರ್ಷದ ಹಿಂದೆಯೇ ಅಜಯ್ ರಾವ್‌ನನ್ನು ಹಾಕಿಕೊಂಡು 'ಜೈ ಭಜರಂಗ ಬಲಿ'ಗೆ ಅದ್ದೂರಿ ಮುಹೂರ್ತ ಮುಗಿಸಿದ ಹರಿಕೃಷ್ಣ ಅದಕ್ಕೆ ಡೈರೆಕ್ಟರ್ ಆಗಿ ನೇಮಿಸಿಕೊಂಡದ್ದು ರವಿವರ್ಮನನ್ನು. ಹೀರೋಯಿನ್ನಾಗಿ ಸಿಂಧು ಲೋಕನಾಥ್ ಆಯ್ಕೆಯಾದಳು. ಹೀರೋಯಿನ್ ತಂದೆಯಾಗಿ ಹಿರಿಯ ನಟ ಅನಂತನಾಗ್ ಒಪ್ಪಿದ್ದೂ ಆಯಿತು. ಆದರೆ ಸಮಸ್ಯೆಯಾಗಿದ್ದು ಅನಂತ್‌ನಾಗ್ ಜೋಡಿ ಯಾರಾಗಬೇಕೆಂಬ ಬಗ್ಗೆ.



ಏಕೆಂದರೆ ಅನಂತ್‌ನಾಗ್ ಜೋಡಿಯಾಗಿ ಅಂದರೆ ಹೀರೋಯಿನ್ ತಾಯಿ ಪಾತ್ರವನ್ನು ತನ್ನ ಪರಮಾಪ್ತೆ ಶ್ರುತಿ ನಾಯ್ಡುಗೇ ಕೊಡುವಂತೆ ದರ್ಶನ್ ಹರಿಕೃಷ್ಣರಿಗೆ ತಾಕೀತು ಮಾಡಿದ್ದ. ಹೆಚ್ಚೂಕಮ್ಮಿ ಮೂವತ್ತರ ಆಸುಪಾಸಿನ ಶ್ರುತಿ ನಾಯ್ಡು ಹೈಫೈಯಾಗಿ ಕಾಣುತ್ತಾಳೆ. ಹೀರೋಯಿನ್ ತಾಯಿ ಎಂಬುದಕ್ಕಿಂತಲೂ ಹೀರೋಯಿನ್ ಅಕ್ಕನ ಥರ ಸೆಕ್ಸಿಯಾಗಿ ಗ್ಲ್ಯಾಮರಸ್ಸಾಗಿರುವ ಶ್ರುತಿ ನಾಯ್ಡು ಏನಾದರೂ ಅನಂತ್‌ನಾಗ್ ಜೋಡಿಯಾದಳೆಂದರೆ ಅದು ಆಭಾಸವಾಗುತ್ತದೆ ಎಂಬ ಅಳುಕು ಹರಿಕೃಷ್ಣರದ್ದಾದರೂ ದರ್ಶನ್ ಮಾತನ್ನು ಮೀರುವ ಧೈರ್ಯವೆಲ್ಲಿದೆ?

ಆದರೆ ಇನ್ನೂ ದೊಡ್ಡ ಮಟ್ಟದ ಫಜೀತಿಯಾಗಿದ್ದು ಶ್ರುತಿ ನಾಯ್ಡುಗೆ ಸಂಬಂಧಪಟ್ಟ ಶೂಟಿಂಗ್ ಎಲ್ಲವನ್ನೂ ಬ್ಯಾಂಕಾಕ್‌ನಲ್ಲೇ ಮಾಡಬೇಕೆಂಬ ದರ್ಶನ್ ಆದೇಶದಿಂದಾಗಿ. ಹೀರೋಯಿನ್ ತಂದೆತಾಯಿಗಳ ಪಾತ್ರವನ್ನು ಯಾರಾದರೂ ಏಕೆ ಬ್ಯಾಂಕಾಕ್‌ನಲ್ಲಿ ಶೂಟಿಂಗ್ ಮಾಡುತ್ತಾರೆಂಬ ಕನಿಷ್ಠ ಪ್ರಜ್ಞೆಯನ್ನೇ ದರ್ಶನ್ ಮಸ್ತಿಗೆ ಬಿದ್ದು ಕಳಕೊಂಡಿದ್ದ. ಹೀರೋ-ಹೀರೋಯಿನ್ ಬ್ಯಾಂಕಾಕ್‌ನಲ್ಲಿ ಡ್ಯುಯೆಟ್ ಹಾಡುವುದೇನೋ ಸರಿ. ಆದರೆ ಹೀರೋಯಿನ್ ತಂದೆತಾಯಿಗಳಿಗೆ ಬ್ಯಾಂಕಾಕ್‌ನಲ್ಲೇನು ಕೆಲಸ?

ಇಂಥ ಫಜೀತಿಗೆ ಬಿದ್ದೂ ಹರಿಕೃಷ್ಣ 'ಜೈ ಭಜರಂಗ ಬಲಿ' ಚಿತ್ರದ ಬಹುಪಾಲು ಶೂಟಿಂಗ್ ಮುಗಿಸಿದ್ದಾರಾದರೂ ಅನಂತ್‌ನಾಗ್-ಶ್ರುತಿ ನಾಯ್ಡು ಜೋಡಿಯ ಬ್ಯಾಂಕಾಕ್ ಶೂಟಿಂಗ್‌ಗೆ ಮಾತ್ರ ಗಳಿಗೆ ಕೂಡಿಬರುತ್ತಿಲ್ಲ. ಏಕೆಂದರೆ ಶ್ರುತಿ ನಾಯ್ಡು ಬ್ಯಾಂಕಾಕ್‌ನಲ್ಲಿರುವಾಗಲೇ ದರ್ಶನ್ ಕೂಡ ಬ್ಯಾಂಕಾಕ್‌ನಲ್ಲಿರಬೇಕಂತೆ. ಸದ್ಯದ ಬಿಜಿ ಶೆಡ್ಯೂಲ್ ಮಧ್ಯೆ ಬ್ಯಾಂಕಾಕ್ ಮೋಜಿಗೆ ದರ್ಶನ್‌ಗೆ ಟೈಮು ಸಿಗುತ್ತಿಲ್ಲ. ದರ್ಶನ್ ಬ್ಯಾಂಕಾಕ್‌ಗೆ ಹಾರುವುದು ನಿಕ್ಕಿಯಾಗದೆ ಶ್ರುತಿ ನಾಯ್ಡು ಕೂಡ ಬ್ಯಾಂಕಾಕ್‌ಗೆ ಹೋಗಿ ಪ್ರಯೋಜನವಿಲ್ಲ. ಅಂತೂ ಮ್ಯೂಜಿಕ್ ಡೈರೆಕ್ಟರ್ ಹರಿಕೃಷ್ಣ ಕೋಟಿಗಟ್ಟಲೆ ಸುರಿದು ನಿರ್ಮಿಸ ಹೊರಟ 'ಜೈ ಭಜರಂಗ ಬಲಿ'ಗೆ ಬ್ಯಾಂಕಾಕ್ ದುರ್ಗತಿಯಿಂದಾಗಿಯೇ ಮುಕ್ತಿ ಸಿಗುತ್ತಿಲ್ಲ.

ಅಂದಹಾಗೆ ಈ ಶ್ರುತಿ ನಾಯ್ಡು ಕೂಡ ಮೈಸೂರಿನವಳಂತೆ. ಶುರುವಿನಲ್ಲಿ ಸಣ್ಣಪುಟ್ಟ ಅವಕಾಶಗಳಿಗಾಗಿ ದರ್ಶನ್ ಬೆಂಗಳೂರಿನಲ್ಲಿ ಓಡಾಡಿಕೊಂಡಿದ್ದಾಗ ಈಕೆಯೇ ಕರೆದೊಯ್ದು ಟೀವಿ ಸೀರಿಯಲ್ಲುಗಳಲ್ಲಿ ಛಾನ್ಸ್ ಕೊಡಿಸಿದ್ದಳಂತೆ. ಸಣ್ಣ ಪುಟ್ಟ ಖರ್ಚಿಗೂ ಈಕೆ ನೆರವಾಗಿದ್ದಳಂತೆ. ಈಗ ದರ್ಶನ್ ತೀರಿಸ ಹೊರಟಿದ್ದು ಆಕೆಯ ಆವತ್ತಿನ ಋಣವಂತೆ.

ಬಹುಶಃ ಬ್ಯಾಂಕಾಕ್‌ನಲ್ಲಿ ಋಣ ತೀರಿಸುತ್ತೇನೆಂದು ದರ್ಶನ್ ಮಾತು ಕೊಟ್ಟಿದ್ದನೆ? ಅಥವಾ ಶ್ರುತಿ ನಾಯ್ಡು ಹರಕೆ ಹೊತ್ತಿದ್ದಳೆ? ತಮಾಷೆಯಾದರೂ ವಿಚಿತ್ರವಲ್ಲವೆ

ತ ಕಂಗೊಳಿಸುತ್ತಿದ್ದರು. ಆದರೆ ದರ್ಶನ್ ... !

...ನಂತರ 'ಬುಲ್‌ಬುಲ್'ನ ಶತದಿನೋತ್ಸವ ...ಷ್ಟೇ ಸಂಭ್ರಮದಿಂದ ನಡೆಯಿತು. ತಮ್ಮ ...ಮತ್ತು ತಾಯಿ ಮೀನಾ ತೂಗುದೀಪರೇ ...ಕ್ಕಸಕ್ಕ ಮಿಂಚುತ್ತಿದ್ದರೆ once again ...ಏಕಾಂಗಿ.

ಪ್ರತಿಭಟನೆ...

...ಒಂದೆಡೆಯಾದರೆ ಮತ್ತೊಂದೆಡೆ ದರ್ಶನ್ ...ಯೂ ಹೊಸ ಹೊಸ ಕತೆಗಳು ...ಮುತ್ತಿವೆ. ಅದು ಶುರುವಾಗಿದ್ದೇ ಸುದೀಪ್ ... ಬಿಗ್‌ಬಾಸ್ ಮನೆಯಿಂದ. ವಿಜಯ ...ದ್ರ ಅಂತಿಮ ಸುತ್ತಿನಲ್ಲಿ ಅರುಣ್ ...ನ್ನು ಹಿಂದಿಕ್ಕಿ ಬಿಗ್‌ಬಾಸ್ ...ಯಾಗಿದ್ದೇನೋ ಸರಿ. ಆದರೆ ಫೈನಲ್ ... ಅರುಣ್‌ಸಾಗರ್, ಚಂದ್ರಿಕಾ, ಅನುಶ್ರೀ ...ವಿಜಯರಾಘವೇಂದ್ರ ಸೇರಿದಂತೆ ನಿಖಿತಾಳ ...ಗಳೆಲ್ಲರೂ ಬಿಗ್‌ಬಾಸ್ ಮನೆಯಲ್ಲೇ ವಿಚಿತ್ರ ...ಯೊಂದನ್ನು ನಡೆಸಿದ್ದರೆಂಬ ಸಂಗತಿ ಮಾತ್ರ ... ನಿಗೂಢ.

...ನಿಖಿತಾ ಬಗ್ಗೆ ಬಿಗ್‌ಬಾಸ್ ಸೂತ್ರಧಾರ ... ಮತ್ತು ರಾಘವೇಂದ್ರ ಅನುಸರಿಸುತ್ತಿದ್ದ ... ವಿರುದ್ಧ ನಡೆದ ಪ್ರತಿಭಟನೆ!



...ಗೆ ಕನ್ನಡವೇ ಬಾರದ, ಕನ್ನಡ ಕಲಿಯುವ ಯಾವುದೇ ...ನ್ನೆ ತೋರದ, ಗ್ಲಾಮರ್ ಹೊರತಾಗಿ ಬೇರಾವುದೇ ...ತೆಯಿಲ್ಲದ, ಬಿಗ್‌ಬಾಸ್ ನಿಯಮಾವಳಿಗಳನ್ನು ...ರಕ್ಕೂ ಪಾಲಿಸದ ನಿಖಿತಾಳನ್ನು ಫೈನಲ್‌ತನಕ ...ಂಡಿದ್ದೇ ಆಕೆ ಮತ್ತು ದರ್ಶನ್‌ನ ಸ್ನೇಹದ ...ದೂ, ಆಕೆಯನ್ನೇ ಎಂಡಮಾಲ್ ಹಕ್ಕುದಾರರು ...ಎಂದು ಘೋಷಿಸುತ್ತಾರೆಂದೂ, ಇದಕ್ಕೆ ಸುದೀಪ್ ...ಣವೆಂದೂ, ಸುದೀಪ್ ಮತ್ತು ದರ್ಶನ್ ಗೆಳೆತನದ ... ನಿಖಿತಾಳನ್ನು ಬಿಗ್‌ಬಾಸ್ ಕಾರ್ಯಕ್ರಮದೊಳಕ್ಕೆ ...ದ್ದಾರೆಂದೂ, ದರ್ಶನ್ ಸುದೀಪ್ ಮೇಲೆ ಒತ್ತಡ ... ಗೆಳತಿಯನ್ನೇ ಬಿಗ್‌ಬಾಸ್ ಕಾರ್ಯಕ್ರಮದ 'ವಿನ್ನರ್' ...ತೆ ಮಾಡುತ್ತಾರೆಂದು ಖಚಿತವಾಗಿ ಗೊತ್ತಾಗಿದ್ದು ...ಪಿತಾ ಮೂಲಕವೇ. ದರ್ಶನ್ ತನ್ನ ಬೆನ್ನಿಗಿರುವ ...ನ್ನ ಹೊರತಾಗಿ ಬೇರೆ ಯಾರೇ ಬಿಗ್‌ಬಾಸ್ ...ಆದ್ರೂ ಅದಕ್ಕೆ 5 ಲಕ್ಷ ಕೊಡ್ತೀನಿ... ಎಂದು ... ತನ್ನ ಸಹಸ್ಪರ್ಧಿ ಅನುಶ್ರೀ ಜೊತೆ ಬೆಟ್ಟಿಂಗ್ ...ಗೊತ್ತಾಗಿಯೇ ಫೈನಲಿಸ್ಟ್‌ಗಳೆಲ್ಲ ಪ್ರತಿಭಟನೆಗಿಳಿದರು. ...ಬಿಗ್‌ಬಾಸ್ ಕಾರ್ಯಕ್ರಮದ ಬಂಡವಾಳವೆಲ್ಲಿ ...ಗುತ್ತೋ ಎಂದು ನಿಖಿತಾ ವಿರುದ್ಧದ ಪ್ರತಿಭಟನೆಯ ...ಂಗಳನ್ನೆಲ್ಲ ಖುದ್ದು ಸುದೀಪ್ ನಿಂತು ...ಕಾಯ್ತು?

...ಪಿ ಬೇರೆಯವರ ಕಿವಿ ಮುಟ್ಟುವುದು ಎಷ್ಟು ...? ಸಾಲದ್ದಕ್ಕೆ ಬಿಗ್‌ಬಾಸ್ ಹೋಗೆ ಆಗಮಿಸಿದ್ದ ... ತಾಯಿಯೇ 'ನನ್ನ ಮಗಳು ಇನ್ನು ಮುಂದೆ ...ಮಗಳಾಗುತ್ತಾಳೆ. ಕೊನೇತನಕ ಕನ್ನಡದವಳಾಗಿಯೇ ...' ಎಂದಿದ್ದು ಕೂಡ ದರ್ಶನ್ ಜೊತೆಗಿನ ಸ್ನೇಹದ ... ಎಂಬುದೂ ಕಾಕತಾಳೀಯವಾಗಿತ್ತು!

...ನ್ ಈಗ ಏಕಾಂಗಿಯಾಗಿರುವುದಕ್ಕೂ, ಇದಕ್ಕೂ ...ಬಂಧ ಎಂಬುದನ್ನು ಕಾಲವೇ ಉತ್ತರಿಸುತ್ತದೆ ... ಗಾಂಧಿನಗರ.

● ಡಾ. ಸೋಮನಾಥ್

ಬೀದರ್ ನಂಗಾನಾಚ್

ನರಭಕ್ಷಕ ರಾಜಕಾರಣಿಗಳು

ಬೀದರ್‌ನ ರಾಜಕಾರಣಿಗಳ ಹಲ್ಕಟ್‌ಗಿರಿಯನ್ನು ಪ್ರಶ್ನಿಸುವ ಯಾವ ಕಾನೂನುಗಳೂ ಕರ್ನಾಟಕದಲ್ಲಿ ಇಲ್ಲ ಎಂಬುದು ಇನ್ನೊಮ್ಮೆ ಸಾಬೀತಾಗಿದೆ. ಅದರ ಬದಲಾಗಿ ಈ ನರಭಕ್ಷಕ ರಾಜಕಾರಣಿಗಳ ಅಂಧಾ ದರ್ಬಾರಿನ ಮುಖವಾಡ ಕಳಚಲು ಯತ್ನಿಸುವವರ ಬಾಯನ್ನೇ ಮುಚ್ಚಿಸುವ ಕೆಲಸಕ್ಕೆ ಪೊಲೀಸರು ಹೊರಟಿದ್ದಾರೆ.

ಕಳೆದ ವಾರ ಕಸ್ತೂರಿ ಟಿವಿ ಚಾನಲ್ ಬಹಿರಂಗಪಡಿಸಿದ 'ಬೀದರ್ ನಂಗಾನಾಚ್' ಪ್ರಕರಣವು ರಾಜ್ಯಾದ್ಯಂತ ಗುಲ್ಲೆಬ್ಬಿಸಿತ್ತು, ಬಿಜೆಪಿಯ ಜಿಲ್ಲಾ ನಾಯಕ ವಾಲಿ ಹಾಗೂ ಮಾಜಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಕುದುರಿ ಆ ಅಸಹ್ಯ ನಂಗಾನಾಚ್‌ನಲ್ಲಿದ್ದರೆಂತಲೂ ಸುದ್ದಿಗಳು ಪ್ರಸಾರವಾಗಿದ್ದವು.

ಈ ಪ್ರಕರಣದ ಸತ್ಯಾಸತ್ಯತೆಗಳೇನೆಂದು ನಿಷ್ಪಕ್ಷಪಾತ ತನಿಖೆ ಮಾಡಬೇಕಿದ್ದ ಜಿಲ್ಲಾ ಪೊಲೀಸರು ಈಗ ಪ್ರಕರಣ ಪತ್ತೆ ಹಚ್ಚಿದ ಪತ್ರಕರ್ತರನ್ನೇ ಅರೆಸ್ಟ್ ಮಾಡಿದ್ದಾರೆ.

ಕಸ್ತೂರಿ ಟಿವಿಯ ಜಿಲ್ಲಾ ವರದಿಗಾರ ಓಂಕಾರ ಮಠಪತಿ ಹಾಗೂ ಸ್ಥಳೀಯ ದುರ್ಗಾ ಕೇಬಲ್ ಟಿವಿ ನೆಟ್‌ವರ್ಕ್‌ನ ವಿಜಯಕುಮಾರ್ ಗುಮ್ಮೆಯವರನ್ನು ಬಂಧಿಸಿ ಕೇಸು ದಾಖಲಿಸಿದ್ದಾರೆ!

ಇವೆಲ್ಲಾ ಜಾಮೀನು ಸಿಗಬಹುದಾದ ಸೆಕ್ಷನ್‌ಗಳೇ ಆಗಿದ್ದು ಈ ಇಬ್ಬರೂ ಪತ್ರಕರ್ತರು ಈಗ ಜಾಮೀನು ಪಡೆದು ಹೊರಬಂದಿದ್ದಾರೆ. ಈ ಪ್ರಕರಣದ ತನಿಖೆ ಮುಂದುವರೆಸುವ ಭಾಗವಾಗಿ ಆ ಸಿಡಿ ಹೇಗೆ, ಎಲ್ಲಿ ಸಿಕ್ಕಿತೆಂಬುದನ್ನು ತಿಳಿಯಲು ಸಂಬಂಧಿಸಿದ ಪತ್ರಕರ್ತರನ್ನು ಪ್ರಶ್ನಿಸುವ ಅನಿವಾರ್ಯತೆ ಪೊಲೀಸರಿಗಿತ್ತೆಂಬುದು ವಾಸ್ತವವೇ ಆಗಿದೆ. ಆದರೆ ಫೊರೆನ್ಸಿಕ್ ವರದಿ ತರಿಸಿಕೊಳ್ಳುವ ಮೊದಲೇ ಈ ಸೀಡಿ ನಕಲಿಯೆಂತಲೂ, ನಾಲ್ಕು ವರ್ಷಗಳ ಹಿಂದೆಯೇ ಪಾಕಿಸ್ತಾನದಲ್ಲಿ ತಯಾರಾಗಿದ್ದ ಸೀಡಿ ಇದೆಂತಲೂ ಜಿಲ್ಲಾ ಪೊಲೀಸ್ ಎಸ್‌ಪಿಯೇ ಪತ್ರಿಕಾ ಹೇಳಿಕೆ ನೀಡುತ್ತಾರೆಂದರೆ ಜನ ಯಾರನ್ನು ನಂಬಬೇಕು?

ನೃತ್ಯಗಾತಿ ಹೇಳಿದ್ದು

ಬೀದರ್ ನಂಗಾನಾಚ್ ಅನ್ನು ಬಿಜೆಪಿ ದೇಶಭಕ್ತರು ಅದೆಲ್ಲಿ ಏರ್ಪಡಿಸಿದ್ದರೆಂಬುದು ಇದುವರೆಗೂ ಪತ್ತೆಯಾಗಿಲ್ಲ. ಒಂದೋ ಅದರ ಬಗ್ಗೆ ಹಿಂದೂ ಧರ್ಮವಂತರೇ ಬಾಯಿ ಬಿಡಬೇಕು. ಇಲ್ಲ ಆ ಡ್ಯಾನ್ಸರ್ ಹೆಣ್ಣು ಹೇಳಬೇಕು.

ಆದರೆ ಪರಿಸ್ಥಿತಿ ಹಾಗಿದೆಯಾ ಅಂತ ನೋಡಿದರೆ ಎಲ್ಲಾ ಉಲ್ಟಾಪಲ್ಟಾ!

ಜಿಲ್ಲಾ ಬಿಜೆಪಿ ನಾಯಕ ವಾಲಿ 'ಅದು ನಾನಲ್ಲ' ಅಂತ ಹೇಳಿ ಗಾಂಧಿ ಗಂಜ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾನೆ. ಸೀಡಿಯಲ್ಲಿ ಕಾಣುವುದು ಬಿ.ಎಸ್. ಕುದುರಿ ಅಂತ ಸುದ್ದಿ ಹಬ್ಬಿದ್ದರೂ ಆತ ಈಗ ನೋಡಲು ಸೀಡಿಯಲ್ಲಿ ಕಾಣುವುದಕ್ಕಿಂತ ಕೊಂಚ ದಪ್ಪಗಿರುವುದು ನಿಜ.

ಆದರೆ ಈ ಸೀಡಿ ಈಗಿನದಲ್ಲ, ನಾಲ್ಕು ವರ್ಷದ ಹಿಂದೆ ರೆಕಾರ್ಡ್ ಮಾಡಿರುವ ನಂಗಾನಾಚ್ ಅದು.

ಇದನ್ನು ಪತ್ರಕರ್ತ ಓಂಕಾರ ಮಠಪತಿ ಹಾಗೂ ವಿಜಯಕುಮಾರ್ ಗುಮ್ಮೆಗೆ ಹೇಳಿರುವುದು ಮುಖಕ್ಕೆ ಪರದೆ ಹಾಕಿಕೊಂಡಿದ್ದ ಒಬ್ಬ ಮಹಿಳೆ. ಆಕೆ ಸೀಡಿಯನ್ನು ಈ ಪತ್ರಕರ್ತರಿಗೆ ತಲುಪಿಸಿದಾಗ ಅವರೇನೂ ಅದನ್ನು ಏಕಾಏಕಿ ನಂಬಿರಲಿಲ್ಲ. ಅದರ ಹಿನ್ನೆಲೆ, ನಂಗಾನಾಚ್ ಅರೇಂಜ್ ಮಾಡಿದವರ್‍ಯಾರು, ನಡೆದದ್ದೆಲ್ಲಿ, ಅಲ್ಲಿದ್ದ ಜನರ್‍ಯಾರು? ಅಂತೆಲ್ಲಾ ಕೇಳಿದ್ದಾರೆ. ಆಗ ಆಕೆ ತಾನು ತನ್ನ ಮುಖ ಮರೆಸಿಕೊಂಡು ಕ್ಯಾಮೆರಾದೆದುರು ನಿಂತು ವಿವರಣೆ ಕೊಡುವುದಾಗಿ ಹೇಳಿದ್ದಾಳೆ. ಆದರೆ ಅವತ್ತು ಅಕಸ್ಮಾತ್ತಾಗಿ ಆ ಹೇಳಿಕೆ ಪಡೆಯುವ ಕೆಲಸ ವಾಲಿ ಜಿಲ್ಲಾ ಬಿಜೆಪಿ ಕಾರ್ಯದರ್ಶಿ ರವಿ ಸ್ವಾಮಿಯ ಕಚೇರಿಯಲ್ಲಾಯಿತು. ಆ ಕಾರಣಕ್ಕೆ, ರವಿ ಸ್ವಾಮಿಯನ್ನು ಪೊಲೀಸರು ಹಿಡಿದು ಎಳೆದೊಯ್ದದ್ದು.

ಅವತ್ತು ಮಳೆ ಬರುತ್ತಿತ್ತು, ಮಠಪತಿ, ಗುಮ್ಮೆ ಹಾಗು ಆ ಮಹಿಳೆ ಹೊರಗೆ ನೆನೆಯುತ್ತಾ ಇದ್ದುದನ್ನು ನೋಡಿ ನಾನೇ ಒಳಗೆ ಕರೆದೆ. ಅವರು ಈಕೆಯ ಒಂದು ಬೈಟ್ ತಗೊಂಡು ಹೋಗ್ತಿವೆಂದರು. ನನಗೆ ವಿಷಯ ಗೊತ್ತಿರಲಿಲ್ಲ, ಆಗಲಿ ಅಂದೆ. ಆದರೆ ಮರುದಿನ ಟಿವಿ ನೋಡಿದಾಗಲೇ ಅದರ ಒಳ್ಳೆ ಅರ್ಥವಾಗಿದ್ದು ಅನ್ನುತ್ತಿದ್ದಾನೆ ಈಗ ರವಿಸ್ವಾಮಿ.

ಇದೇನೇ ಇರಲಿ,

ಇಂತಹ ಪ್ರಕರಣಗಳು ನಡೆದಾಗ ಪೊಲೀಸರು ಹೇಗೆ ಎಲ್ಲಿಂದ ತನಿಖೆ ಶುರು ಮಾಡಬೇಕು?

ಇದೊಂದು ನಕಲಿ ಸೀಡಿ ಅಂತ ಶಂಕಿತ ಆರೋಪಿ ವಾಲಿ ಹೇಳಿದ ಮಾತ್ರಕ್ಕೆ ಆ ಸೀಡಿ ನಕಲಿ ಎಂದು ಪೊಲೀಸರು ಏಕಾಏಕಿ ತೀರ್ಮಾನಕ್ಕೆ ಹೇಗೆ ಬಂದರು.

ಇಂಡಿಯಾದಲ್ಲಿ ಇಂತವುಗಳ ಸತ್ಯಾಸತ್ಯತೆಯನ್ನು ಚೆಕ್ ಮಾಡುವಂತಹ ಫೊರೆನ್ಸಿಕ್ ಲ್ಯಾಬ್‌ಗಳು ಬೆರಳೆಣಿಕೆಯಷ್ಟಿವೆ. ಕೊಲ್ಕತ್ತಾ, ಬೆಂಗಳೂರು, ಅಹಮದಾಬಾದ್



ಮುಂತಾದೆಡೆಯಿರುವ ಈ ಲ್ಯಾಬ್‌ಗಳ ಪೈಕಿ ಒಂದೊಂದು ಲ್ಯಾಬ್‌ಗಳೂ ಒಂದೊಂದು ವಿಚಾರದಲ್ಲಿ ಪ್ರಾವೀಣ್ಯತೆ ಹೊಂದಿವೆ. ಹಾಗಾಗಿ ಇಲ್ಲೆಲ್ಲಾ ನೂರಾರು ಸೀಡಿ, ಧ್ವನಿ, ನಕಲಿ ಸಹಿ, ಫೋರ್ಜರಿ ದಾಖಲೆಗಳ ಕೇಸ್‌ಗಳು ತನಿಖೆಗಾಗಿ ಬರುತ್ತಿರುತ್ತವೆ. ಪ್ರಕರಣದ ಪ್ರಾಮುಖ್ಯತೆ ಆಧರಿಸಿ ಯಾವುದು ಮೊದಲು ಯಾವುದು ನಂತರ ಎಂಬುದನ್ನು ಅವರವರೇ ತೀರ್ಮಾನಿಸುತ್ತಾರೆ. ಈ ಹಿನ್ನೆಲೆಯಲ್ಲಿ ಬೀದರ್ ಪೊಲೀಸರಿಗೆ ನಂಗಾನಾಚ್ ಸೀಡಿ ಅಸಲಿಯೋ ಇಲ್ಲಾ ನಕಲಿಯೋ ಎಂಬುದರ ಫೊರೆನ್ಸಿಕ್ ವರದಿ ಮುಂದಿನ ಕೆಲವು ತಿಂಗಳ ಕಾಲ ಸಿಗುವುದಿಲ್ಲ. ಜಿಲ್ಲಾ ಪೊಲೀಸರಿಗೆ ಅದನ್ನು ಅರ್ಜೆಂಟಾಗಿ ತರಿಸಿಕೊಳ್ಳಬೇಕೆಂಬ ಮೂಡು ಇಲ್ಲ. ಹಾಗಾಗಿ ಪ್ರಕರಣ ಬಯಲುಗೊಳಿಸಿದ ಪತ್ರಕರ್ತರನ್ನೇ ಮೊದಲು ಬಂಧಿಸಿ ಅವರೇ ಇದೆಲ್ಲದಕ್ಕೂ ಕಾರಣ ಎಂಬಂತೆ ಬಿಂಬಿಸುತ್ತಿದ್ದಾರೆ.

ಒಂದೊಮ್ಮೆ ಹೇಳಿಕೆ ನೀಡಿರುವ ಆ ಯುವತಿ ಸಿಕ್ಕಿದರೂ ಆ ಡ್ಯಾನ್ಸರ್ ಮಹಿಳೆ ಸಿಗುವುದು ಸುಲಭವಲ್ಲ ಎನ್ನಲಾಗಿದೆ.

ಯಾಕೆ ಗೊತ್ತೆ?

ಆಕೆ ದುಬೈ ಸೇರಿಕೊಂಡಿದ್ದಾಳೆ ಎಂಬ ಸುದ್ದಿಗಳಿವೆ.

ಬೀದರ್‌ನ ರಾಜಕಾರಣಿಗಳ ಈ ನಂಗಾನಾಚ್ ಚಟ, ಹೈದರಾಬಾದ್‌ಗೆ ಆಗಾಗ್ಗೆ ಹೋಗಿಬರುತ್ತಾ ನಡೆಸುತ್ತಿರುವ ಮೋಜುಮಸ್ತಿಗಳನ್ನು ಆಕೆ ಅನೇಕ ವರ್ಷಗಳಿಂದ ನೋಡುತ್ತಾ ಬಂದಿದ್ದಾಳಂತೆ. ಕಿಂಚಿತ್ತೂ ಮಾನಮರ್ಯಾದೆಯಿರದ ಈ ಹೆಣ್ಣುಬಾಕ ನರಭಕ್ಷಕ ರಾಜಕಾರಣಿಗಳ ಮುಖ ಕಂಡರೆ ಹೇಸಿಗೆ ಪಟ್ಟುಕೊಳ್ಳುತ್ತಿದ್ದ ಆಕೆಯೇ ಒಮ್ಮೆ ಯಾರಿಗೋ ಹೇಳಿ ಈ ನಂಗಾನಾಚ್ ಅನ್ನು ರೆಕಾರ್ಡ್ ಮಾಡಿಸಿಟ್ಟುಕೊಂಡಿದ್ದಳು ಎನ್ನಲಾಗಿದೆ.

ಆ ನಂತರ ಆ ಡ್ಯಾನ್ಸರ್ ದುಬೈಗೆ ಹೊರಟು ಹೋದಳಂತೆ. ಹಾಗೆ ಹೋಗುವಾಗ ಈ ನಂಗಾನಾಚ್ ಸೀಡಿಯನ್ನು ಮುಖಪರದೆ ಹಾಕಿಕೊಂಡಿದ್ದ ಹುಡುಗಿ ಕೈಗೆ ನೀಡಿ ಅದನ್ನು ಬೀದರಿನ ಯಾರಾದರೂ ಪತ್ರಕರ್ತರ ಕೈಗೆ ತಲುಪಿಸಿ ಈ ರಾಜಕಾರಣಿಗಳ ಮುಖವಾಡ ಕಳಚುವಂತೆ ಸೂಚನೆ ನೀಡಿ ದೇಶ ಬಿಟ್ಟು ಹೋದಳಂತೆ.

ಅದೇ ಈಗ ಬಯಲಾಗಿರುವ ನಂಗಾನಾಚ್ ಸೀಡಿ.

ಬೀದರ್ ಪೊಲೀಸರ ಕೆಟ್ಟ ಪರಂಪರೆ

ಬೀದರ್ ಪೊಲೀಸರ ಒಂದು ಕೆಟ್ಟ ಚಾಳಿ ಏನೆಂದರೆ ಇಡೀ ಇಂಡಿಯಾ ದೇಶದಲ್ಲಿ ಕಾನೂನು ಎಲ್ಲರಿಗೂ ಒಂದೇ ಆಗಿದ್ದರೂ ಅದು ಬೀದರಿನಲ್ಲಿ ಏಕಾಏಕಿ ಜಾರಿಗೆ ಬರದಂತೆ ಮಾಡುತ್ತಾರೆ.

ಕಾನೂನು ಏನೇ ಹೇಳಲಿ, ಆದರೆ ಅಲ್ಲಿನ ಸ್ಥಳೀಯ ಶಾಸಕ, ಮಂತ್ರಿ, ರಾಜಕಾರಣಿ, ಜಾತಿ ನಾಯಕ, ಭೂಮಾಲೀಕ... ಇಂತವರಿಗೆ ಕಾನೂನಿನ ಬಿಸಿ ಎಂದಿಗೂ ತಾಕದಂತೆ ಕಾವಲು ಕಾಯುವ ಕಾಯಕ ಪೊಲೀಸರದು. ಜೊತೆಗೆ ಈ ದೌರ್ಜನ್ಯಗಳ ವಿರುದ್ಧ ದನಿ ಎತ್ತುವ ಪತ್ರಕರ್ತರು ಹಾಗೂ ಹೋರಾಟಗಾರರ ದನಿ ಅಡಗಿಸುವ ಪರಂಪರೆಯು ಬೀದರ್ ಪೊಲೀಸರಿಗಿದೆ.

ಈಗ್ಗೆ ಮೂರು ವರ್ಷಗಳ ಹಿಂದೆ ಈ ಟಿವಿ ವರದಿಗಾರ ಪುರುಷೋತ್ತಮ ತಾಶೀಲ್ದಾರ್ ಎಂಬುವರನ್ನು ಒಂದು ವಿಚಿತ್ರ ಆರೋಪ ಹೊರಿಸಿ ಬೀದರ್ ಪೊಲೀಸರು ಅರೆಸ್ಟ್ ಮಾಡಿದ್ದರು.

ಚಂದ್ರಕಾಂತ್ ಬೆಲ್ಲದ ಬಿಜೆಪಿ ಸರ್ಕಾರದಲ್ಲಿ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾಗ ಒಮ್ಮೆ ಬೀದರ್‌ಗೆ ಬಂದಿದ್ದರು. ಅವತ್ತು ಅವರಿಗೆ ಒಂದು ಮನವಿ ಅರ್ಪಿಸಲು ಹೋಗಿದ್ದ ಕರ್ನಾಟಕ ನವ ನಿರ್ಮಾಣ ಸೇನೆ ಸಂಘಟನೆಯ ಕಾರ್ಯಕರ್ತರು ಬೆಲ್ಲದ್ ಮುಖಕ್ಕೆ ಮಸಿ ಹಚ್ಚಿ ರಾದ್ಧಾಂತ ಮಾಡಿದ್ದರು. ಆ ಘಟನೆಗೆ ಸಂಬಂಧಿಸಿದಂತೆ ವಿಠಲ ಗಾಯಕವಾಡ, ಹರೀಶ್ ಗಾಯಕವಾಡ, ಪ್ರಕಾಶ್ ಕಪಲಾಪುರ್‌ಕರ್, ಸುನೀಲ್ ಕುಮಾರ್ ಎಂಬ ಸೇನೆಯ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದರು. ಆದರೆ ಅವರೊಂದಿಗೆ ಈ ಟಿವಿ ವರದಿಗಾರರಾಗಿದ್ದ ಪುರುಷೋತ್ತಮರನ್ನು ಅರೆಸ್ಟ್ ಮಾಡಿಬಿಟ್ಟರು. ಯಾಕೆಂದು ಕೇಳಿದವರಿಗೆ 'ಈ ವರದಿಗಾರ ಅವರೊಂದಿಗೆ ಫೋನ್‌ನಲ್ಲಿ ಮಾತಾಡಿದ್ದ ದಾಖಲೆ ಸಿಕ್ಕಿದೆ' ಅಂದಿದ್ದರು. ಅದಕ್ಕೆ ವಿವರಣೆ ನೀಡಿದ ಪುರುಷೋತ್ತಮ್ 'ಆ ಕಾರ್ಯಕರ್ತರು ಮನವಿ ಕೊಡುತ್ತಿದ್ದೇವೆ, ಪತ್ರಕರ್ತರೆಲ್ಲಾ ಬರುತ್ತಿದ್ದಾರೆ. ನೀವು ಬನ್ನಿ ಅಂತ ಫೋನ್ ಮಾಡಿ ಕರೆದಿದ್ದರು, ಹಾಗಾಗಿ ನಾನೂ ಹೋಗಿದ್ದೆ ಅಷ್ಟೆ' ಅಂತ ಹೇಳಿದರೂ ಪೊಲೀಸರು ನಂಬಿರಲಿಲ್ಲ. ಬೆಲ್ಲದ್ ಮುಖಕ್ಕೆ ಮಸಿ ಬಳಿದ ಸಂಚಿನಲ್ಲಿ ಈ ಟಿವಿ ವರದಿಗಾರನೂ ಭಾಗಿಯಾಗಿದ್ದನೆಂದು ಬಿಂಬಿಸಿ ಪತ್ರಕರ್ತನ ವಿರುದ್ಧನೇ ಕೇಸು ದಾಖಲು ಮಾಡಿದ್ದರು. ಇದಾದನಂತರ ಮಂಗಳೂರಿನಲ್ಲಿಯೂ ಚಡ್ಡಿಗಳು 'ಮಾರ್ನಿಂಗ್ ಮಿಸ್ಟ್' ಹೋಂಸ್ಟೇ ಮೇಲೆ ದಾಳಿ ನಡೆಸಿದಾಗ ಕಸ್ತೂರಿ ಟಿವಿಯ ನವೀನ್ ಸೂರಿಂಜೆಯನ್ನು ಬಂಧಿಸಿ ಆರು ತಿಂಗಳು ಜೈಲಿಗೆ ಕಳಿಸಿದ್ದ ಪ್ರಕರಣವೂ ಆಯಿತು.

ಈಗ ನೋಡಿದರೆ ಪುನಃ ಬೀದರ್ ಪೊಲೀಸರು ನಂಗಾನಾಚ್ ಸೀಡಿಗೆ ಸಂಬಂಧಿಸಿದಂತೆ ಕಸ್ತೂರಿ ಟಿವಿಯ ಓಂಕಾರ್ ಮಠಪತಿ ಹಾಗೂ ದುರ್ಗಾ ಕೇಬಲ್‌ನ ವಿಜಯ ಕುಮಾರ್ ಗುಮ್ಮೆಯನ್ನು ಬಂಧಿಸಿ ತಮ್ಮ ಪರಾಕ್ರಮ ತೋರಿಸಿದ್ದಾರೆ.

ಬೀದರಿನ ರಾಜಕಾರಣಿಗಳ ಹಲ್ಕಟ್‌ಗಿರಿಯ ಸತ್ಯಾಸತ್ಯತೆಯನ್ನು ತನಿಖೆ ಮಾಡುವ ಪ್ರಾಮಾಣಿಕ ಉದ್ದೇಶ ಪೊಲೀಸರಿಗೆ ಇರುವುದೇ ಅದಲ್ಲ...

ಮೊದಲು ಆ ಸೀಡಿಯನ್ನು ಫೊರೆನ್ಸಿಕ್ ಲ್ಯಾಬ್‌ಗೆ ಕಳುಹಿಸಿ ವರದಿ ತರಿಸಿಕೊಳ್ಳಬೇಕಲ್ಲವೇ? ಆಮೇಲೆ ತಾನೆ ಈ ಸೀಡಿ ಅಸಲಿಯೋ ಇಲ್ಲ ನಕಲಿಯೋ ಎಂಬುದು ಸಾಬೀತಾಗುವುದು.

ಜಿಲ್ಲಾ ಎಸ್‌ಪಿಗೆ ಈ ವರದಿ ಬರುವ ಮುನ್ನವೇ 'ಇದೊಂದು ನಕಲಿ ಸೀಡಿ. ಪಾಕಿಸ್ತಾನದಲ್ಲಿ ತಯಾರಾಗಿದ್ದು' ಎಂದು ಹೇಳುವ ಜರೂರತ್ತೇನಿತ್ತು?

ಬೀದರ್ ಪೊಲೀಸರಿಗೆ ಬೇಕಿರುವುದು ಸತ್ಯವೋ ಇಲ್ಲ ಹಲ್ಕಟ್ ರಾಜಕಾರಣಿಗಳ ರಕ್ಷಣೆಯೋ?

● ವರದಿಗಾರ

ಸರ್ದಾರ್ ಪಟೇಲರನ್ನು ಬುಟ್ಟಿಗೆ ಹಾಕಿಕೊಳ್ಳಲು ಕೇಸರಿಪಾಳ್ಯದ ತಂತ್ರ

"ಇದೇ ಜೂನ್ ಹನ್ನೊಂದರಂದು ಗುಜರಾತ್‌ನ ಗಾಂಧಿನಗರದಲ್ಲಿ ಮಾತನಾಡುತ್ತ ಸರ್ದಾರ್ ಪಟೇಲರ ಪ್ರತಿಮೆಯನ್ನು ನರ್ಮದಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸರ್ದಾರ್ ಸರೋವರ ಅಣೆಕಟ್ಟು ಬಳಿ ಸ್ಥಾಪಿಸುವ ತಮ್ಮ ಯೋಜನೆ ಬಗ್ಗೆ ಅಲ್ಲಿನ ಮುಖ್ಯಮಂತ್ರಿ ನರೇಂದ್ರ ಮೋದಿ ಘೋಷಿಸಿದರು. ಹೈನುಗಾರಿಕೆ, ಕೋಳಿ ಸಾಕಣೆ, ಜಾನುವಾರುಗಳ ಬೆಳವಣಿಗೆ, ಹಾಲು ಉತ್ಪನ್ನಗಳ ತಯಾರಿಕೆ ಮತ್ತು ವಿತರಣೆ ಕುರಿತ ಅಖಿಲ ಭಾರತ ಸಮ್ಮೇಳನವನ್ನು ಆ ದಿನ ಅಲ್ಲಿ ಉದ್ಘಾಟಿಸಿ ಮೋದಿ ಮಾತನಾಡುತ್ತಿದ್ದರು.

'ಸ್ಟ್ಯಾಚ್ಯೂ ಆಫ್ ಯೂನಿಟಿ'- ಐಕಮತ್ಯದ ಪ್ರತಿಮೆ- ಎಂಬ ಹೆಸರಿನ ಪಟೇಲರ ಬೃಹತ್ ಉಕ್ಕಿನ ಪ್ರತಿಮೆ ತಯಾರಿಸಲು ದೇಶದ ಐದು ಲಕ್ಷ ಹಳ್ಳಿಗಳಲ್ಲಿನ ರೈತಾಪಿ ಜನರಿಂದ ಅವರು ಉಪಯೋಗಿಸಿದ ಕಬ್ಬಿಣ ಸಲಕರಣೆಗಳಿಂದ ತೆಗೆದ ಕಬ್ಬಿಣ ತುಂಡುಗಳನ್ನು ಸಂಗ್ರಹಿಸಲು ಸರ್ದಾರ್ ಪಟೇಲರ ಹುಟ್ಟುಹಬ್ಬವಾದ ಇದೇ ಅಕ್ಟೋಬರ್ ಮೂವತ್ತೊಂದರಿಂದ ದೇಶವ್ಯಾಪಿ ಕಬ್ಬಿಣ ಸಂಗ್ರಹ ಕಾರ್ಯಕ್ರಮವನ್ನು ಆರಂಭಿಸುವುದಾಗಿ ಮೋದಿ ಪ್ರಕಟಿಸಿದರು. ವಿಶ್ವದ ಅತಿ ಎತ್ತರದ ಪ್ರತಿಮೆ ಎಂದು ಖ್ಯಾತಿ ಪಡೆದ ಪ್ರತಿಮೆ ಎಂದರೆ ಅಮೆರಿಕದ ನ್ಯೂಯಾರ್ಕ್‌ನಲ್ಲಿರುವ ಸ್ಟ್ಯಾಚ್ಯೂ ಆಫ್ ಲಿಬರ್ಟಿ ಪ್ರತಿಮೆ. ತಾವು ನಿರ್ಮಿಸಲಿರುವ ಪಟೇಲರ ಪ್ರತಿಮೆ ವಿಶ್ವದಲ್ಲೇ ಅತಿ ಎತ್ತರದ ಪ್ರತಿಮೆಯಾಗಿದ್ದು 182 ಮೀಟರ್ (392 ಅಡಿಗಳು) ಎಂದರೆ ಸ್ಟ್ಯಾಚ್ಯೂ ಆಫ್ ಲಿಬರ್ಟಿಯ ಎರಡರಷ್ಟು ಎತ್ತರ ಇರುವುದೆಂದು ಮೋದಿ ವಿವರಿಸಿದರು. ದೇಶದಲ್ಲೇ ಅತಿ ಎತ್ತರದ್ದು ಎನಿಸಿಕೊಳ್ಳುವಂಥ ಕನ್ನಡ ಭುವನೇಶ್ವರಿ ಪ್ರತಿಮೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದಾಗಿ ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪ ಘೋಷಿಸಿದ್ದನ್ನು ಮತ್ತು ಮರೆತದ್ದನ್ನು ಇಲ್ಲಿ ಸ್ಮರಿಸಬಹುದು. ಯಾವುದೇ ವಿಚಾರಕ್ಕೆ ಬದ್ಧತೆ ನಿಷ್ಠೆಗಳನ್ನು ಪ್ರತಿಮೆ, ಅಭಿಷೇಕ, ಆರಾಧನೆ, ಸಂತರ್ಪಣೆಗಳಿಲ್ಲದೆ ಪ್ರಕಟಿಸಲು ಸಾಧ್ಯವಿಲ್ಲ ಎನ್ನುವುದು ವೈದಿಕ ಪುರೋಹಿತಶಾಹಿ ಮನೋಧರ್ಮದ ಜಾಯಮಾನ. ಮೋದಿಯವರ ಈ ನಿರ್ಧಾರವನ್ನು ಪ್ರಶ್ನಿಸಿದವರನ್ನು ಸರ್ದಾರ್ ಪಟೇಲರ ಬಗ್ಗೆ ಗೌರವವಿಲ್ಲದವರು ಎಂದು ಬಿಜೆಪಿ ಮಂದಿ ಹೀಯಾಳಿಸುವುದು ಖಂಡಿತ.

ಆರೆಸ್ಸೆಸ್ಸಿನ ಪೂರ್ಣಾವಧಿ ಕಾರ್ಯಕರ್ತರಾಗಿದ್ದ ಮೋದಿ ಪ್ರದರ್ಶಿಸಿದ ಸರ್ದಾರ್ ಪಟೇಲ್ ಕುರಿತಾದ ಅಭಿಮಾನದಿಂದಾಗಿ ಹಲವು ಪ್ರಶ್ನೆಗಳು ಉದ್ಭವಿಸಿವೆ. ವ್ಯಾಪಾರೋದ್ಯಮಿಗಳಿಂದ ಬೇಸಾಯದ ಭೂಮಿಯ ಕಬಳಿಕೆ, ಹಿಂದಿನ ಕೆಲ ವರ್ಷಗಳಲ್ಲಿ ಮಳೆಯ ಅಭಾವ ಇತ್ಯಾದಿ ಕಾರಣಗಳಿಂದಾಗಿ ಹಲವು ಸಮಸ್ಯೆಗಳನ್ನೆದುರಿಸುತ್ತಿರುವ ಹೈನುಗಾರಿಕೆ, ಕೋಳಿಸಾಕಣೆ ಕಸುಬುಗಳ ಬಗ್ಗೆ ಏನೇನೂ ಹೇಳದ ಮೋದಿ, ವೇದಿಕೆಯನ್ನು ಸರ್ದಾರ್ ಪಟೇಲರ ಸ್ತೋತ್ರ ಮಾಡಲು ಬಳಸಿಕೊಂಡದ್ದು ವಿಶೇಷ ಮತ್ತು ವಿಚಿತ್ರ. ಹೈನು ಉತ್ಪನ್ನಗಳಾದ ಹಾಲು, ಬೆಣ್ಣೆ ಬಡವರಿಗೆ ಎಟಕುತ್ತಿಲ್ಲವಾಗಿ ಅಪೌಷ್ಟಿಕತೆಗೆ ತುತ್ತಾಗಿರುವ ಮಕ್ಕಳ ಮತ್ತು ಮಹಿಳೆಯರ ಸಂಖ್ಯಾ ಪ್ರಮಾಣದಲ್ಲಿ ವಿಶ್ವ ದಾಖಲೆ ಸೃಷ್ಟಿಸಿರುವ ಬಗ್ಗೆ ಮೋದಿಗೆ ಅರಿವಿರಲಾರದು. ಸರ್ದಾರ್ ಪಟೇಲರ ಚಿಂತನೆ ಸಾಧನೆಗಳಿಗೂ ಮೋದಿ ಪ್ರತಿನಿಧಿಸುವ ಸಿದ್ಧಾಂತ, ಕಾರ್ಯಕ್ರಮಗಳಿಗೂ ಸಂಬಂಧವಿಲ್ಲವಷ್ಟೇ ಅಲ್ಲ; ಸಂಪೂರ್ಣ ವೈರುಧ್ಯವಿದೆ. ಗಾಂಧೀಜಿಯ ಕರೆಗೆ ಓಗೊಟ್ಟು, ಸ್ವಾತಂತ್ರ ಚಳವಳಿಯಲ್ಲಿ ಧುಮುಕಿದ ಹೋರಾಟಗಾರರಲ್ಲಿ ಪಟೇಲರು ಒಬ್ಬ ಅಗ್ರಗಣ್ಯರು. ಗಾಂಧೀಜಿ ಮತ್ತು ನೆಹರೂರ ನಂತರ ಅತಿಜನಪ್ರಿಯ ಕಾಂಗ್ರೆಸ್ ನಾಯಕರು.

ಗಾಂಧೀಜಿ 1928 ರಲ್ಲಿ ಅಸಹಕಾರ ಚಳವಳಿಯ ಕರೆ ಕೊಟ್ಟಾಗ ಗುಜರಾತ್‌ನ ಬಾರ್ಡೋಲಿ ತಾಲ್ಲೂಕಿನಲ್ಲಿ ರೈತರನ್ನು ಸಂಘಟಿಸಿದ ಪಟೇಲರು ಕರನಿರಾಕರಣೆ ಆಂದೋಲನ ನಡೆಸಿದರು. ಸ್ವಾತಂತ್ರ್ಯ ಸಮರದಲ್ಲಿ ಬಾರ್ಡೋಲಿ ಸತ್ಯಾಗ್ರಹ ಒಂದು ಮೈಲಿಗಲ್ಲೆನಿಸಿತಲ್ಲದೆ, ಪಟೇಲರಿಗೆ ಸರ್ದಾರ್ ಎಂಬ ಬಿರುದನ್ನೂ ತಂದು ಕೊಟ್ಟಿತು. ಬ್ರಿಟಿಷರ ಪರ ಇದ್ದ ಕೆಲ ಸುದ್ದಿ ಮಾಧ್ಯಮಗಳು, ಇದನ್ನು "ಬಾರ್ಡೋಲಿಯಲ್ಲಿ ಬೋಲ್ಷಿನಿಸಮ್" (ಆ ದಿನಗಳಲ್ಲಿ ಸಮಾಜವಾದ-ಸೋಷಿಯಲಿಸಮ್ಮನ್ನು ಈ ಹೆಸರಿನಿಂದಲೂ ಕರೆಯುತ್ತಿದ್ದರು) ಎಂದು ಕರೆದದ್ದಲ್ಲದೆ, ಪಟೇಲರನ್ನು 'ಭಾರತದ ಲೆನಿನ್' ಎಂದಿತ್ತು.

ಎಲ್ಲ ಕೋಮುಗಳ, ಎಲ್ಲ ವರ್ಗಗಳ ಸ್ತ್ರೀಯರೂ, ಪುರುಷರೂ ಆ ಹೋರಾಟದಲ್ಲಿ ಭಾಗವಹಿಸಿದ್ದರು. ಸೂರಜ್ ಬೆನ್ ಮೆಹ್ತಾ, ಭಕ್ತಿಬಾಯಿ ದೇಸಾಯಿ ಎಂಬ ಇಬ್ಬರು ಮಹಿಳಾ ಪ್ರಮುಖರೂ, ಅಬ್ದುಲ್ ಖಾದರ್ ಎಂಬ ಇಮಾಮರೂ ಮುಖ್ಯ ಪಾತ್ರ ವಹಿಸಿದ್ದರು. ಗಮನಾರ್ಹ ಅಂಶವೇನೆಂದರೆ ಆ ದಿನಗಳಲ್ಲಿ ಸಕ್ರಿಯವಾಗಿದ್ದ ಆರೆಸ್ಸೆಸ್, ಹಿಂದೂ ಮಹಾಸಭಾಗಳು, ಬಾರ್ಡೋಲಿ ಸತ್ಯಾಗ್ರಹ ದಲ್ಲಾಗಲಿ, ಗಾಂಧೀಜಿಯ ಅನುಯಾಯಿಗಳು ನಡೆಸಿದ ಯಾವುದೇ ಚಳವಳಿಯಲ್ಲಾಗಲಿ ಭಾಗವಹಿಸಲಿಲ್ಲ, ಸ್ವಾತಂತ್ರ ಚಳವಳಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಮತ್ತು ಅಂದಿನ ಕಾಂಗ್ರೆಸ್ ಮುಖಂಡರಲ್ಲೊಬ್ಬರಾಗಿದ್ದ ಸರ್ದಾರ್ ಪಟೇಲರನ್ನು ಈಗ ಹಾಡಿಹೊಗಳುವ ಮೂಲಕ ಈ ಹಿಂದೂತ್ವವಾದಿ ಸಂಘಟನೆಗಳು ಅಂದಿನ ಬ್ರಿಟಿಷ್ ವಿರೋಧಿ ಜನಾಂದೋಲನಗಳಲ್ಲಿ ಪಾಲ್ಗೊಂಡಿದ್ದಂತೆ ತೋರಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಮೋದಿ ಈಗ ಪಟೇಲರನ್ನು ಹೊಗಳುತ್ತಿರುವುದು ಈ ಪ್ರಯತ್ನದ-ಸಂಚಿನ ಒಂದು ಭಾಗ. ಇತಿಹಾಸವನ್ನು ತಿರುಚುವ ಕೆಲಸದಲ್ಲಿ ಹಿಂದೂತ್ವವಾದಿಗಳು ನಿಸ್ಸೀಮರೆಂಬುದು ಸರ್ವವಿದಿತ.

ಮೊದಲನೆಯದಾಗಿ ಮೋದಿ ಮತ್ತು ಹಿಂದೂತ್ವವಾದಿಗಳ ಪಟೇಲರ ಬಗೆಗಿನ ಗೌರವ ಅಭಿಮಾನಿಗಳು ಕೃತಕ ಮತ್ತು ಕೋರಿಕೆಯದು. ಎರಡನೆಯದಾಗಿ ಈ ಅಭಿಮಾನ ಪ್ರದರ್ಶನ, ಇತಿಹಾಸವನ್ನು ತಿರುಚುವ ಪ್ರಯತ್ನ. ಮೂರನೆಯದಾಗಿ ಈ ಖೋಟಾ ಅಭಿಮಾನ ರಾಜಕೀಯ



ಪ್ರೇರಿತ. ಸತ್ಯಸಂಗತಿ ಏನೆಂದರೆ ಕೇಸರಿ ಪರಿವಾರದ ಹಿಂದೂತ್ವವನ್ನು ಸರ್ದಾರ್ ಪಟೇಲರು ತಿರಸ್ಕರಿದ್ದರಲ್ಲದೆ ದೇಶದ ಉಪಪ್ರಧಾನಿಯಾಗಿ ಆರೆಸ್ಸೆಸ್ಸನ್ನು ನಿಷೇಧಿಸಿದ್ದರು. ಪಟೇಲರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದ ಗೃಹ ಖಾತೆ, 1948 ರ ಫೆಬ್ರವರಿ 4 ರಂದು- ಎಂದರೆ ಗಾಂಧೀಜಿಯ ಕೊಲೆ ಆದ ಐದನೇ ದಿನ ಹೊರಡಿಸಿದ ಆಜ್ಞೆ, ಈ ಕೆಳಕಂಡ ವಿಶ್ಲೇಷಣೆಯನ್ನೊಳಗೊಂಡಿದೆ:

"ದ್ವೇಷ ಮತ್ತು ಹಿಂಸೆಯನ್ನು ಬೆಂಬಲಿಸುವ ಶಕ್ತಿಗಳು ದೇಶದಲ್ಲಿ ಕೆಲಸ ಮಾಡುತ್ತಿದ್ದು ದೇಶದ ಸ್ವಾತಂತ್ರ್ಯಕ್ಕೆ ಅಪಾಯ ಒಡ್ಡಿ ದೇಶಕ್ಕೆ ಕಳಂಕ ಹಚ್ಚುವುದರಲ್ಲಿ ನಿರತವಾಗಿವೆ. ಇಂಥ ದುಷ್ಟಶಕ್ತಿಗಳನ್ನು ಹತ್ತಿಕ್ಕುವುದು ಭಾರತದ ಸರ್ಕಾರದ ನೀತಿಯಾಗಿದ್ದು ಅದರಂತೆ ಆರೆಸ್ಸೆಸ್ಸನ್ನು ಕಾನೂನುಬಾಹಿರ ಸಂಘಟನೆ ಎಂದು ಘೋಷಿಸಲು ಸರ್ಕಾರ ತೀರ್ಮಾನಿಸಿದೆ."

"ಈ ಸಂಘಟನೆಯ ಸದಸ್ಯರು ಆತಂಕಕಾರಿ ಮಾತ್ರವಲ್ಲದೆ ಅಪಾಯಕಾರಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸುಲಿಗೆ, ಡಕಾಯಿತಿ, ಬೆಂಕಿ ಹಚ್ಚುವ ಕೆಲಸ, ಕೊಲೆಗಳು ಮುಂತಾದ ಅಪರಾಧಗಳಲ್ಲಿ ತೊಡಗಿರುವುದಲ್ಲದೆ, ಮದ್ದು ಗುಂಡು, ಶಸ್ತ್ರಾಸ್ತ್ರಗಳನ್ನು ಅಕ್ರಮವಾಗಿ ಸಂಗ್ರಹಿಸುವ ಕೆಲಸದಲ್ಲೂ ತೊಡಗಿದ್ದಾರೆ. ಸರ್ಕಾರ, ಪೊಲೀಸ್ ಮತ್ತು ಸೈನ್ಯಗಳ ಬಗ್ಗೆ ಜನರಲ್ಲಿ ಅವಿಶ್ವಾಸ ಬೆಳೆಸುವ ಉದ್ದೇಶದಿಂದ ತಯಾರಿಸಿದ ಕರಪತ್ರಗಳನ್ನು ಹಂಚುತ್ತಿದ್ದಾರೆ."

ಉಪಪ್ರಧಾನಿಯಲ್ಲದೆ, ಗೃಹಮಂತ್ರಿಯೂ ಆಗಿದ್ದ ಸರ್ದಾರ್ ಪಟೇಲರು, ಆಗ್ಗೆ ಆರೆಸ್ಸೆಸ್‌ನ ಮುಖ್ಯಸ್ಥರಾಗಿದ್ದ ಗುರು ಗೋಳ್ವಲ್ಕರ್‌ಗೆ 1948 ರ ಸೆಪ್ಟೆಂಬರ್ 11 ರಂದು ರವಾನಿಸಿದ್ದ ಎಚ್ಚರಿಕೆ ಪತ್ರದಲ್ಲಿ ಒಂದು ಪ್ಯಾರಾ ಹೀಗಿದೆ: "ಹಿಂದೂಗಳನ್ನು ಸಂಘಟಿಸುವುದು ಮತ್ತು ಹಿತರಕ್ಷಣೆ ಮಾಡುವುದಕ್ಕೂ ಹಿಂದೂಗಳ ಕಷ್ಟಗಳಿಗಾಗಿ ಯಾರೋ ಅಮಾಯಕ ಮತ್ತು ನಿಸ್ಸಹಾಯಕ ಸ್ತ್ರೀ, ಪುರುಷ ಮತ್ತು ಮಕ್ಕಳ ಮೇಲೆ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸುವುದಕ್ಕೂ ಸಂಬಂಧವಿಲ್ಲ, ನಿಮ್ಮ ಸಂಸ್ಥೆಗೆ ಸೇರಿದವರು ಕಾಂಗ್ರೆಸ್ಸನ್ನು ವಿರೋಧಿಸುವಾಗ ವ್ಯಕ್ತಿತ್ವ, ಸಭ್ಯತೆ, ಸೌಜನ್ಯಗಳನ್ನು ಗಾಳಿಗೆ ತೂರಿ ವಿಷಕಾರುವ ಧಾಟಿಯಲ್ಲಿ ವರ್ತಿಸುತ್ತಿರುವುದರಿಂದ ಜನರಲ್ಲಿ ಪ್ರಕ್ಷುಬ್ಧತೆ ಹರಡುತ್ತಿದೆ. ನಿಮ್ಮವರ ಮಾತೃಭಾಷಣಗಳಲ್ಲಿ ಮತೀಯ ದ್ವೇಷ ತುಂಬಿದೆ. ರಕ್ಷಣೆಗಾಗಿ ಹಿಂದೂಗಳು ಸಂಘಟಿತರಾಗಬೇಕೆಂದು ಹೇಳುವಾಗ ಈ ವಿಷವನ್ನು ಹರಡುವ ಅಗತ್ಯವಿರಲಿಲ್ಲ, ಹೀಗೆ ಹರಡಿದ ವಿಷವೇ ಗಾಂಧೀಜಿಯವರನ್ನು ಬಲಿ ತೆಗೆದುಕೊಂಡಿತು.

ಆರೆಸ್ಸೆಸ್ಸಿನ ಬಗ್ಗೆ ಸರ್ಕಾರಕ್ಕಾಗಲಿ ಜನಸಾಮಾನ್ಯರಲ್ಲಾಗಲಿ ಅಳಿದುಳಿದಿದ್ದ ಕಿಂಚಿತ್ತು ವಿಶ್ವಾಸವೂ ಈಗ ಇಲ್ಲವಾಗಿದೆ ಯಷ್ಟೇ ಅಲ್ಲ; ವಿರೋಧ ಬೆಳೆದಿದೆ. ಗಾಂಧೀಜಿಯ ಕೊಲೆಯಾದ ಕೂಡಲೆ ಆರೆಸ್ಸೆಸ್ ಮಂದಿ ಸಿಹಿ ಹಂಚಿದ ಸುದ್ದಿ ಹರಡಿದ ನಂತರವಂತೂ ಈ ವಿರೋಧ ತೀಕ್ಷ್ಣವಾಗಿದೆ. ಈ ಬೆಳವಣಿಗೆಗಳಿಂದಾಗಿ ಸರ್ಕಾರ ಆರೆಸ್ಸೆಸ್ಸಿನ ಮೇಲೆ ಕ್ರಮ ಕೈಗೊಳ್ಳಲೇಬೇಕಾಯಿತು. ಕ್ರಮ ಕೈಗೊಂಡು ಈಗ್ಗೆ ಆರು ತಿಂಗಳಾಗಿದ್ದು, ಈ ಅವಧಿಯಲ್ಲಿ ಆರೆಸ್ಸೆಸ್ ಮಂದಿ ಆತ್ಮಾವಲೋಕನ ಮಾಡಿಕೊಂಡು ಸನ್ಮಾರ್ಗಕ್ಕೆ ಬರುವರೆಂದು ನಾವು ನಿರೀಕ್ಷಿಸಿದ್ದೆವು. ಆದರೆ ನನಗೆ ಬರುತ್ತಿರುವ ವರದಿಗಳ ಪ್ರಕಾರ, ಅದೇ ಹಳೆಯ ಕಾರ್ಯತಂತ್ರಗಳಿಗೆ ಹೊಸ ಜೀವ ತುಂಬುವ ಪ್ರಯತ್ನಗಳಾಗುತ್ತಿವೆ."

ಹಿಂದೂತ್ವವಾದಿಗಳ ಇಡೀ ಗುಂಪೇ ಗಾಂಧೀಜಿಯ ಕೊಲೆಗೆ ಕಾರಣ ಎಂಬ ಮಾತನ್ನು ಸರ್ದಾರ್ ಪಟೇಲರು ಪದೇಪದೇ ಒತ್ತಿ ಹೇಳುತ್ತಿದ್ದರು. ಪ್ರಧಾನಿ ಪಂಡಿತ್ ಜವಹರ್‌ಲಾಲ್ ನೆಹರೂರಿಗೆ 1948 ಫೆಬ್ರವರಿ 27 ರಂದು ಬರೆದ ಪತ್ರದಲ್ಲಿನ ಒಂದು ಭಾಗ ಹೀಗಿದೆ:

"ಸಾವರ್ಕರ್ ಎಂಬಾತನ ನೇತೃತ್ವದಲ್ಲಿ ಈ ಸಂಚನ್ನು (ಗಾಂಧೀಜಿಯ ಕೊಲೆ) ಹಿಂದೂ ಮಹಾಸಭಾದ ಮತಾಂಧರು ರೂಪಿಸಿ ಕಾರ್ಯಗತಗೊಳಿಸಿದರು. ಈ ಸಂಚಿನಲ್ಲಿ ಹತ್ತು ಜನ ತೀವ್ರವಾಗಿ ತೊಡಗಿಸಿಕೊಂಡಿದ್ದರೆ ನಿಸುತ್ತದೆ. ಅವರ (ಗಾಂಧೀಜಿಯ) ಮನೋಧರ್ಮ ಮತ್ತು ನೀತಿಗಳ ಬಗ್ಗೆ ತೀವ್ರ ವಿರೋಧವಿರಿಸಿಕೊಂಡಿದ್ದ ಎಲ್ಲಾ ಆರೆಸ್ಸೆಸ್ಸಿಗರೂ, ಹಿಂದೂ ಮಹಾಸಭಾದವರೂ ಅವರ ಕೊಲೆಯನ್ನು ಸ್ವಾಗತಿಸಿದ್ದು ಸ್ವಾಭಾವಿಕ."

ಆರೆಸ್ಸೆಸ್ಸಿನ ಸಿದ್ಧಾಂತ, ಧೋರಣೆಗಳನ್ನು ರೂಪಿಸುವಲ್ಲಿ ವಿ.ಡಿ. (ವಿನಾಯಕ ದಾಮೋದರ) ಸಾವರ್ಕರ್ ಪಾತ್ರ ಬಹಳ ದೊಡ್ಡದು. ಗಾಂಧೀ ಹತ್ಯೆ ಮೊಕದ್ದಮೆಯಲ್ಲಿ ಮಾತ್ರವಲ್ಲ, ಇನ್ನಿತರ ಕ್ರಿಮಿನಲ್ ಪ್ರಕರಣಗಳಲ್ಲೂ ಸಾವ... ಆರೋಪಿಯಾಗಿದ್ದು ಸಾಕ್ಷ್ಯಾಧಾರಗಳ ಕೊರತೆಯಿಂ... ಆರೋಪಮುಕ್ತರಾದರು. ಹಿಂದೂ ಮಹಾಸ... ಪ್ರಮುಖರಲ್ಲೊಬ್ಬರಾಗಿದ್ದ ಶ್ಯಾಮ ಪ್ರಸಾದ್ ಮುಖ... 1948 ರ ಜುಲೈ 18 ರಂದು ಬರೆದ ಪತ್ರದಲ್ಲಿ ಪಟೇ... ಹೀಗೆಂದಿದ್ದರು:

"ಗಾಂಧೀಜಿ ಕೊಲೆ ಮೊಕದ್ದಮೆ ಕೋರ್ಟಿನ ಮು... ಇರುವುದರಿಂದ ಆರೆಸ್ಸೆಸ್ ಮತ್ತು ಹಿಂದೂ ಮಹಾಸ... ಈ ಸಂಸ್ಥೆಗಳು ಕೊಲೆಯಲ್ಲಿ ಭಾಗಿಯಾಗಿರುವ ಬಗ್ಗೆ ನ... ಏನನ್ನೂ ಹೇಳುವಂತಿಲ್ಲವಾದರೂ, ನಮಗೆ ಬಂದಿ... ವರದಿಗಳ ಪ್ರಕಾರ ಇವೆರಡು ಸಂಘಟನೆ... ಕಾರ್ಯಕ್ರಮಗಳಿಂದಾಗಿ ಅಂಥ ಘೋರ ಘಟನೆ ನಡೆಯ... ಸಾಧ್ಯವಾಗುವಂಥ ವಾತಾವರಣ ದೇಶದಲ್ಲಿ ನಿರ್ಮಾ... ವಾಗಿತ್ತು. ಹಿಂದೂ ಮಹಾಸಭೆಯ ಒಂದು ತೀವ್ರ... ವರ್ಗ ಈ ಕೊಲೆಯ ಸಂಚಿನಲ್ಲಿ ಪಾತ್ರ ವಹಿಸಿತ್ತೆಂಬ... ನನಗೆ ಸಂಶಯವಿಲ್ಲ. ಆರೆಸ್ಸೆಸ್ಸಿನ ಚಟುವಟಿಕೆಗಳಿಂ... ದೇಶದ ಮತ್ತು ಸರ್ಕಾರದ ಭದ್ರತೆಗೆ ಅಪಾಯವಿರುವ... ಸ್ಪಷ್ಟ. ನಿಷೇಧಾಜ್ಞೆ ಜಾರಿಯಲ್ಲಿದ್ದಾಗ್ಯೂ ಆರೆಸ್ಸೆಸ್ ಮಂದಿ... ಚಟುವಟಿಕೆಗಳು ನಿಂತಿಲ್ಲವಷ್ಟೇ ಅಲ್ಲ; ದಿನೇ... ಆರೆಸ್ಸೆಸ್ಸಿನಲ್ಲಿಯ ತೀವ್ರವಾದಿ ಗುಂಪು ಹಠಮಾರಿತನ... ಬೆಳೆಸಿಕೊಳ್ಳುತ್ತಿರುವುದಲ್ಲದೆ, ರಹಸ್ಯ ವಿಧ್ವಂಸಕ ಕೃತ್ಯ... ತೊಡಗಿದೆ."


ಜನಸಾಮಾನ್ಯರಿಗೆ ಈ ಬಗ್ಗೆ ತಿಳಿಯದಿರಬಹು... ಹೊರತು, ಆರೆಸ್ಸೆಸ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂ... ವರಿಗಷ್ಟೇ ಅಲ್ಲ ಅದರೊಡನೆ ನಿಕಟ ಸಂಬಂಧ ಉಳ್ಳ... ಸಹ ಮೇಲ್ಕಂಡ ಸಂಗತಿಗಳು ಗೊತ್ತಿಲ್ಲದ ವಿಷಯಗ... ಅಂದಮೇಲೆ ಆರೆಸ್ಸೆಸ್ ಸ್ವಯಂಸೇವಕರಾದ ನರೇ... ಮೋದಿಗೆ ಇವೆಲ್ಲ ತಿಳಿದ ಸಂಗತಿಗಳೇ. ಆದ್ದರಿಂದ ಪಟೇ... ಬಗ್ಗೆ ಮೋದಿ ವ್ಯಕ್ತಪಡಿಸುತ್ತಿರುವ ಅಭಿಮಾ... ಪ್ರಾಮಾಣಿಕವಾದುದಲ್ಲವಷ್ಟೇ ಅಲ್ಲ; ಪಟೇಲರನ್ನು ... ಹಿಂದೂತ್ವವಾದಿ ಮತ್ತು ಆರೆಸ್ಸೆಸ್ ಅಭಿಮಾನಿ ಎ... ಬಿಂಬಿಸುವ ಪ್ರಯತ್ನವೂ ಹೌದು.

ಪ್ರೊ. ಕೆ.ಎಸ್. ಭಗವಾನ್ ಇತ್ತೀ... ಸಮಾರಂಭವೊಂದರಲ್ಲಿ ಹೇಳಿದಂತೆ ಸ್ವಾಮಿ ವಿವೇಕಾನಂ... ಹಿಂದೂ ಧರ್ಮದಲ್ಲಿನ ಹಲವು ಅಂಶಗಳನ್ನು ಖಂಡಿಸಿ... ಅಂಥ ವಿವೇಕಾನಂದರನ್ನು ಹಿಂದೂತ್ವದ ಒಬ್ಬ ಹರಿ... ಎಂಬಂತೆ ಕೇಸರಿ ಪರಿವಾರ ಬಿಂಬಿಸುತ್ತಿದೆ. ಇತಿಹಾಸ... ತಿರುಚುವುದು ಹಿಂದೂತ್ವವಾದಿಗಳ ಪ್ರಮುಖ ಕಾರ್ಯ... ಗಳಲ್ಲೊಂದು ಎಂಬುದು ಅವರನ್ನು ಗಮನಿಸುತ್ತಿರುವವ... ತಿಳಿದ ಸಂಗತಿ. ಅಡಾಲ್ಫ್ ಹಿಟ್ಲರನ ಮಂತ್ರಿ ... ನಿಕಟವರ್ತಿ ಗೊಬೆಲ್ಸ್ ಸುಳ್ಳಿನ ಕಂತೆಗಳನ್ನೇ ಸತ್ಯಸಂಗ... ಗಿಂತಲೂ ಪರಿಣಾಮಕಾರಿಯಾಗಿ ಪ್ರಚಾರ ಮಾಡುವು... ನಿಸ್ಸೀಮನಾಗಿದ್ದ. ಸುಳ್ಳುಗಳ ಸೃಷ್ಟಿಕರ್ತ ಎಂಬ... ಪರ್ಯಾಯ ಹೆಸರೇ ಗೋಬೆಲ್ಸ್. ಹಿಟ್ಲರ್, ಗೋ... ಇವರೆಲ್ಲ ಗತಿಸಿ ಏಳೆಂಟು ದಶಕಗಳಾಗಿವೆ. ಆದರೆ ಗೋ... ಆರೆಸ್ಸೆಸ್ಸಿಗರ ರೂಪದಲ್ಲಿ ಜೀವಂತ ಇದ್ದಾನೆ. ಆರೆ... ಹಿಂದೂ ಮಹಾಸಭಾಗಳನ್ನು ಕಠಿಣ ಶಬ್ದಗಳಿಂದ ಖಂ... ಮತ್ತು ವಿರೋಧಿಸಿದ್ದ ಸರ್ದಾರ್ ಪಟೇಲರನ್ನು ... ಹಾಡಿಹೊಗಳುತ್ತಿರುವ ನರೇಂದ್ರ ಮೋದಿಗೆ ಏನೆನ್ನಬೇ...

(ಲಕ್ನೋದಲ್ಲಿರುವ ಮೌಲಾನ ಆಜ... ಮೆಮೋರಿಯಲ್ ಅಕಾಡೆಮಿ ಪ್ರಕಟಿಸುತ್ತಿರುವ, ಆಜ... ಅಕಾಡೆಮಿ ಜರ್ನಲ್ ಎಂಬ ಮಾಸಪತ್ರಿಕೆಯಲ್ಲಿ ಪ್ರಕಟ... ದೆಹಲಿ ವಿ.ವಿ. ನಿಲಯದ ರಾಜ್ಯಶಾಸ್ತ್ರ ಅಧ್ಯಾಪಕ ಶಂ... ಇಸ್ಲಾಮ್ ಮತ್ತು ಪತ್ರಕರ್ತ ಮುಕುಲ್ ದುಬೆ... ಲೇಖನದಿಂದ ಸಂಗ್ರಹಿಸಿದ ಮಾಹಿತಿಗಳ... ಉಲ್ಲೇಖಗಳನ್ನೂ ಈ ಲೇಖನದಲ್ಲಿ ಬಳಸಲಾಗಿದೆ.)

■ ಪಿ.ಎಸ್. ಶ್ರೀಧರಮೂ...

...ಡ್ ರೋಡ್ ...ಬ ಆಸ್ಕರ್?!



...ವ ಪ್ರಶಸ್ತಿಯೂ ಸಿನಿಮಾದ ಯೋಗ್ಯತೆಯನ್ನು
...ಸುವುದಿಲ್ಲ. ಆ ಪ್ರಶಸ್ತಿ ಆಸ್ಕರ್ ಆಗಿದ್ದರೂ

... ಮೊದಲು ಹೇಳಿಕೊಂಡೇ ಈ ವಿಚಾರವನ್ನು
...ದ್ದೇನೆ. ಪ್ರಶಸ್ತಿ ಸಿನಿಮಾದ ಗುಣಮಟ್ಟವನ್ನು
...ುವುದಿಲ್ಲ. ಹಾಗೆಂದು ಪ್ರಶಸ್ತಿ ಬಾರದಿರುವುದೆಲ್ಲ
...ಾಗಳೂ ಅಲ್ಲ.

... ಸಿನಿಮಾ ಕ್ಷೇತ್ರದ ಅತೀ ದೊಡ್ಡ ಪ್ರಶಸ್ತಿ
...ಆಸ್ಕರ್ ಪ್ರಶಸ್ತಿಯ ಅತ್ಯುತ್ತಮ ವಿದೇಶಿ
...ಚಿತ್ರ ಪ್ರಶಸ್ತಿಗಾಗಿ ಬೇರೆ ಬೇರೆ ದೇಶಗಳಿಂದ
... ಚಿತ್ರವನ್ನು ಆಯ್ಕೆ ಮಾಡಿ ಕಳಿಸುವುದು
...ಬಹುತೇಕ 1957 ರಿಂದ
...ಇಂಡಿಯ' ಚಿತ್ರದ ಮೂಲಕ
... ಭಾರತದಿಂದಲೂ ಒಂದು
...ವಾಗಿ ಹೋಗುತ್ತಿದೆ. ಇಲ್ಲಿಯತನಕ
...ಐವತ್ತಕ್ಕೂ ಹೆಚ್ಚು ಚಿತ್ರಗಳು ಆಸ್ಕರ್
...ಹೋಗಿವೆಯಾದರೂ ಇನ್ನೂ ಯಾವುದೇ
... ಪ್ರಶಸ್ತಿಯನ್ನು ಗೆದ್ದಿಲ್ಲ. ಅಂತಿಮ ಐದು
...ಪಟ್ಟಿನಲ್ಲಿ ನಾಮಿನಿಯಾಗಿ ಆಯ್ಕೆ ಆಗಿದ್ದು 'ಮದರ್
...'ಸಲಾಂ ಬಾಂಬೆ' ಹಾಗೂ 'ಲಗಾನ್' ಚಿತ್ರಗಳು

...ಬಾರಿ ಭಾರತದ ಸ್ಪರ್ಧಿಯಾಗಿ ಅಂತಿಮ ಸುತ್ತಿನಲ್ಲಿ
...ಬಾಕ್ಸ್', 'ಭಾಗ್ ಮಿಲ್ಖಾ ಭಾಗ್', 'ಇಂಗ್ಲಿಷ್
... 'ವಿಶ್ವರೂಪಂ' ಹಾಗೂ ಮಲಯಾಳಂನ
...ಮ್ಸ್' ಚಿತ್ರಗಳನ್ನು ಹಿಂದಿಕ್ಕಿ 'ದಿ ಗುಡ್ ರೋಡ್'
...ಗುಜರಾತಿ ಭಾಷೆಯ ಸಿನಿಮಾ ಆಯ್ಕೆಯಾಯಿತು.
...ಲಂಚ್ ಬಾಕ್ಸ್' ಚಿತ್ರದ ನಿರ್ದೇಶಕ ರಿತೇಶ್
...ಆಸ್ಕರ್ ಪ್ರಶಸ್ತಿಗಾಗಿ ತಮ್ಮ ಚಿತ್ರವೇ ಆಯ್ಕೆ
...ತ್ತು ಎಂದು ವಾದಿಸುವ ಮೂಲಕ ವಿವಾದವನ್ನು
...ಕಿದರು.


...ಗುಡ್ ರೋಡ್' ಚಿತ್ರವನ್ನು ಬರೆದು
...ರುವವರು ಜ್ಞಾನ್ ಕೊರಿಯ. ಇದು ಇವರು
...ರುವ ಮೊದಲನೆಯ ಸಿನಿಮಾ. ಜಾಹೀರಾತು
... ಸಾಕಷ್ಟು ಪರಿಶ್ರಮ ಹೊಂದಿರುವ ಜ್ಞಾನ್
...'ದಿ ಗುಡ್ ರೋಡ್' ಸಿನಿಮಾದಲ್ಲಿ ರಸ್ತೆಯ
...ಟ್ರಕ್ ಚಾಲಕ, ಕಳೆದುಹೋಗುವ ಒಬ್ಬ ಬಾಲಕ,
...ಹುಡುಕುತ್ತ ಹೊರಟ ಒಂದು ಹುಡುಗಿ ಇಷ್ಟು
...ಪಾತ್ರಗಳ ಮೂಲಕ ಕತೆ ಕಟ್ಟಿಕೊಡುತ್ತಾರೆ. ಕತೆಗಿಂತ
...ಬದುಕು ತೆರೆದುಕೊಳ್ಳುತ್ತದೆ. ಸಹಜತೆಯ
...ನ್ನವಂಥ ಟ್ರಕ್ ಚಾಲಕನ ಪಾತ್ರ ಗಮನ
...ಥಾದ್ದು. ವಿಶೇಷವೆಂದರೆ ಆ ಪಾತ್ರಧಾರಿಗೆ
...ನ ಬಗ್ಗೆ ಇರಲಿ, ಸಿನಿಮಾ ಎಂದರೇನು ಅಂತ
...ಗೊತ್ತಿಲ್ಲವಂತೆ. ಅಂಥ ವ್ಯಕ್ತಿಯಿಂದ ಪಾತ್ರಕ್ಕೆ ಜೀವ
...ಸಾಧನೆಯೂ ಹೌದು. ಬಹುತೇಕ ನಿರ್ದೇಶಕರು
...ಕಲಾವಿದರು ಹಾಗೂ ತಂತ್ರಜ್ಞರ ಆಯ್ಕೆಯಲ್ಲಿ
...ಚಿತ್ರವನ್ನು ಆಸ್ಕರ್ ಪ್ರಶಸ್ತಿಯ ಎತ್ತರಕ್ಕೆ ಏರಿಸಿದ್ದು
...ಡಿಸೈನರ್ ರಸೂಲ್ ಪೂಕುಟ್ಟಿ. ಇದು ನೀವು
... ಹೆಸರೇ. ಸಾಕಷ್ಟು ಆಸ್ಕರ್ ಪ್ರಶಸ್ತಿಗಳನ್ನು
...ದ 'ಸ್ಲಂಡಾಗ್ ಮಿಲಿಯನೇರ್' ಚಿತ್ರಕ್ಕಾಗಿ
... ಸೌಂಡ್ ಮಿಕ್ಸಿಂಗ್‌ಗಾಗಿ ಸ್ವತಃ ಆಸ್ಕರ್ ಪ್ರಶಸ್ತಿ
...ಸೂಲ್ ಪೂಕುಟ್ಟಿ ಈ ಚಿತ್ರದ ಜೀವಾಳ ಎಂದರೆ
... ಚಿತ್ರದಲ್ಲಿ ಹಿನ್ನೆಲೆ ಸಂಗೀತ ಅಂತೇನಾದರೂ
...ಷ್ಟೊಂದಿಷ್ಟು ಇಷ್ಟೊಂದಿಷ್ಟು ಜಾನಪದ ಹಿನ್ನೆಲೆಯ
... ಅಕ್ಷರ ಹೊರತಾಗಿ ಸಂಪೂರ್ಣ ಚಿತ್ರವನ್ನು
...ಟ್ಟಿ ರಸೂಲ್ ಅವರ ಅತ್ಯದ್ಭುತ ಶಬ್ದಗ್ರಹಣ.

... ಈ ಚಿತ್ರಕ್ಕಿಂತ ತನ್ನ ಚಿತ್ರ ಉತ್ತಮ
...ಗಬಹುದಾಗಿತ್ತು ಎಂದ ರಿತೇಶ್ ಭಾತ್ರಾರ
...ಬಾಕ್ಸ್' ಬಗ್ಗೆ ಹೇಳುವುದಾದರೆ ಒಂದು ಚಿತ್ರವಾಗಿ
...ನೋಡಿದಾಗ ಖಂಡಿತ ಇದು ಒಳ್ಳೆಯ ಚಿತ್ರ.
...ವೊಂದು ಚಿತ್ರಗಳನ್ನು ಒಂದೊಂದು ಸ್ತರದಲ್ಲಿ
...ಕಾಗುತ್ತದೆ. 'ಲಂಚ್ ಬಾಕ್ಸ್' ಮುಂಬೈನ
...ಗಳು ಮನೆಯಿಂದ ಕಚೇರಿ ಅಥವಾ ಬೇರೆಡೆ
...ದುಡಿವವರಿಗೆ ತಲುಪಿಸುವ ಒಂದು ಬುತ್ತಿಯ
...ಸಿಬ್ಬಂದಿ ತನ್ನ ಗಂಡನಿಗೆ ಕಳಿಸಿದ ಲಂಚ್
... [illegible] ... ಚಿತ್ರನೋಡದರೆ
... ಬೇರೊಬ್ಬನಿಗೆ ತಲುಪುವ ಊಟದ
... ಅದೇ ವ್ಯಕ್ತಿಗೆ ಹೋಗುತ್ತದೆ. ಊಟದ

ಬುತ್ತಿಯೊಳಗೆ ಅದಲುಬದಲಾಗುವ ಪತ್ರಗಳು ಎರಡು ಪಾತ್ರಗಳನ್ನು ವಿವರಿಸುತ್ತ ಹೋಗುತ್ತವೆ. ಚಿತ್ರಕತೆ, ಕಲಾವಿದರ ಅಭಿನಯ, ಸಣ್ಣ ಸಣ್ಣ ಅಂಶಗಳೆಡೆಗಿನ ನಿರ್ದೇಶಕರ ಗಮನ ಹಾಗೂ ಜಾಣ್ಮೆ ಎಲ್ಲವೂ ಇಲ್ಲಿ ಉತ್ತಮವೇ.

ಸಿನಿಮಾ ಮಾಧ್ಯಮದ ಸಾಧ್ಯತೆ ಅಪರಿಮಿತವಾದದ್ದು. ಹಾಗಾಗಿಯೇ ಒಬ್ಬ ಫಿಲಂ ಮೇಕರ್‌ನ ಜವಾಬ್ದಾರಿಯೂ ದೊಡ್ಡದಿರುತ್ತದೆ. ಪಾತ್ರಗಳು, ಪಾತ್ರಗಳ ಬದುಕಿನ ಘಟನೆಗಳೇ ಸಿನಿಮಾ ಆಗಬಾರದು. ಆ ಪಾತ್ರಗಳು ಏನನ್ನು ಸಂಕೇತಿಸುತ್ತವೆ? ಸನ್ನಿವೇಶಗಳು ಏನನ್ನು ಪ್ರತಿಬಿಂಬಿಸುತ್ತವೆ? ಕತೆಯ ಹಿನ್ನೆಲೆ ಏನು? ಎನ್ನುವುದು ಸಿನಿಮಾದ ಅಸಲಿ ಶಕ್ತಿಯಾಗುತ್ತದೆ. ಸರಳವಾಗಿ ಉದಾಹರಿಸಬೇಕೆಂದರೆ 'ಚಿಲ್ಡ್ರನ್ಸ್ ಆಫ್ ಹೆವನ್' ಅನ್ನುವ ಒಂದು ಇರಾನಿಯನ್ ಸಿನಿಮಾ. ಮಜೀದ್ ಮಜಿದಿ ಎನ್ನುವ ನಿರ್ದೇಶಕ ಒಂದು ಜೊತೆ ಹರಿದ ಶೂ ಹಾಗೂ ಇಬ್ಬರು ಮಕ್ಕಳನ್ನು ಇಟ್ಟುಕೊಂಡು ಒಂದು ಕತೆ ಹೇಳುತ್ತಾನೆ. ಮೇಲ್ನೋಟಕ್ಕೆ ಅದೊಂದು ಬಡಕುಟುಂಬದ ಕತೆ. ಆದರೆ ಇದರ ಹಿಂದೊಂದು ಅಗಾಧವಾದ ಹಿನ್ನೆಲೆ ಇರುತ್ತದೆ. ಆಪ್ತವೆನಿಸುವ ಮಕ್ಕಳ ಕತೆಯ ಮೂಲಕ ನಿರ್ದೇಶಕ ಇಡೀ ದೇಶದ ಆರ್ಥಿಕ ಪರಿಸ್ಥಿತಿ, ನಿರುದ್ಯೋಗ, ಜನಗಳ ಲಾಲಸೆ, ಒಳ್ಳೆಯತನ, ಸ್ವಾರ್ಥ, ಸೋಲು, ಗೆಲುವು- ಎಷ್ಟೊಂದು ವಿಷಯಗಳನ್ನು ಹೇಳುತ್ತಾನೆ. ಅಂದರೆ ಒಬ್ಬ ಸಮರ್ಥ ನಿರ್ದೇಶಕ ತಾನು ತೆರೆಯ ಮೇಲೆ ಏನು ತೋರಿಸಿರುವುದಿಲ್ಲವೋ ಅದನ್ನು ಹೇಳಿರುತ್ತಾನೆ. ಓರ್ವ ಸಮರ್ಥ ನಿರ್ದೇಶಕ ಮೇಲ್ನೋಟಕ್ಕೆ ಒಂದು ಕತೆಯನ್ನು ಹೇಳುತ್ತಲೇ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ಮತ್ತೊಂದು ವಿಷಯವನ್ನು ಮನಸ್ಸಿಗೆ ನೇರವಾಗಿ ತಲುಪಿಸಿರುತ್ತಾನೆ.

ಕನ್ನಡದಲ್ಲಿಯೂ 'ತಬರನ ಕತೆ'ಯಂಥ ಚಿತ್ರಗಳಲ್ಲಿ ಈ ಅಂಶಗಳನ್ನು ಗಮನಿಸಬಹುದು. ಅದೂ ಬೇಡ, 'ಸನಾದಿ ಅಪ್ಪಣ್ಣ' ಎನ್ನುವ ಜನಪ್ರಿಯ ಚಿತ್ರದಲ್ಲೂ ಈ



ಜವಾಬ್ದಾರಿಯಿದೆ. ಒಂದು ಪ್ರೀತಿ, ಅಪ್ಪ ಮಗನ ಕತೆ ಹೇಳುತ್ತಲೇ ಹಿನ್ನೆಲೆಯಲ್ಲಿ ಒಂದು ಜನಾಂಗದ ಕತೆ, ನಾಶವಾಗುತ್ತಿರುವ ಶಹನಾಯ್ ಸಂಸ್ಕೃತಿಯನ್ನು ಹೇಳುತ್ತಾರೆ.

ಸಿನಿಮಾ ಅಂದರೆ ಅದಕ್ಕೊಂದು [illegible]. ಅದಕ್ಕೊಂದು ವ್ಯಾಕರಣ ಇರುತ್ತದೆ. [illegible] ಬಂದಾಗ ಇವನ್ನು ಗಮನ[illegible] [illegible] ಎನ್ನುವುದಕ್ಕಿಂತ ಹೇಗೆ [illegible] ಎನ್ನುವುದೂ ಮುಖ್ಯವಾಗುತ್ತದೆ. ಹಾಗೆಯೇ ಒಂದು [illegible] ಕೂಡ- ಹಾಕಬಾರದ ಜಾಗದಲಿ ಚಿನ್ನ ಹಾಕಿದರೂ ಅದು ಕಸಕ್ಕೆ ಸಮವಾಗಿ ಬಿಡುತ್ತದೆ, ಅದೇ ಹಾಕಬೇಕಾದ ಜಾಗದಲ್ಲಿ ಹಾಕಿದರೆ ಕಸಕ್ಕೂ ಚಿನ್ನದ ಮೌಲ್ಯ ಬಂದು ಬಿಡುತ್ತದೆ.

ಇಷ್ಟೆಲ್ಲ ಅಂಶಗಳನ್ನು ಯಾಕೆ ಹೇಳಬೇಕಾಯಿತೆಂದರೆ 'ಲಂಚ್ ಬಾಕ್ಸ್' ಹಾಗೂ 'ದಿ ಗುಡ್ ರೋಡ್' ಚಿತ್ರಗಳೆರಡನ್ನೂ ಈಗ ಈ ಸಾಮ್ಯತೆಗಳಿಂದ ಗಮನಿಸಿದರೆ ಯಾಕೆ 'ದಿ ಗುಡ್ ರೋಡ್' ಆಯ್ಕೆ ಆಯಿತೆನ್ನುವುದು ಅರ್ಥವಾಗುತ್ತದೆ. ಒಂದು ಕಥಾವಸ್ತುವನ್ನು ಎಷ್ಟು ಪರಿಣಾಮಕಾರಿಯಾಗಿ ಹೇಳಲಾಗಿದೆ, ಸಿನಿಮಾ ಭಾಷೆ ಎಷ್ಟು ಶುದ್ಧವಾಗಿ ಬಳಕೆಯಾಗಿದೆ ಎನ್ನುವುದು ಮುಖ್ಯವಾಗುತ್ತದೆ. ಬಹುತೇಕರು ಫ್ರೇಮ್ ಅಂದರೆ ಬ್ಯೂಟಿ ಅಂದುಕೊಂಡಿರುತ್ತಾರೆ, ಆದರೆ ಫ್ರೇಮ್ ಅಂದರೆ ಸೆನ್ಸ್ ಅಂದುಕೊಂಡಿರುವುದಿಲ್ಲ. ಟೆಕ್ನಿಕಲ್ ಟ್ರೀಟ್‌ಮೆಂಟ್ ಬಗ್ಗೆ ತಲೆಕೆಡಿಸಿಕೊಂಡಷ್ಟು ಸೈಕೋಲಾಜಿಕಲ್ ಟ್ರೀಟ್‌ಮೆಂಟ್ ಬಗ್ಗೆ ಯೋಚಿಸುವುದೇ ಇಲ್ಲ. ಇಂಥ ಅಂಶಗಳಲ್ಲೇ 'ದಿ ಗುಡ್ ರೋಡ್' ಚಿತ್ರ 'ಲಂಚ್ ಬಾಕ್ಸ್'ಗಿಂತ ಮೇಲೆ ನಿಲ್ಲುತ್ತದೆ.

ಹಾಗಾದರೆ 'ದಿ ಗುಡ್ ರೋಡ್'ನ ಹೆಚ್ಚುಗಾರಿಕೆಯೇನು? ಮೇಲೆ ಹೇಳಿದಂತೆ ಒಂದು ಜವಾಬ್ದಾರಿಯುತ ಸಿನಿಮಾದ ಬಹುತೇಕ ಮೌಲ್ಯಗಳು ಈ ಚಿತ್ರದಲ್ಲಿ ಕಾಣಸಿಗುತ್ತವೆ. ಕ್ಯಾಮರಾ ಬಳಕೆಯಿಂದ ಹಿಡಿದು, ಶಬ್ದಗ್ರಹಣ, ಸಂಕಲನದವರೆಗೆ ಎಲ್ಲವೂ ಬಹುತೇಕ ವ್ಯಾಕರಣಬದ್ಧವಾಗಿವೆ. ಹಾಗೆಯೆ ಕತೆಯೊಂದನ್ನು ಕ್ಯಾಮರಾ ಭಾಷೆಯಲ್ಲಿ ಅರ್ಥಪೂರ್ಣವಾಗಿ, ಸಾಂಕೇತಿಕವಾಗಿ ಹೇಳುವುದರಲ್ಲಿ ಇದರ ನಿರ್ದೇಶಕರು ಸಾಕಷ್ಟು ಯಶಸ್ವಿಯಾಗಿದ್ದಾರೆ. ಯಾವುದೇ ಅತಿರೇಕಗಳಿಲ್ಲದೆ ಸಂಯಮದ ಚೌಕಟ್ಟಿನಲ್ಲಿ ಹದವಾಗಿ ಅರ್ಥಗರ್ಭಿತವಾಗಿ ಒಂದು ಕತೆಯನ್ನು ಹೇಳಿದ್ದೇ ಇಲ್ಲಿನ ಹೆಚ್ಚುಗಾರಿಕೆ. ರಸ್ತೆಯ ಒಂದು ಪ್ರಯಾಣ ನಾಲ್ಕಾರು ಪಾತ್ರಗಳ ಮೂಲಕ ಇಡೀ ಬದುಕಿನ ತತ್ವ ಹಾಗೂ ಸತ್ಯಗಳನ್ನು ಹೇಳುವ ಪ್ರಯಾಣವಾಗಿ ಹೇಗೆ ಸಾಗುತ್ತದೆ ಮತ್ತು ಕಣ್ಣಿಗೆ ಕಾಣದ ಆ ಕತೆಯ ಓಟ ಹೇಗೆ ನಮ್ಮ ಮನಸ್ಸಿನೊಳಗೆ ಚಲಿಸಿ ಬಂದುಬಿಡುತ್ತದೆ ಎನ್ನುವುದೇ 'ದಿ ಗುಡ್ ರೋಡ್' ಸಿನಿಮಾದ ಶಕ್ತಿ ಹಾಗೂ ಸಾಧ್ಯತೆ.

ಹಾಗಾಗಿ ಆಯ್ಕೆ ಸಮಿತಿ ಸರಿಯಾದ ನಿರ್ಧಾರವನ್ನೇ ಕೈಗೊಂಡಿದೆ ಎನ್ನಬಹುದು. ಇಷ್ಟು ವರ್ಷಗಳ ಆಸ್ಕರ್ ಗೆದ್ದ ಚಿತ್ರಗಳು ಹಾಗೂ ಭಾರತದಿಂದ ಅಲ್ಲಿಗೆ ಹೋಗಿರುವ ಚಿತ್ರಗಳಿಗೆ ಹೋಲಿಸಿದರೆ 'ದಿ ಗುಡ್ ರೋಡ್' ಆಸ್ಕರ್ ಗೆಲ್ಲುವ ಹೆಚ್ಚು ಅರ್ಹತೆ ಹೊಂದಿದೆ ಎನಿಸುತ್ತದೆ. ನಮ್ಮ ದೇಶಕ್ಕೆ ಆಸ್ಕರ್ ಗೆಲ್ಲಿಸಿಕೊಟ್ಟ ಮೊದಲ ಚಿತ್ರವಾಗಬಹುದೆನ್ನುವ ನಂಬಿಕೆಯಂತೂ ಇದೆ. ಹಾಗಾಗಲಿ ಎಂದು ನಾವೂ ಹಾರೈಸೋಣ.

■ ಚಂದ್ರ ಬಾರ್ಕೂರ್



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ರಾಕ್ಷಸ: ವಿಕೃತ ಪರಿಕಲ್ಪನೆ ಮತ್ತು ಸಾಂಸ್ಕೃತಿಕ ಪ್ರತಿಪಾದ

ಪ್ರಚಲಿತ ಪರಿಕಲ್ಪನೆ

"ಮಾನವನಾಗುವೆಯಾ ಇಲ್ಲಾ ದಾನವನಾಗುವೆಯಾ?" ಜನಪ್ರಿಯ ಕನ್ನಡ ಚಿತ್ರಗೀತೆಯ ಈ ಸಾಲನ್ನು ಗಮನಿಸಿ. ಮಾನವನಿಗೆ ದಾನವನು ವಿರುದ್ಧನಾದವನು ಎಂದು ಧ್ವನಿಸುತ್ತದೆ. ಇದು ವ್ಯಾಪಕವಾಗಿ ಪ್ರಚಲಿತವಿರುವ ಪರಿಕಲ್ಪನೆಯೇ ಆಗಿದೆ. ದೇವತೆಗಳೆಂದರೆ ಪೊರೆಯುವವರು, ಶಿಷ್ಟರನ್ನು ಕಾಪಾಡುವವರು, ಬೇಡಿದ್ದನ್ನು ಕೊಡುವವರಾದರೆ; ದಾನವರು (ರಕ್ಕಸರು, ರಾಕ್ಷಸರು, ಅಸುರರು, ದೈತ್ಯರು - ಇವರನ್ನೆಲ್ಲಾ ಒಂದೇ ಗುಂಪಿಗೆ ಸೇರಿಸಲಾಗಿದೆ) ದುಷ್ಟರು, ತೊಂದರೆ ಕೊಡುವವರು, ಸ್ವಾಭಾವಿಕವಾದ ಹಿಂಸಾತ್ಮಕ ಮನೋಭಾವ ಉಳ್ಳವರು, ವಿವೇಚನೆಯಿಲ್ಲದ ಕ್ರೂರಿಗಳು, ಅದರಲ್ಲೂ ಒಳ್ಳೆಯವರಿಗೆ ಹಿಂಸೆ ಕೊಟ್ಟು ಕೊಂದು ತಿನ್ನುವವರು ಎಂಬುದು ಶತಸಿದ್ಧ.

ಇನ್ನು ಆಕೃತಿಯಲ್ಲಿ ನೋಡಲು, ದೇವತೆಗಳೆಂದರೆ ನಸುನಗುತ್ತಿರುವ ಮುಖಗಳು, ಸಾಧಾರಣವಾಗಿ ಬಿಳಿಯರು, ಸುಂದರರು, ಗಂಡಸರಾದರೆ ಮೀಸೆಗಳಿಲ್ಲದವರು, ಕಿರೀಟಾದಿಯಾಗಿ ವಿವಿಧ ಆಭರಣಗಳೊಂದಿಗೆ ಕಂಗೊಳಿಸುತ್ತಿರುವವರು, ಅಭಯ (ಹೆದರದಿರಿ ನಾವಿದ್ದೇವೆ) ಮುದ್ರೆ, ವರದ (ಬೇಕಾದ್ದನ್ನು ಕೊಡುವೆವು) ಮುದ್ರೆಗಳನ್ನು ಕರಗಳಲ್ಲಿ ಹೊಂದಿರುವವರು, ಕೈಗಳಲ್ಲಿ ಆಯುಧಗಳಿದ್ದು ಅದು ಅವರ ಭಕ್ತರನ್ನು ಮತ್ತು ಶಿಷ್ಟರನ್ನು ರಾಕ್ಷಸರಿಂದ ರಕ್ಷಿಸಲು ಹೊಂದಿರುವಂತವರು.


ಇನ್ನು ಈ ದಾನವರು, ಕೆಂಪಾದ ಕಣ್ಣುಗಳು, ಉರುಟು ಮತ್ತು ಒರಟು ಮುಖಗಳು, ಸಾಧಾರಣವಾಗಿ ಕರಿಯರು, ಗಂಡಸರಾದರೆ ಕಡ್ಡಾಯವಾಗಿ ಗಿರಿಜಾ ಮೀಸೆಯನ್ನು ಹೊಂದಿರುವವರು. ಬಾಯಿಂದ ಹೊರಬಂದಿರುವ ಕೋರೆ ಮತ್ತು ದಾಡೆಗಳು, ತಲೆಯ ಮೇಲೆ ಕೊಂಬುಗಳು, ಕೈಗಳಲ್ಲಿ ಬಹುದೊಡ್ಡ ಆಯುಧಗಳು; ಅವು ಶಿಷ್ಟರನ್ನು, ಸಾತ್ವಿಕರನ್ನು ಹಿಂಸಿಸಲು ಎಂದೇ ಹಿಡಿದಿರುವ ಹಿಂಸೆಯಲ್ಲಿ ಆನಂದವನ್ನು ಕಾಣುವಂತಹ ಸ್ಯಾಡಿಸ್ಟ್‌ಗಳು. ಅಬ್‌ನಾರ್ಮಲ್ ಸೈಜ್‌ನಲ್ಲಿ ಬೆಳೆದಿರುವ ದೈತ್ಯರು, ವಿಕಾರವಾಗಿ ಅರಚುತ್ತಾ ಕೂಗುತ್ತಾ ಲೋಕ ಕಲ್ಯಾಣಗಳಿಗಾಗಿ ಮಾಡುವಂತಹ ಯಾಗ, ಹೋಮ ಇತ್ಯಾದಿ ಒಳ್ಳೆ ಕೆಲಸಗಳಾಗುವ ಕಡೆಗಳಲ್ಲೆಲ್ಲ ಬಂದು, ಅವುಗಳನ್ನೆಲ್ಲಾ ಹಾಳು ಮಾಡಿ, ಆಗುತ್ತಿದ್ದಂತಹ ಲೋಕ ಕಲ್ಯಾಣಕ್ಕೆ ತೊಡಕಾಗುವವರು.

ಸಾತ್ವಿಕ ದೇವತೆಗಳು ಮತ್ತು ತಾಮಸಿಕ ರಾಕ್ಷಸರು

ಸಾಮಾನ್ಯ ಜನರಿಗೆ ಒಳ್ಳೆಯದು ಮತ್ತು ಕೆಟ್ಟದು, ಹಿತ ಮತ್ತು ಅಹಿತ, ಅನುಕೂಲ ಮತ್ತು ಅನಾನುಕೂಲ ಎಂಬ ವ್ಯತ್ಯಾಸ ಬಹಳ ಗಾಢವಾಗಿಯೂ ಮತ್ತು ಗಂಭೀರವಾಗಿಯೂ ಇದೆ. ಇದೇ ರಾಕ್ಷಸರನ್ನು ಮತ್ತು ದೇವತೆಗಳನ್ನು ಪ್ರತ್ಯೇಕವಾಗಿರಿಸಿ ನೋಡಲು ಬಹು ಸುಲಭವಾಗಿ ಸಾಧ್ಯವಾಗಿರುವುದು. ಯಾವುದೇ ಶ್ರೀಸಾಮಾನ್ಯ ವರದ ಅಭಯಗಳ ದೇವತೆಗಳನ್ನು ಒಲೈಸುವನೇ ಹೊರತು, ಕ್ರೂರ ಅಸುರರನ್ನು ಏಕೆ ಗೌರವಿಸಿಯಾನು? ಆದರೂ, ಆರ್ಯರ ದೇವತಾ ಪರಿಕಲ್ಪನೆಯ ಪ್ರಚಾರಕ ಪುರಾಣಿಕರಿಗೆ ಈ ರಾಕ್ಷಸರು ಬೇಕೇ ಬೇಕು. ಅವರು ಪ್ರಚಂಡವಾದ ದೈತ್ಯಶಕ್ತಿಯುಳ್ಳವರಾಗಿರಲೇ ಬೇಕು. ಅವರಿಲ್ಲದೇ ಹೋದರೆ, ಈ ದೇವತೆಗಳು ತಮ್ಮ ಶಕ್ತಿ ಪ್ರದರ್ಶನ ಮಾಡುವುದಾದರೂ ಯಾರ ಮೇಲೆ? ಯಾರನ್ನು ಕೆಳಗೆ ಹಾಕಿ ಶೂಲದಿಂದ ಚುಚ್ಚಿ ಎದೆಯನ್ನು ಮೆಟ್ಟುವುದು? ಸಾಮಾನ್ಯ ಸಿನಿಮಾಗಳಲ್ಲೂ ತನ್ನ ಪರಾಕ್ರಮವನ್ನು ಮೆರೆಯಲು ಹೀರೋಗೊಬ್ಬ ವಿಲನ್ ಬೇಕೇಬೇಕು. ಈಗಿನ ಮಸಾಲೆ ಸಿನಿಮಾಗಳ ಸಿದ್ಧ ಸೂತ್ರಗಳಲ್ಲಿ ನನಗೆ ಆಗಿನ ಆರ್ಯ ವೈದಿಕತೆಯನ್ನು ಪ್ರತಿಪಾದನೆ ಮಾಡುವವರ ಮನಃಸ್ಥಿತಿಯೇ ಕಾಣುತ್ತದೆ. ಹಾಗಾಗಿಯೇ ಉದ್ದೇಶಪೂರ್ವಕವಾಗಿ ಸಕಲ ದುಷ್ಟ ಗುಣಗಳನ್ನಿಟ್ಟು ಒಬ್ಬ ವಿಲನ್‌ನ ಸೃಷ್ಟಿ ಮಾಡುವುದು, ಜನಪ್ರಿಯವಾದ ಹಬ್ಬಗಳನ್ನು ಮತ್ತು ದೇವರುಗಳನ್ನು ಹೀರೋ ಇಂಟ್ರೊಡಕ್ಷನ್ ಸಾಂಗ್‌ಗಳಲ್ಲಿ ಬಳಸುವುದು, ಹೆಣ್ಣೊಂದು ಭೋಗದ ವಸ್ತುವೆಂದು ಪರಿಗಣಿಸುವಂತಹ ...ಂ ಸಾಂಗ್ ಮಾಡುವುದು, ಹೀರೋ ಎಷ್ಟೇ ಕ್ರೌರ್ಯ ಮೆ...ರೂ ಅವನು ಮೆಚ್ಚುಗೆಗೆ ಪಾತ್ರನು, ಖಳನಾಯಕನು ಎಷ್ಟೆ ದಾರುಣವಾಗಿ ಸತ್ತರೂ, ಅವನಿಗೆ ಮರುಕ ಪಡುವ ಹಾಗಿಲ್ಲ ಅವನು ಅದಕ್ಕೆ ಯೋಗ್ಯನು! ಪೌರಾಣಿಕ ಕಥೆಗಳನ್ನು ಅತಿ ವೈಭವದಿಂದ ಮೆರೆಸುವ ಚಲನಚಿತ್ರಗಳು ಬಹು ಸಾಮಾನ್ಯವಾಗಿವೆ. ನೆನಪಿಡಿ, ಶ್ರೀಸಾಮಾನ್ಯರ ಸಾಮಾನ್ಯ ಮನಸ್ಥಿತಿಯ ಮೇಲೆ ದಾಳಿ ಮಾಡುವ ವೈದಿಕಾರ್ಯ ಪುರಾಣಿಕರ ಪ್ರವೃತ್ತಿ ಈಗಿನ ಸಿನಿಮಾ ತಯಾರಕರವರೆಗೂ ಮುಂದುವರೆದಿದೆ.

ಇರಲಿ, ವಿಷಯಕ್ಕೆ ಮರಳೋಣ. ಪಾಲಿಸುವ ದೇವತೆಗಳು ಮತ್ತು ಕಾಡುವ ರಾಕ್ಷಸರು; ವೈದಿಕ ಪುರಾಣಿಕರ ಈ ಪರಿಕಲ್ಪನೆಯನ್ನು ಸ್ವೀಕರಿಸಲು ಬಹು ಸುಲಭವಾಗಿ ನೆರವಾಗಿದ್ದು ಜನಸಾಮಾನ್ಯರ ದೌರ್ಬಲ್ಯವಾದ ಆಸೆ ಮತ್ತು ಭಯ. ತಮ್ಮ ಲೌಕಿಕ ಬಯಕೆಗಳನ್ನು ಪೂರೈಸುವ ದೇವರು ಅವರಿಗೆ ಆಪ್ತರಾದರು. ಎಂದಿಗೂ ರಿಸ್ಕ್ ತೆಗೆದುಕೊಳ್ಳಲು ಅಥವಾ ತೊಂದರೆಗೀಡಾಗಲು ಇಚ್ಛಿಸದ ಭಯಸ್ತ ಮನೋಧರ್ಮದ ಜನರಿಗೆ ಕ್ರೂರಿಗಳೆಂದು ಹಣೆಪಟ್ಟಿ ಹೊತ್ತ ರಾಕ್ಷಸರು ಹೇಗೆ ಪ್ರಿಯವಾದಾರು? ದೇವತೆಗಳು ಮತ್ತು ರಾಕ್ಷಸರು ಭೌತಿಕ ಅಸ್ತಿತ್ವದಲ್ಲಿ ಒಂದು ಕಾಲಘಟ್ಟದಲ್ಲಿ ಇದ್ದರು ಎಂದೇ ಇಟ್ಟುಕೊಂಡರೂ, ಆಗಲೂ ಮತ್ತು ಈಗಲೂ ರಿಸ್ಕ್ ತೆಗೆದುಕೊಳ್ಳದ ಮತ್ತು ಯಾವಾಗಲೂ ಕಂಫರ್ಟ್ ಜೋನ್‌ನಲ್ಲಿಯೇ ಬದುಕಲಿಚ್ಛಿಸುವ ದುರ್ಬಲ ಅಥವಾ ಸಾಮಾನ್ಯ ಜನರಿಗೆ ಇದೇ ಬಗೆಯ ಪರಿಕಲ್ಪನೆಯನ್ನು ಬೆಳೆಸುವುದರಲ್ಲಿ ವೈದಿಕಾರ್ಯರು ಬಹು ಯಶಸ್ವಿಯಾಗಿದ್ದಾರೆ.





ಹಾಗಾಗಿಯೇ ದುರ್ಬಲ ಮನಸ್ಕರ ಬಹುದೊಡ್ಡ ಸಮೂಹವು, ಯಾವುದೇ ಸಮುದಾಯದವರಾಗಿರಲಿ, ವೈದಿಕ ಬ್ರಾಹ್ಮಣ ಪುರೋಹಿತರ ಮಾತುಗಳಿಗೆ ತಕ್ಷಣವೇ ಕಿವಿಯಾಗುವುದು, ಮಾತುಗಳಿಗೆ ಹೌದೆನ್ನುವುದು.

ಪ್ರಭೆಯುಳ್ಳ ಸುರರು, ಅಂಧಕಾರದ ಅಸುರರು

ದೇವತೆಗಳೆಂದರೆ ಬೆಳಕು. ದೇವತೆಗಳ ತಲೆಯ ಹಿಂದೆ ವರ್ತುಲಾಕಾರವಾಗಿ ಬೆಳಕಿನ ಪ್ರಭಾವಲಯವನ್ನು ನೀವು ಕಲಾವಿದರ ಚಿತ್ರ ಮತ್ತು ಸಾಹಿತ್ಯ ಕೃತಿಗಳಲ್ಲಿ ಗಮನಿಸಿದ್ದೀರಿ. ಹಾಗೆಯೇ ಅಸತೋಮ ಸದ್ಗಮಯ, ತಮಸೋಮ ಜ್ಯೋತಿರ್ಗಮಯ ಎಂದು ಪ್ರಾರ್ಥನೆಯನ್ನು ಸಲ್ಲಿಸುತ್ತಾ ಕತ್ತಲೆಯಿಂದ ಬೆಳಕಿನ ಕಡೆಗೆ ನಡೆಸು ಎಂದು ಬೇಡುತ್ತೀರಿ. ದೇವತೆಗಳ ಸಂಕೇತವನ್ನು, ಜ್ಞಾನದ ಪ್ರತೀಕವನ್ನು ಬೆಳಕಿನಿಂದ ಗುರುತಿಸುವುದನ್ನು ಲಕ್ಷಿಸಿದ್ದೀರಿ. ಅದರಲ್ಲೂ ಎಷ್ಟೋ ವ್ಯಾಟ್‌ಗಳ ಬೆಳಕಲ್ಲ, ಕೋಟಿ ಸೂರ್ಯರ ಸಮವಾಗಿರುವ ಪ್ರಭೆ! ಒಟ್ಟಾರೆ ಬೆಳಕು ದೈವಿಕವಾದುದು. ಹಾಗಾಗಿಯೇ ಸಾಮಾನ್ಯ ದಡ್ಡನಿಗೂ ದೇವರ ಸಾಕ್ಷಾತ್ಕಾರವೆಂದರೆ ಕಣ್ಣು ಕೋರೈಸುವ ಬೆಳಕಿನ ಚಿತ್ರ ಬರುತ್ತದೆ. ಆದರೆ, ಅಸುರರು ಅಂಧಕಾರ ಪ್ರಿಯರು. ಕತ್ತಲಲ್ಲಿ ಅವರ ಪೈಶಾಚಿಕ ಕೃತ್ಯಗಳಿಗೆ ಹೆಚ್ಚಿನ ಬಲ ಬರುತ್ತದೆ. ಅವರ ಪಾಪದ ಕೆಲಸಗಳನ್ನು ಮಾಡಲು ಅವರಿಗೆ ಕತ್ತಲ ಮುಸುಕು ಬೇಕು. ಪಾಪದ, ಕುಕೃತ್ಯದ ಕತ್ತಲಿನ ಸಂಕೇತಗಳೇ ಮಹಿಷಾಸುರ, ನರಕಾಸುರರಂತಹ ಅಸುರರು. ಅವರನ್ನು ಕೊಂದು ಲೋಕ ರಕ್ಷಣೆ ಮಾಡುವ ದೇವತೆಗಳ ವಿಜಯವೇ ಬೆಳಕಿನ ಹಬ್ಬ. ಅವು ಕತ್ತಲಿನಲ್ಲಿ ಬೆಳಕನ್ನು ಕಾಣುವುದರ ಸಂಕೇತಗಳು. ಸುಂದರವಾದ ಹಣತೆಗಳಲ್ಲಿ ಬೆಳಗುವ ದೀಪಗಳನ್ನು ನೋಡಿ ಆನಂದ ಪಡುವುದರಲ್ಲಿ ಯಾರ ರಸಿಕತೆಗೇನು ಅಡ್ಡಿ?

ಆದರೆ ವಿಷಯ ಅದಲ್ಲ, ತಾತ್ವಿಕವಾಗಿ, ಆಧ್ಯಾತ್ಮಿಕವಾಗಿ ನೋಡಲು ಹೋದರೆ, 'ತಮಸೋಮ ಜ್ಯೋತಿರ್ಗಮಯ'ದಲ್ಲಿ ಒಂದು ದೊಡ್ಡ ದೋಷವಿದೆ. ಇಡೀ ಅಸ್ತಿತ್ವವು ಅಥವಾ ವಿಶ್ವದ ಅವಕಾಶವಿರುವುದೇ ಕತ್ತಲಿನಲ್ಲಿ, ಈ ಭೂಮಿಯೂ ಇರುವುದು ಅದೇ ಕತ್ತಲಿನ ಅಸ್ತಿತ್ವದಲ್ಲಿ, ಬೆಳಕೆನ್ನುವುದು ಬಂದುಹೋಗುವಂತಹುದು. ಆದರೆ ಕತ್ತಲೆಯು ಸದಾ ಇರುವಂತಹುದು. ಇಂತಹ ಕತ್ತಲೆಯ ಸಿದ್ಧಾಂತವು ಪಕ್ಷಪಾತವಿಲ್ಲದ್ದು, ಭೇದಗಳನ್ನು ಕಾಣದು, ಸಮನ್ವಯವಾಗಿರುವಂತಹುದು. ಆದರೆ, ಬೆಳಕೆಂಬುದು ವ್ಯತ್ಯಾಸಗಳನ್ನು ತೋರುತ್ತದೆ. ದೊಡ್ಡದು, ಚಿಕ್ಕದು, ಈ ಬಣ್ಣ ಆ ಬಣ್ಣ ಇತ್ಯಾದಿ ಭೇದಗಳನ್ನು ತೋರುತ್ತದೆ. ಆಧ್ಯಾತ್ಮಿಕವಾಗಿ ಸಾಧಿಸಬೇಕಾಗಿರುವುದರೆಂದರೆ ಈ ಭಿನ್ನತೆಗಳನ್ನು ಮೀರಿ ಸಮನ್ವಯವನ್ನು ಸಾಧಿಸುವುದು. ಪಕ್ಷಪಾತವಿಲ್ಲದೇ ಮುಕ್ತವಾಗುವುದು. ಆದರೆ, ಅದಕ್ಕೆ ಮೊದಲನೆಯ ಸಾಂಕೇತಿಕ ತೊಡಕೇ ಬೆಳಕು. ಬೆಳಕನ್ನು ಸಾಕ್ಷೀಕರಿಸಬೇಕು. ಕತ್ತಲನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕು. ಹಾಗಾಗಿ, ವಿಶಾಲಾರ್ಥದಲ್ಲಿ, ಆಧ್ಯಾತ್ಮಿಕ ಶಕ್ತಿಯ ಆಳದ ಪರಿಕಲ್ಪನೆಯಲ್ಲಿ ನಾವು ಸಾಗಬೇಕಾಗಿರುವುದು ಬೆಳಕಿನಿಂದ ಕತ್ತಲೆಗೆ! ಶಾಕ್ತರ ತಂತ್ರಶಾಸ್ತ್ರದ ಸಾಂಕೇತಿಕ ದೇವತೆಯಾಗಿ ಆದಿಶಕ್ತಿಯೆಂದು ಪರಿಗಣಿಸಲ್ಪಡುವ ಸ್ತ್ರೀಮೂರ್ತಿ ಅಥವಾ ವಿಶ್ವಯೋನಿಯ ಮಾತೃ ಸಂಕೇತವಾದ ಕಾಳಿಯ ಬಣ್ಣ ಕಪ್ಪು, ಈಗ ಬೆಳಕಿನ ಸಂಕೇತದಲ್ಲಿ ಕಾಣುವ ದೇವರುಗಳನ್ನೂ, ಕತ್ತಲಿನ ಸಂಕೇತದಲ್ಲಿ ತೋರ್ಪಡಿಸುವ ರಕ್ಕಸರನ್ನೂ ಗಮನಿಸೋಣ. ಇಬ್ಬರ ಗಮ್ಯವೂ ಶಕ್ತಿ ಸಂಪಾದನೆಯೇ. ದೇವತೆಗಳು ತಮ್ಮ ನಿಯೋಜಿತ ಪುರೋಹಿತರಿಂದ ಅಥವಾ ಋತ್ವಿಕ್ಕುಗಳಿಂದ ಮಂತ್ರಗಳನ್ನು ಹೇಳಿಸಿ, ಯಾಗದ ಬೆಂಕಿಗೆ ಹವಿಸ್ಸನ್ನು ನೀಡಿಸಿ ತಾವು ಶಕ್ತವಂತರಾಗುವವರಾದರೆ, ರಾಕ್ಷಸರು ತಾವೇ ತಪಸ್ಸನ್ನು ಕಠೋರವಾಗಿ ಆಚರಿಸಿ ಸೃಷ್ಟಿಯ (ಬ್ರಹ್ಮ ಅಲ್ಲ ಬ್ರಹ್ಮನ್ - ಯಾವ ಕಾಸ್ಟ್ಯೂಮ್, ಕಾಸ್ಮೆಟಿಕ್ ಇಲ್ಲದ ಒಂದು ಮಹಾನ್ ಶಕ್ತಿ) ಅಂತರ್ಗತಶಕ್ತಿಯನ್ನು ತಮ್ಮದಾಗಿಸಿಕೊಳ್ಳಲು ಯತ್ನಿಸುತ್ತಿದ್ದರು. ಆದ್ದರಿಂದಲೇ ಶಕ್ತಿಗಾಗಿ ಪರಾವಲಂಬಿಗಳಾಗಿದ್ದ ದೇವತೆಗಳು, ಸ್ವತಂತ್ರವಾಗಿ ಶಕ್ತಿಯನ್ನು ಸಂಪಾದಿಸಿಕೊಳ್ಳುತ್ತಿದ್ದ ರಾಕ್ಷಸರನ್ನು ಕಂಡು ಕರುಬುತ್ತಿದ್ದದ್ದು. ಅವರ ತಪಸ್ಸನ್ನು ಭಂಗಪಡಿಸಲು ನಾನಾರೀತಿಯಲ್ಲಿ ಪ್ರಯತ್ನಿಸುತ್ತಿದ್ದರು.

ಈಗ ಇದೇ ವಿಷಯವನ್ನು ಸಾಮಾಜಿಕವಾಗಿ ಅರ್ಥೈಸಿಕೊಳ್ಳಲು ಪ್ರಯತ್ನಿಸೋಣ. ಬಿಳಿಯ ಸುಂದರ ದೇವತೆಗಳು ಆರ್ಯರಾದರೆ, ಈ ಕರಿಯರೆಂಬುವರು ದ್ರಾವಿಡರು ಅಥವಾ ಇನ್ನಿತರ ಆರಣ್ಯಕ ಬುಡಕಟ್ಟುಗಳ ಮೂಲ ನಿವಾಸಿಗಳು. ಇವರಿಬ್ಬರಿಗೂ ಅಧಿಕಾರದ ಶಕ್ತಿಗಾಗಿ ನಡೆದಿದ್ದು, ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮಾಡಲೇಬೇಕಾದಂತಹ ಸಂಘರ್ಷಗಳೇ ದೇವ-ದಾನವರ ಯುದ್ಧಗಳು!

ರಾಕ್ಷಸರು ಯಾರು?

ಈ ನೆಲದ ಮೂಲನಿವಾಸಿಗಳೇ ರಾಕ್ಷಸರು. ತಮ್ಮದೇ ಆದಂತಹ ಗಣಗಳಲ್ಲಿ, ತಮ್ಮದೇ ಆದಂತಹ ಉದಾತ್ತ ಸಂಸ್ಕೃತಿಯಲ್ಲಿ ಬಾಳುತ್ತಿದ್ದವರು. ಅರಣ್ಯಕರೂ, ಆದಿವಾಸಿಗಳೂ, ಕೆಲವು ಗಣಗಳು ಅಲೆಮಾರಿಗಳೂ ಆಗಿದ್ದರೂ, ಅವರಿಗಿದ್ದ ಲಾಂಛನಗಳೆಂದರೆ ಪ್ರಕೃತಿಯಲ್ಲಿನ ಪ್ರಾಣಿಗಳು. ಇವರು ಗ್ರಾಮಗಳನ್ನೂ ಮತ್ತು ಕಾಡನ್ನೂ ರಕ್ಷಿಸುತ್ತಿದ್ದವರು, ರಕ್ಷಸರು.

ತಮ್ಮ ಅರಣ್ಯದ ವೈದ್ಯ ಪದ್ಧತಿಯನ್ನು ಕಂಡುಕೊ
ಬೇಷಜರು. ದೈಹಿಕವಾಗಿ ತೊಂದರೆಗೊಳಗಾದವ
ವೈದ್ಯ ಪದ್ಧತಿಯಿಂದ ಚಿಕಿತ್ಸೆ ಕೊಡುವವರಲ್ಲದೇ
ಸುತ್ತ ಆವರಿಸಿದ್ದ ಕಾಡುಗಳಲ್ಲಿ ನೆಲೆಸಿದ್ದು ಹ
ಆಕ್ರಮಣವಾಗದಂತೆ ರಕ್ಷಿಸುತ್ತಿದ್ದ ರಕ್ಷಕರು, ರಾ

ಇವರಿಗೇಕೆ ಆರ್ಯ ವೈದಿಕರೊಂದಿಗೆ
ಬೆಳೆಯಿತು? ಮೂಲ ನಿವಾಸಿಗಳಾಗಿ ಬದು
ಅರಣ್ಯಕರ ಪ್ರಧಾನ ಸಂಪತ್ತೂ ಹಾಗೂ ಸ
ನೆಲೆಯೂ ಆಗಿದ್ದ ಅರಣ್ಯವು ವೈದಿಕ
ಕ್ಷೀಣಿಸತೊಡಗಿತು. ವೈದಿಕ ಬ್ರಾಹ್ಮಣರ ಬಹುಮ
ಆಚರಣೆಯೆಂದರೆ ಯಾಗಗಳು. ಪೂಜೆ
ಬ್ರಾಹ್ಮಣರ ವಿಷಯವೇ ಅಲ್ಲ, ಅದು ದ್ರಾವಿಡ
ಪೂ- ಎಂದರೆ, ಹೂವನ್ನು ಅರ್ಪಿಸುವುದು
ಮೊದಲಾಯಿತು ಎಂದು ಕೆಲವು ಅಧ್ಯಯನಗಳು
ನಾವು ಈಗ ನೋಡುವಂತೆ ಸಣ್ಣ ಬಾಣಲಿ, ಚೌಕ
ಯಾಗಗಳನ್ನು ನೆರವೇರಿಸುವಷ್ಟು ಸಣ್ಣದಾಗಿ ಅಗ್
ಕುಂಡಗಳು ಇದ್ದಿರಲಿಲ್ಲ, ಹಸು, ಕುದುರೆಯಂತ
ದೇಹದ ಪ್ರಾಣಿಗಳು ಅದೆಷ್ಟೋ ಸಂ
ಬೇಯಬೇಕಾಗಿತ್ತು, ಅದಕ್ಕೆ ಎಷ್ಟೋ ಪ್ರಮಾಣದ
ಉತ್ಪನ್ನಗಳು ನೇರವಾಗಿ ಬೇಕಾಗಿತ್ತು. ಈ ರೀತಿಯ
ಜೊತೆ, ಅವರ ಯಾಗಶಾಲೆಗಳ, ವಾಸಸ್ಥಳ ಮತ್ತು
ನಿರ್ಮಾಣಕ್ಕೂ, ಸಾಗುವಳಿಗೂ ಅರಣ್ಯ ನಾಶ ಮಾ
ಆಗ ಈ ಅರಣ್ಯಕರು ಸಹಜವಾಗಿಯೇ ಪ್ರತಿಭ
ಅವರ ಪ್ರತಿಭಟನೆಯ ರೀತಿ ಯಾವ ರೂಪದಲ್ಲಿದ್
ಎಂಬುದು ನಮಗೆ ನೇರವಾಗಿ ಗ್ರಹಿಸಲಾಗದ
ಅದು ಅವರ ಪ್ರತಿಭಟನೆ ಎಂಬುದು ಮಾತ್ರ

ಸಾಂಸ್ಕೃತಿಕ ಶೋಷಣೆ

ಯಾಗಗಳನ್ನು ಆಚರಿಸುವುದು ವೈದಿಕರ ಸ
ಆದರೆ ಅಂತಹ ಸಂಪ್ರದಾಯ ಅರಣ್ಯಕರಲ್ಲಿ
ದ್ರಾವಿಡರಲ್ಲಿ ಇರಲಿಲ್ಲ. ಆರ್ಯರ ಸಂಸ್ಕೃತಿಯ
ದ್ರಾವಿಡರ ಸಂಸ್ಕೃತಿಯೇ ಬೇರೆ. ಆದರೆ ಸಂಘಪ
ಬದುಕುತ್ತಿದ್ದರೂ ಇಬ್ಬರ ಸಂಸ್ಕೃತಿಗಳ
ಸಂಪ್ರದಾಯಗಳು ಬೆರೆತುಕೊಂಡವು.
ಬೆರೆಯುವಿಕೆಯು ಕೂಡಿ ಬಾಳುವಿಕೆಯಲ್ಲಿ
ಹೌದು. ಆದರೆ, ತಾವು ಪಾಲಿಸುತ್ತಿದ್ದ ಸ
ಇತರರದ್ದಲ್ಲ, ನಮ್ಮ ಸಂಪ್ರದಾಯವನ್ನು ಇತರರು
ಎಂಬ ಕಾರಣದಿಂದಾಗಿ ಅವರನ್ನು ಸಂಸ್ಕೃತಿಹೀ
ದುಷ್ಟರೆಂದೂ ಹೇಗೆ ಪರಿಗಣಿಸುವಿರಿ? ಅ
ಅವರಿಗೆ ಎಂಬ ಸಾಮಾನ್ಯ ಪ್ರಜ್ಞೆಯೂ ಬೇಡವೇ
ದುಷ್ಟರ ಹಾಗೂ ಕ್ರೂರಿಗಳ ವರ್ಗಕ್ಕೆ ತಳ್ಳಲ್ಪಟ್ಟ
ಇಲ್ಲೇ ಇರುವುದು ವೈದಿಕ ಪುರೋಹಿ
ರಾಜಕೀಯ ಹುನ್ನಾರ! ನಮ್ಮ ಪ್ರಾಚೀನ
ಪುರಾಣಿಕರಿಂದ, ಅದೇ ನೆಲೆಗಟ್ಟಿನ ಪ್ರಭಾವಕ್ಕೊ
ನವೀನ ಪೌರಾಣಿಕ ಸಿನಿಮಾ ನಿರ್ದೇಶಕರವರೆಗೂ
ಬಹು ಕ್ರೂರವಾಗಿ, ಅವಹೇಳನಕಾರಿಯಾಗಿ, ವಿ
ಚಿತ್ರಿಸುತ್ತಾ ಬಂದಿದ್ದಾರೆ.

ತಮ್ಮ ಸಂಸ್ಕೃತಿ ಮಾತ್ರವೇ ಸಂಸ್ಕೃತಿ, ನಮ್ಮ
ಮಾತ್ರವೇ ಸತ್ಯವಾಗಿ ಶ್ರೇಷ್ಠವಾದ ಸಂಪ್ರದಾ
ವರ್ತಿಸುವ ಅಂದಿನ ವೈದಿಕರ ಮುಂದುವರೆ
ಇಂದಿನ ಹಿಂದೂ ಕೋಮುವಾದಿಗಳು. ಅವ
ಹಿಂದೂ ಸಂಸ್ಕೃತಿಯನ್ನು ಅನುಸರಿಸದ ಮ್ಲೇಚ್ಛ
ಲೆಂದು ಒಂದು ದೇವರನ್ನು ಹುಟ್ಟಿಸಲೋ ಅಥ
ಲೋ ಆಗುವುದು. ಆದ್ದರಿಂದಲೇ ಮುಸಲ್ಮಾನ
ಇತರ ಧರ್ಮೀಯರ ಬಗ್ಗೆ ಅಸಹನೆ ಮತ್ತ
ವಿರುವುದು. ವೇದಗಳನ್ನು ತಿರಸ್ಕರಿಸಿದ, ದೇವ
ನಿರಾಕರಿಸಿದ ಬೌದ್ಧ ಮತ್ತು ಜೈನ ಧರ್ಮಗ

ನಮ್ಮ ಸಂಸ್ಕೃತಿ ಅಥವಾ ಸಾಂಪ್ರದಾಯಿಕ
ಇತರರ ಸಂಸ್ಕೃತಿಗಳು ಒಳಪಡದ ಕಾರಣ
ತುಚ್ಛವಾಗಿ ನೋಡುವುದಾಗಲಿ, ಅದೇ ದೃಷ್
ಆ ಸಂಸ್ಕೃತಿಯನ್ನು ನಾಶ ಮಾಡಿ, ತಮ್ಮ
ಪ್ರತಿಷ್ಠಾಪಿಸುವುದಾಗಲಿ, ಪ್ರತ್ಯಕ್ಷವಾಗಿ ಅಥವಾ
ತಮ್ಮದನ್ನು ಹೇರುವುದಾಗಲಿ ಮಾಡುವ
ಸಾಂಸ್ಕೃತಿಕ ಶೋಷಣೆ. ಅಜ್ಞಾನದಿಂದಲೋ
ದಿಂದಲೋ, ಅರಿವಿನ ಕೊರತೆಯಿಂದಲೆ
ಸಾಂಸ್ಕೃತಿಕ ಶೋಷಣೆ ನಮ್ಮ ಸಮಾಜದಲ್ಲಿ
ಇದೆ.

ಚಾಮುಂಡಿ ಮಹಿಷನ ಕೊಂದ ಮಹಾ
ಅಧರ್ಮವ ಸೋಲಿಸಿದ ರಾತ್ರಿ ಎಂದು ವಿ
ಆಚರಣೆಯ ಹಬ್ಬಗಳ ಸಂಸ್ಕೃತಿಯನ್ನು ನ
ನೇರವಾಗಿ ಆಳವಡಿಸಿಕೊಂಡಿರುವ ನಾವು
ಮಟ್ಟಿಗೆ ಯಥಾರ್ಥವಾದದ್ದು ಎಂದು
ಮುಂದಿನ ಲೇಖನದಲ್ಲಿ.

(ಮುಂದುವ


...ನೇ ಸಾಲಿಗೆ ಪಂಪ ಪ್ರಶಸ್ತಿಯನ್ನು ಪಡೆದ ಪ್ರೊ. ಜಿ.ಎಚ್.ನಾಯಕ ಪ್ರಾಮಾಣಿಕತೆಗೆ, ದಿಟ್ಟ ನಿಲುವಿಗೆ, ಖಚಿತ ...ಪ್ರಾಯಕ್ಕೆ ಹೆಸರಾದವರು. ಅವರ ನಿಲುವನ್ನು ಒಪ್ಪದವರೂ ಅವರನ್ನು ಗೌರವಿಸುತ್ತಾರೆ. ಅಧ್ಯಾಪಕರಾಗಿ, ಸಂಸ್ಕೃತಿಯ ...ದ ಚಿಂತಕರಾಗಿ, ವಿಮರ್ಶಕರಾಗಿ, ಅನೇಕ ಸಾಮಾಜಿಕ ಹೋರಾಟಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ...ಪೂರ್ಣವಾಗಿ ಬದುಕುತ್ತಿರುವವರು ಜಿ.ಎಚ್.ನಾಯಕ. ಪಂಪ ಪ್ರಶಸ್ತಿ ಪಡೆದ ಹಿನ್ನೆಲೆಯಲ್ಲಿ ಅವರೊಂದಿಗೆ ನಡೆಸಿದ ...ಕತೆ ಇಲ್ಲಿದೆ:

ಸುದೀರ್ಘ
ಸಾಹಿತಿ-ಕಲಾವಿದ-ಚಿಂತಕರ
ಸಂದರ್ಶನ

• ಜಿ.ಪಿ.ಬಸವರಾಜು

ಪ್ರಾಚೀನ ಸಾಹಿತ್ಯದಲ್ಲಿ ಪಂಪನಂಥ ಸ್ವೋಪಜ್ಞ ಕವಿ ಇನ್ನೊಬ್ಬನಿಲ್ಲ

ಪ್ರೊ. ಜಿ.ಎಚ್.ನಾಯಕ್



...ಶ್ನೆ: ಕನ್ನಡದ ನವ್ಯ ವಿಮರ್ಶಕರನೇಕರಿಗೆ ಪಾಶ್ಚಾತ್ಯ ... ವಿವಿಧ ಮಗ್ಗುಲುಗಳು ಗೊತ್ತು. ಅಲ್ಲಿನ ...ಗಳು ಗೊತ್ತು. ಆದರೆ ಬಹುಪಾಲು ವಿಮರ್ಶಕರಿಗೆ ...ಹಿತ್ಯ ಪರಂಪರೆಯ, ವಿಶೇಷವಾಗಿ ಪ್ರಾಚೀನ ...ಪರಂಪರೆಯ ಪರಿಚಯ ಅಷ್ಟಾಗಿ ಇಲ್ಲ. ನಿಮ್ಮನ್ನು ...ರ್ಶಕರ ಸಾಲಿನಲ್ಲಿ ಗುರುತಿಸಲಾಗುತ್ತಿದೆ. ಆದರೂ ...ಪಂಪ ಮತ್ತು ಪ್ರಾಚೀನ ಸಾಹಿತ್ಯದೊಂದಿಗೆ ...ಮು ಬಂದಿರುವ ಸಂಬಂಧವೂ ಗಾಢವಾದದ್ದು. ...ಗೆ ಸಾಧ್ಯವಾಯಿತು.

...ಕ: ಹೌದು, ನನ್ನನ್ನು ನವ್ಯ ವಿಮರ್ಶಕರ ಸಾಲಿನಲ್ಲಿ ...ವಾಗಿ ಗುರುತಿಸುತ್ತಾರೆ. ನೀವು ಹೇಳಿದಂತೆ ನವ್ಯ ...ರು ಪ್ರಾಚೀನ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ...ದಂತೆ ಹೆಚ್ಚು ಕೆಲಸ ಮಾಡಿದಂತಿಲ್ಲ; ಆ ಓದಿನ ...ಹೆಚ್ಚಾಗಿದ್ದಂತಿಲ್ಲ. ಇದೇನೂ 'ನವ್ಯ' ಎಂದು ...ಪ್ಪಡುವ ಅಥವಾ ಹಾಗೆ ಹೇಳಿಕೊಳ್ಳುವುದಕ್ಕೆ ...ಪಟ್ಟುಕೊಳ್ಳದ ವಿಮರ್ಶಕರ ಬಗ್ಗೆ ಹೇಳುವ ...ತೆನ್ನೋಣ. ಇಂಥ ಮಾತನ್ನು ಯು.ಆರ್. ...ನಮೂರ್ತಿ, ಪಿ.ಲಂಕೇಶ್, ಎಂ.ಜಿ.ಕೆ., ...ಾಮಚಂದ್ರನ್ ಅಂಥವರ ಬಗ್ಗೆ ಕೂಡಾ ...ಬದೆನ್ನೋಣ. ಆದರೆ 'ನವ್ಯ' ವಿಮರ್ಶಕರೆಂದು ...ಳ್ಳುವುದಕ್ಕೂ ಹೇಳಿಸಿಕೊಳ್ಳುವುದಕ್ಕೂ ಮುಜುಗರ ...ಅಥವಾ ನಾಚಿಕೊಳ್ಳುವ ಕೆ.ವಿ.ನಾರಾಯಣ, ...ರಾಘವೇಂದ್ರರಾವ್, ಬಸವರಾಜ ಕಲ್ಗುಡಿ, ...ಬಾಲಸುಬ್ರಹ್ಮಣ್ಯ, ಡಿ.ಆರ್.ನಾಗರಾಜ ಇಂಥವರೆಲ್ಲ ...ಸಾಹಿತ್ಯದ- ಪ್ರಾಚೀನ ಕನ್ನಡ ಸಾಹಿತ್ಯವೂ ...-ವಿದ್ಯಾರ್ಥಿಗಳಾಗಿಯೆ ಓದಿಬಂದವರಾಗಿದ್ದಾರಲ್ಲ, ... ಬಗ್ಗೆ ನೀವಾಗಲಿ ನಾನಾಗಲಿ ಇಂಥ ಹೇಳಿಕೆ ...ಬಹುದೇ? ನಾನು ವಿಮರ್ಶಕನಾಗಿ ಇಡೀ ಕನ್ನಡ ...ಪರಂಪರೆಯ ಜೊತೆಯಲ್ಲಿ ನನ್ನ ಸಂಬಂಧವನ್ನು ...ಡೇ ಬಂದವನು. ಇದಕ್ಕೆ ನಾನು ಕನ್ನಡ ಸಾಹಿತ್ಯದ ...ವಿದ್ಯಾರ್ಥಿಯಾಗಿರುವುದು, ಕನ್ನಡ ಅಧ್ಯಾಪಕನಾಗಿ ...ಳಿರುವುದು ಕಾರಣವಿರಬಹುದು. ಪ್ರಾಚೀನ ...ಹಿತ್ಯ ಪರಂಪರೆಯ ಶ್ರೇಷ್ಠಾತಿಶ್ರೇಷ್ಠ ವಿದ್ವಾಂಸ ...ರಸಿಂಹಾಚಾರ್ ಅಂಥವರು ದೀರ್ಘಕಾಲ-ನಾಲ್ಕು ...ಕಾಲ- ಕಾಲೇಜಿನಲ್ಲಿ ನನಗೆ ಪ್ರಾಚೀನ ಕನ್ನಡ ... ಪಾಠಹೇಳಿದ ಗುರುಗಳಾಗಿದ್ದದ್ದೂ ...ಗಿರಬಹುದು. ನಾನು ಈಗ ಹೆಸರಿಸಿದ ...ರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದಿಂದ ... ವಿಮರ್ಶಕರಿಗೆ ಪ್ರಾಚೀನ ಕನ್ನಡ ಸಾಹಿತ್ಯದ ...ಿದ ಗುರುಗಳಾದ ಜಿ.ಎಸ್.ಶಿವರುದ್ರಪ್ಪ, ...ನಮೂರ್ತಿ ಅವರು, ಡಿಎಲ್ಎನ್ ಅಂಥವರ ...ೀಲಿಸಬಹುದಾದವರೆಂದು ನಾನು ಹೇಳಲಾರೆ. ...ರಣವಾಗಿರಬಹುದೇ? ಜೊತೆಗೆ ನನ್ನ ಆಸಕ್ತಿ ...ಗಳನ್ನು ಜೀವಂತವಾಗಿ ಉಳಿಸಿಕೊಂಡು ಬಂದದ್ದೂ ...ಗಿರಬಹುದು. ಹೀಗಾಗಿ ಪ್ರಾಚೀನ ಕನ್ನಡ ಸಾಹಿತ್ಯ ...ದ ಜೊತೆ ನಿರಂತರವಾಗಿ ಸಂಬಂಧವನ್ನು ...ಕೊಂಡೇ ಬಂದಿದ್ದೇನೆ. ಪ್ರಾಚೀನ ಸಾಹಿತ್ಯದಲ್ಲಿ ...ಕಾವ್ಯಗಳ ಬಗ್ಗೆ ನನಗಿರುವ ಮೆಚ್ಚುಗೆ, ಪ್ರಶಂಸೆ ...ರ ಕಾವ್ಯಗಳ ಬಗೆಗೂ ಇಲ್ಲ. ಕನ್ನಡದ ಶ್ರೇಷ್ಠ ...ನೇ ಎಂಬುದು ನನ್ನ ದೃಢವಾದ ಅಭಿಪ್ರಾಯ. ...ಪಂಪನನ್ನು ಕುರಿತು ಈವರೆಗೆ ಮೂರು ...ಗಳನ್ನು ಬರೆದಿದ್ದೇನೆ. ಕನ್ನಡ ಸಾಹಿತ್ಯ ವಿಮರ್ಶೆಯ ...ಲ್ಲಿ ಪಂಪನ ಕಾವ್ಯಗಳ ಬಗ್ಗೆ, ಪ್ರಾಚೀನ ಸಾಹಿತ್ಯ ...ಬಗ್ಗೆ ನಮ್ಮ ವಿಮರ್ಶಕರು ತಳೆದ ಎಷ್ಟೋ ...ನ್ನು, ಆ ಪರಂಪರೆಯ ವಿಮರ್ಶೆಯ ಜೊತೆಗಿದ್ದೂ ... ನನ್ನ ಲೇಖನಗಳ ಮೂಲಕ ಈ ವಿಮರ್ಶಾ ...ಭಿನ್ನ ಆಯಾಮಗಳನ್ನು, ಅರ್ಥವಂತಿಕೆಯನ್ನು ...ಪ್ರಯತ್ನಿಸಿದ್ದೇನೆ ಎಂಬ ನಂಬಿಕೆ ನನಗಿದೆ. ...ಕುರಿತ ನನ್ನ ಲೇಖನಗಳೆಲ್ಲ ಒಟ್ಟಿಗೇ ಇರುವ ...ತ್ತ ಪಂಪ' ಎಂಬ ಪುಸ್ತಕವೂ ಪ್ರಕಟವಾಗಿದೆ.

...ಅಂದರೆ ಕನ್ನಡ ವಿಮರ್ಶೆಯ ಪರಂಪರೆಯನ್ನು ...ತೆಗೆದುಕೊಂಡು ಹೋಗಿದ್ದೀರಿ?

...ಕ: ಮುಂದೆ ಎಂದು ಹೇಳಿಕೊಳ್ಳುವುದು ...ದ 'ಅಹಂ'ನ ಮಾತಾಗಿ ತೋರಬಹುದೇನೋ! ... ಹೊಸದೃ, ಹೊಸಮಾರ್ಗಗಳನ್ನು ಮರುಚಿಂತನೆಗೆ ... ಮಾಡಿದ್ದೇನೆ ಎಂದು ಮಾತ್ರ, ಯಾವ ... ಇದ್ದರೆ ಹೇಳಬಲ್ಲೆ. ನನ್ನ ಹಿಂದಿನ, ...ತಲೆಮಾರಿನ ಶ್ರೇಷ್ಠ ವಿಮರ್ಶಕರು, ವಿದ್ವಾಂಸರು ...ನನ್ನು, ಹಾಗೇ ಒಪ್ಪಿಕೊಳ್ಳದೆ ಪ್ರಶ್ನಿಸಿದ್ದೇನೆ.

ರನ್ನನ 'ಗದಾಯುದ್ಧ', ರಾಘವಾಂಕನ 'ಹರಿಶ್ಚಂದ್ರ ಚಾರಿತ್ರ' ಕುರಿತ ನನ್ನ ವಿಮರ್ಶೆಗಳಲ್ಲಿ ಕೂಡ ಅದನ್ನು ಕಾಣಬಹುದು. ನನಗೆ ಅಭಿಪ್ರಾಯ ಭೇದವಿದೆ ಎಂಬುದನ್ನು ನಾನು ಆಯ್ಕೆಮಾಡಿಕೊಂಡ ಕೃತಿಗಳ ಸಂದರ್ಭದಲ್ಲಿ ಹೇಳಿದ್ದೇನೆ. ಹಾಗೆ ಹೇಳಿಕೊಂಡು ಬರುವಾಗ ನನಗೆ ಒಂದು ರೀತಿಯ ಸಂತೋಷವೂ ಆಗಿದೆ. ತೀನಂಶ್ರೀ, ಡಿಎಲ್ಎನ್, ಶಿವರುದ್ರಪ್ಪ ಇವರೆಲ್ಲ ನನ್ನ ಗುರುಗಳು; ಪ್ರಾಚೀನ ಸಾಹಿತ್ಯ ಪರಂಪರೆಯಲ್ಲಿ ದೊಡ್ಡ ವಿದ್ವಾಂಸರು ಮತ್ತು ವಿಮರ್ಶಕರು. ಅವರ ನಿಲುವಿನ ಜೊತೆ ನಾನು ಸೆಣಸುವ ಸಂದರ್ಭ ಬಂದಾಗ, ಒಂದು ರೀತಿಯ ವಿನಯ ಮತ್ತು ಮುಜುಗರ ಇದ್ದಾಗಲೂ, ವಿಮರ್ಶಕನಾಗಿ ನನ್ನ ತಿಳಿವನ್ನು, ಅಭಿಪ್ರಾಯವನ್ನು, ಅನುಭವವನ್ನು ನಿರ್ದಾಕ್ಷಿಣ್ಯವಾಗಿ ದಾಖಲಿಸಿದ್ದೇನೆ. ಇವೆಲ್ಲ ನನ್ನ ಲೇಖನಗಳಲ್ಲಿವೆ. ನವೋದಯ ತಲೆಮಾರಿನ ನಂತರ ಬಂದ, ದೊಡ್ಡ ಸಂಶೋಧಕರೆಂದು ಖ್ಯಾತರಾದ ಟಿ.ವಿ. ವೆಂಕಟಾಚಲಶಾಸ್ತ್ರೀ, ಎಂ.ಚಿದಾನಂದಮೂರ್ತಿ, ಎಂ.ಎಂ.ಕಲ್ಬುರ್ಗಿ ವಿದ್ವಾಂಸರಾಗಿ, ಸಂಶೋಧಕರಾಗಿ ನಾನು ಬಹಳ ಗೌರವದಿಂದ ಕಾಣುವಂಥ ವಿದ್ವಾಂಸರು. ಪ್ರಾಚೀನ ಸಾಹಿತ್ಯ ಪರಂಪರೆಯ ವಿಮರ್ಶೆ, ವ್ಯಾಖ್ಯಾನಗಳನ್ನು ಕುರಿತಂತೆ ನಾನು ವ್ಯಕ್ತಪಡಿಸಿದ ಭಿನ್ನಮತದ ಬಗ್ಗೆ ಈ ವಿದ್ವಾಂಸರು ಯಾರೂ ಮಾತನಾಡದಿರುವುದು, ಪ್ರತಿಕ್ರಿಯೆ ತೋರಿಸದೇ ಇರುವುದು ಒಂದು ಕೊರತೆಯಾಗಿಯೇ ನನಗೆ ಕಾಣಿಸುತ್ತದೆ. ನನ್ನ ವಿಮರ್ಶೆಯ ಕೊರತೆಯೂ ಇರಬಹುದು. ಹಾಗೆಂದು ಅವರು ಹೇಳಬಹುದಾಗಿತ್ತು. ಆದರೆ ಯಾವುದೇ ಪ್ರತಿಕ್ರಿಯೆಯನ್ನೂ ತೋರಿಸದೇ ಇದ್ದದ್ದು ಸರಿಯಲ್ಲ. ಪ್ರತಿಕ್ರಿಯೆ ತೋರಿಸಬೇಕಾದದ್ದು ಅವರ ಹೊಣೆಗಾರಿಕೆಯಾಗಿದೆ. ಮೇಲೆ ಸೂಚಿಸಿರುವ ಕವಿಗಳ ಬಗ್ಗೆ ಅಧ್ಯಯನ ಮಾಡುವವರು ನನ್ನ ನಿಲುವು, ವ್ಯಾಖ್ಯಾನಗಳನ್ನು ಒಪ್ಪುವುದು ಬಿಡುವುದು ಬೇರೆ. ಆದರೆ ಅವುಗಳನ್ನು ಎದುರಿಸದೇ ಹೋಗುವುದು ಸಾಧ್ಯವಿಲ್ಲ; ಸಾಧುವೂ ಅಲ್ಲ. ಎದುರಿಸದೆ ದಾಟಿ ಹೋಗುವುದು ತಲೆತಪ್ಪಿಸಿಕೊಳ್ಳುವ ಉಪಾಯ ಎಂದು ನನಗೆ ಅನಿಸಿದೆ. ಪ್ರಾಚೀನ ಕನ್ನಡ ಸಾಹಿತ್ಯದ ವಿಮರ್ಶೆಯ ಪರಂಪರೆ ಮುಂದುವರಿಯಬೇಕು; ಮುಂದುವರಿಯುವ ಅಗತ್ಯವಿದೆ ಎಂದು ತಿಳಿಯುವವರು ಹೀಗೆ 'ವಿನೋಬ ಮೌನ' ವಹಿಸುವುದು ತರವಲ್ಲ. ಬೆಂಗಳೂರು ವಿಶ್ವವಿದ್ಯಾನಿಲಯದ, ನಾನು ಮೇಲೆ ಪ್ರಸ್ತಾಪಿಸಿದ ವಿಮರ್ಶಕರ ಮೌನ ಕೂಡಾ ಇದೇ ಅಲ್ಲವೇ?

ಪ್ರಶ್ನೆ: ನವ್ಯೋತ್ತರ ಸಾಹಿತ್ಯ ಕೃತಿಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ, ನೀವು ಬರೆದಿರುವುದೂ ಹೆಚ್ಚಿಲ್ಲ, ಅಲ್ಲವೇ?

ನಾಯಕ: ಸಾಹಿತ್ಯ ಕೃತಿಗಳಿಗೆ ಸಂಬಂಧಿಸಿದಂತೆ ಅದು ನಿಜವಿರಬಹುದು. ಆದರೂ ನವ್ಯೋತ್ತರದಲ್ಲಿ ಪ್ರಕಟಗೊಂಡ ಮುಖ್ಯ ಕೃತಿಗಳನ್ನು ನಾನು ಕಡೆಗಣಿಸಿದಂತೆ ಕಾಣುವುದಿಲ್ಲ. ಆಗಾಗ, ಅಲ್ಲಲ್ಲಿ ಬರೆದಿರುವುದುಂಟು. ಜೊತೆಗೆ ಸಾಹಿತ್ಯಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸ್ಥಿತ್ಯಂತರಗಳನ್ನು, ಬಿಕ್ಕಟ್ಟುಗಳನ್ನು ಕುರಿತು ನಾನು ನಡೆಸಿದ ಚಿಂತನೆಗಳು, ಬರೆದ ಬರಹಗಳು ಮುಖ್ಯವಾದ ಸಾಂಸ್ಕೃತಿಕ ಸಂವಾದಕ್ಕೆ ಎಡೆಮಾಡಿಕೊಟ್ಟಿವೆ ಎಂಬುದನ್ನು ಮರೆಯಬಾರದು. ಇವು ನವ್ಯೋತ್ತರ ಸಾಹಿತ್ಯ ಚಿಂತನೆಗೆ ಸಹ ಸ್ಪಂದನ ರೀತಿಯ ಬರಹಗಳು ಎಂಬುದು ನನ್ನ ನಂಬಿಕೆ.

ಪ್ರಶ್ನೆ: ಪಂಪನನ್ನು ನೀವು ಭಿನ್ನವಾಗಿ ಗ್ರಹಿಸಿದ ಕ್ರಮ ಪಠ್ಯಕ್ಕೆ ಸಂಬಂಧಿಸಿದ್ದೊ, ಅಥವಾ ಒಳನೋಟಗಳಿಗೆ ಸಂಬಂಧಿಸಿದ್ದೊ?

ನಾಯಕ: ಪಠ್ಯ ಒಳನೋಟಗಳನ್ನು ಬೇರ್ಪಡಿಸಿ ನೋಡುವುದು ಹೇಗೆ? ಅವುಗಳದು ಅವಿನಾಸಂಬಂಧ; ಇಡಿಯಲ್ಲಿ ಪಡೆಯಬೇಕಾದ ಸಂಪತ್ತು. ಮೊದಲು ಪ್ರಾಚೀನ ಸಾಹಿತ್ಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಗಟ್ಟಿಯಾದ ಸಿದ್ಧತೆ ಇರಬೇಕು. ನಂತರ ಬಂದ ವಿಮರ್ಶಾ ಪರಂಪರೆಯ ಪರಿಚಯವೂ ಇರಬೇಕಾಗುತ್ತದೆ. ಈ ವಿಮರ್ಶಾ ಪರಂಪರೆಗೇ ಎದುರುನಿಂತು ನಾನು ನನ್ನ ಅಭಿಪ್ರಾಯ ಹೇಳಬೇಕಾಗಿತ್ತು. ರನ್ನನ ಬಗೆಗೂ ಅದೇ. ರಾಘವಾಂಕನ ಹರಿಶ್ಚಂದ್ರ ಕಾವ್ಯದ ಬಗ್ಗೆಯೂ ಅಷ್ಟೇ. ವಿದ್ವತ್ ವಲಯದಲ್ಲಿ ಆಗಲೇ ಇದ್ದ ಸ್ಥಾಪಿತ ಅಭಿಪ್ರಾಯಗಳನ್ನು ನಾನು ಪ್ರಶ್ನೆ ಮಾಡಿದ್ದೇನೆ. ಇದನ್ನು ಗಂಭೀರ ಚರ್ಚೆಗೆ ಒಡ್ಡಬೇಕಾಗಿತ್ತು. ಒಡ್ಡದೇ ಇರುವುದು ದೊಡ್ಡ ಕೊರತೆಯಾಗಿಯೇ ನನಗೆ ಕಾಣಿಸುತ್ತಿದೆ. ಸ್ವಾರಸ್ಯವೆನ್ನೋಣವೋ ವಿಪರ್ಯಾಸವೆನ್ನೋಣವೊ ತೀನಂಶ್ರೀ ಮತ್ತು ಜಿ.ಎಸ್.ಶಿವರುದ್ರಪ್ಪನವರ ನಂತರ ಕನ್ನಡ ಸಾಹಿತ್ಯ ವಿಮರ್ಶಕರು ಮತ್ತು ಸಂಶೋಧಕರು ಹೋಳು ವಿಮರ್ಶಕರು. ಪ್ರಾಚೀನ ಕನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಇದ್ದರೆ ಆಧುನಿಕ ಸಾಹಿತ್ಯದ ಬಗ್ಗೆ ಇಲ್ಲ. ಆಧುನಿಕ ಸಾಹಿತ್ಯದ ಬಗ್ಗೆ ಆಸಕ್ತಿ ಇದ್ದರೆ ಪ್ರಾಚೀನ ಸಾಹಿತ್ಯದ ಬಗ್ಗೆ ಇಲ್ಲ ಅಥವಾ ತೀರಾ ಕಡಿಮೆ. ಕುವೆಂಪು, ಶಿವರುದ್ರಪ್ಪ ಡಿಎಲ್ಎನ್, ತೀನಂಶ್ರೀ, ವಿ.ಸೀತಾರಾಮಯ್ಯ, ರಂ.ಶ್ರೀ. ಮುಗಳಿ, ಆರ್.ಸಿ.ಹಿರೇಮಠ, ಕಂಬಾರ ಅವರು ಯಾರು ಏನು ಎಂದು ನೋಡದೆ ಪ್ರಶ್ನಿಸುವುದು, ಭಿನ್ನ ಅಭಿಪ್ರಾಯ, ವ್ಯಾಖ್ಯಾನಗಳನ್ನು ಮುಂದಿಡುವ ಅಗತ್ಯವಿದೆ ಎಂದು ಕಂಡಲ್ಲೆಲ್ಲ ನಾನು ನನ್ನ ನಿಲುವನ್ನು ಪ್ರತಿಪಾದಿಸುತ್ತ ಬಂದಿದ್ದೇನೆ. ನನ್ನ 'ಸಾಹಿತ್ಯದಲ್ಲಿ ವಿನಯ' ಎಂಬ ಪರಿಕಲ್ಪನೆಗೆ ಚ್ಯುತಿ ಉಂಟಾಗದಂತೆ ಅದನ್ನು ಮಾಡಿಕೊಂಡು ಬಂದಿದ್ದೇನೆ. ಅಂಥವರನ್ನು ಪ್ರಶ್ನಿಸುವುದೇ 'ಅವಿನಯ' ಎಂಬುವರಿದ್ದರೆ ಅದಕ್ಕೆ ನನ್ನ ಹತ್ತಿರ ಉತ್ತರವಿಲ್ಲ. ನಾನು ಮೇಲೆ ಹೇಳಿದ ವಿದ್ವಾಂಸರ ವಿದ್ವತ್ತಿನ ಬಗ್ಗೆ ನನಗೆ ಅನುಮಾನವಿಲ್ಲ. ಆದರೆ ಅವರ ಸಹೃದಯ ಸ್ಪಂದನ, ಕಾವ್ಯಾಧ್ಯಯನದ ವಿಧಾನ ಮತ್ತು ನನ್ನ ವಿಧಾನ ಹಾಗೂ ಸಹೃದಯ ಸ್ಪಂದನಗಳಿಗೆ ಸಂಬಂಧಿಸಿದಂತೆ ಇರುವ ವ್ಯತ್ಯಾಸವೇ ನನ್ನ ಅಭಿಪ್ರಾಯ ಭೇದಕ್ಕೆ ಕಾರಣವಿರಬಹುದು. ವ್ಯತ್ಯಾಸವಂತೂ ಇದೆ. ಅದು ಸ್ಪಷ್ಟವಾಗಿ ಕಾಣಿಸುತ್ತದೆ.

ಪ್ರಶ್ನೆ: ಪಂಪನಲ್ಲಿ ನೀವು ಕಾಣುವ ಮುಖ್ಯ ಗುಣ ಯಾವುದು?

ನಾಯಕ: ಕನ್ನಡ ಭಾಷೆಯನ್ನು, ಆಧುನಿಕ ಪೂರ್ವ ಕವಿಗಳಲ್ಲಿ ಪಂಪನಷ್ಟು ಸಮರ್ಥವಾಗಿ ಬಳಸಿದವರು ಇನ್ನೊಬ್ಬರಿಲ್ಲ ಎನ್ನುವುದು ನನ್ನ ದೃಢವಾದ ಅಭಿಪ್ರಾಯ. ಸಂಕ್ಷಿಪ್ತತೆ, ಧ್ವನಿಪೂರ್ಣತೆಯ ವಿಷಯದಲ್ಲಿಯೂ, ಪ್ರಾಚೀನ ಸಾಹಿತ್ಯದ ಯಾವ ಕವಿಯಲ್ಲಿಯೂ ನನಗೆ ಆ ಸೂಕ್ಷ್ಮ ಸಂವೇದನಾ ಶಕ್ತಿ ಕಂಡಿಲ್ಲ. ತನ್ನತನದ ಮುದ್ರೆಯನ್ನು ಒತ್ತುವುದು ಪಂಪನಲ್ಲಿ ಕಾಣುವಂತೆ ಇನ್ನು ಯಾರಲ್ಲಿಯೂ ಕಾಣಿಸುವುದಿಲ್ಲ. 'ವಾಗ್ದೇವಿಯ ಭಂಡಾರದ ಮುದ್ರೆಯನ್ನು' ತಾನು ಒಡೆದು, ಹಿಂದಿನ ಕವಿಶ್ರೇಷ್ಠರು ಯಾರೂ ಮಾಡದೇ ಇರುವುದನ್ನು ತಾನು ಮಾಡಿದುದಾಗಿ ರನ್ನ ಹೇಳಿಕೊಳ್ಳುತ್ತಾನೆ. ಅವನೂ ಸಮರ್ಥ ಕವಿಯೇ. ಅವನದು ಬಂಡವಾಳವಿಲ್ಲದ ಬಡಾಯಿಯಲ್ಲ. ಆದರೆ ಪಂಪನ ಜೊತೆ ಸಮ ಹೋಲಿಸುವ ಕವಿ ಇವನಲ್ಲ. ಪಂಪನಿಂದ ಸಾಕಷ್ಟು ಪ್ರಭಾವಕ್ಕೆ ಒಳಗಾಗಿರುವ ಕವಿ ರನ್ನ.

ಇನ್ನು ಕುಮಾರವ್ಯಾಸನೂ ಪಂಪನಂತೆ ಮಹಾಕವಿ, ನಿಜದ ಮಹಾಕವಿ.. ಈ ಬಗ್ಗೆ ನನಗೆ ಅನುಮಾನವಿಲ್ಲ. ಆದರೆ ಅವನ ಸಮಸ್ಯೆಗಳೇ ಬೇರೆ. ಅವನನ್ನು ನೋಡಬೇಕಾದ ರೀತಿಯೂ ಬಹುಶಃ ಬೇರೆ. 'ಕಾವ್ಯಕೆ ಗುರು'ವೆನಲು ರಚಿಸಿದನು ಕುವರವ್ಯಾಸ ಭಾರತವ ಎಂದು ಆತ ಹೇಳಿಕೊಂಡಿರುವ ಮಾತಿನಲ್ಲಿ ಸತ್ಯ, ಸತ್ವ ಎರಡೂ ಇವೆ. ಕುಮಾರವ್ಯಾಸ ಭಾರತದಲ್ಲಿ ಕಥಾಶಿಲ್ಪದಲ್ಲಿ ಸಮಸ್ಯೆ ಇಲ್ಲ. ಇದ್ದಂತಿಲ್ಲ. ಆದರೆ ಕೃತಿಶಿಲ್ಪದ ವಿಷಯದಲ್ಲಿ ನನ್ನ ತಕರಾರಿದೆ. ಬಹಳ ಕಾಲದಿಂದ ಇದೆ. ನನ್ನ ಆ ತಕರಾರಿನ ಪ್ರಸ್ತಾಪವನ್ನು ನಾನು ಕುಮಾರವ್ಯಾಸನ ಗದುಗಿನಲ್ಲಿ ಮಾಡಿದ್ದೆ. ಗೋಪಾಲಕೃಷ್ಣ ಅಡಿಗ, ಕೀರ್ತಿನಾಥ ಕುರ್ತಕೋಟಿಯವರು ಉಪಸ್ಥಿತರಿದ್ದ ಸಭೆಯಲ್ಲಿ ಈ ತಕರಾರನ್ನು ಒಂದು ವಿಮರ್ಶೆಯ ಪ್ರಶ್ನೆಯಾಗಿ ಎತ್ತಿದ್ದೆ. ತಕ್ಕಮಟ್ಟಿಗೆ ವಿವರವಾಗಿಯೆ ಪ್ರಸ್ತಾಪಿಸಿದ್ದೆ. ಆಗಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯ ಸಮಾರೋಪ ಸಮಾರಂಭದಲ್ಲಿ ಕುರ್ತಕೋಟಿಯವರು ತಮ್ಮ ಭಾಷಣದಲ್ಲಿ ನನ್ನ ಆ ಅಭಿಪ್ರಾಯವನ್ನು ಪ್ರಸ್ತಾಪಿಸಿ ಅಲ್ಲಗಳೆದಿದ್ದರು.

ಕವಿಯ ಹೆಗಲಮೇಲೆ 'ಭಕ್ತ' ಸವಾರಿ ಮಾಡುತ್ತಿರುವಂತೆ ಕಾವ್ಯದ ರಚನಾಶಿಲ್ಪ ಇರುವುದರಿಂದ ವರ್ಡ್ಸ್‌ವರ್ತ್ ಹೇಳುವ **willing suspension of disbelief** ಇಚ್ಛಾಪೂರ್ವಕವಾಗಿ ಅಪನಂಬಿಕೆಯನ್ನು ಅಮಾನತ್ತಿನಲ್ಲಿಡುತ್ತ ಸಾಗುವ ಭಾವಭಾರದಲ್ಲಿ ಸಹೃದಯ ಇರುವಂತಾಗುತ್ತದೆ.

ಕುಮಾರವ್ಯಾಸ ಭಾರತ ಹತ್ತು ಪರ್ವಗಳ ಕಾವ್ಯ. ಮೊದಲಿನ ಐದು ಪರ್ವಗಳಿಗೆ 'ಪೂರ್ವಪಂಚಕ', ನಂತರದ ಐದು ಪರ್ವಗಳಿಗೆ 'ಯುದ್ಧಪಂಚಕ' ಎಂದು ಹೇಳುವುದುಂಟು. ಪೂರ್ವಪಂಚಕವನ್ನು ಒಂದು ಪರಿಪ್ರೇಕ್ಷ್ಯಕ್ಕೆ (perspective) ಒಳಪಡಿಸಿಕೊಂಡು ಪಾಂಡವರ ಹಾಗೂ ಕೌರವರ ಪರಾಕ್ರಮ, ಸಾಮರ್ಥ್ಯ ಕುರಿತು ಪರಿಭಾವಿಸಬೇಕು. ಪಾಂಡವರ ಪರಾಕ್ರಮ, ಕೌರವರ ಪೌರುಷ ಪರಾಕ್ರಮಗಳಿಗಿಂತ ಹೆಚ್ಚಿನ ತೂಕದ್ದು. ಅಷ್ಟೇ ಅಲ್ಲ, ಅದು ವೃದ್ಧಿಸುತ್ತಾ ಹೋಗುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಯಕ್ಷಪ್ರಶ್ನೆ, ಪಾಶುಪತಾಸ್ತ್ರ ಪ್ರಸಂಗಗಳನ್ನು ಗಮನಿಸಿದರೆ ಇದು ನಿಚ್ಚಳವಾಗುತ್ತದೆ. ಅದು ಯುದ್ಧಪಂಚಕಕ್ಕೆ ಬರುತ್ತಿದ್ದಂತೆ, ಉದ್ಯೋಗಪರ್ವ ದಾಟಿ ಭೀಷ್ಮಪರ್ವಕ್ಕೆ ಪದಾರ್ಪಣೆ ಮಾಡುತ್ತಿದ್ದಂತೆ ಅಥವಾ ದುರ್ಯೋಧನನ ಆಸ್ಥಾನದಲ್ಲಿ ಶ್ರೀಕೃಷ್ಣನ ವಿಶ್ವರೂಪ ದರ್ಶನದ ಭಗವನ್ನಾಟಕದ ಸಂದರ್ಭ. 'ಎನ್ನ ಹೃದಯದೊಳಿರ್ದು ಮುರಿವನು/ ಗನ್ನದಲಿ ಸಂಧಿಯನು.. .. / ಮುರಹರನು ಹರಿಯೆಂದು ಮುನ್ನವೆ ಅರಿದಿಹೆನು.'

ಪೂರ್ವಪಂಚಕದಲ್ಲಿ ಕೌರವ-ಪಾಂಡವರ ನಡುವಿನ ವಿರಸ, ಯುದ್ಧ ಸಿದ್ಧತೆ, ಮನುಷ್ಯ ಮನುಷ್ಯರ ನಡುವಿನ ವಿರಸ, ಯುದ್ಧದ ಕಥೆಯಾದರೆ, ಯುದ್ಧಪಂಚಕದ ಪೂರ್ವ ಪೀಠಿಕೆಯಾಗಿ ವಿಶ್ವರೂಪ ದರ್ಶನ ದೃಶ್ಯ ಬರುತ್ತಿದ್ದಂತೆ, ಮನುಷ್ಯ ಮತ್ತು ದೈವದ ನಡುವಿನ ವಿರಸ ಯುದ್ಧವಾಗಿ ಪರಿವರ್ತಿತವಾಗಿಬಿಡುತ್ತದೆ. ಯುದ್ಧ ಪಂಚಕದುದ್ದಕ್ಕೂ ದೈವ ಮಹಿಮೋನ್ನತಿಯ ಕಥೆಯಾಗುತ್ತದೆ. ಪಾಂಡವರ ಮಾನವೀಯ ಸತ್ವ ಕೃಷ್ಣನ ದೈವೀಸತ್ವದೊಂದಿಗೆ ಒಡಬೆರೆಯುತ್ತದೆ. ಮೊದಲಿನಿಂದಲೂ ಪಾಂಡವರಲ್ಲಿದ್ದ ಮನುಷ್ಯ ಸಾಮರ್ಥ್ಯ, ಪೌರುಷ ಪರಾಕ್ರಮಗಳನ್ನು ಮೀರಿದ ಪೌರುಷ ಪರಾಕ್ರಮಗಳು ಕೌರವ ಪಕ್ಷದಲ್ಲಿ ಕಾಣಿಸಿಕೊಳ್ಳುತ್ತ ಹೋಗುತ್ತವೆ. ಪಾಂಡವರಲ್ಲಿ ಪೂರ್ವಪಂಚಕದಲ್ಲಿ ಕಾಣಿಸಿಕೊಂಡ ಸತ್ವಾತಿಶಯಗಳು ಪ್ರಕಾಶಗೊಳ್ಳದೆ ಕೃಷ್ಣನ ಮಹಿಮೆ, ಕರುಣೆಗಳು ಮಾತ್ರ ವಿಜೃಂಭಿಸುತ್ತ ಹೋಗುತ್ತವೆ. ನಡೆಯುವುದೆಲ್ಲ ಕೃಷ್ಣನ ಲೀಲೆಯಾಗುತ್ತದೆ; ಪಾಂಡವರ ಪೌರುಷವಾಗುವುದಿಲ್ಲ; ಕೃಷ್ಣ ಕಥೆಯಾಗುತ್ತದೆ. ಹೀಗಾಗಿ ಕಾವ್ಯ ಅನುಭವ ಕಟ್ಟುವ ಕಥೆಯಾಗದೆ, ದೈವಮಹಿಮೆಯ, ಧರ್ಮಮಹಿಮೆಯ ಕಥೆಯಾಗುತ್ತದೆ. ಕಥೆಯೇ ಒಂದು ಆಚರಣೆ (ritual) ಆಗುತ್ತದೆ. ಮನುಷ್ಯರು ಗೌಣವಾಗುತ್ತಾರೆ. ಗೆದ್ದ ಪಾಂಡವರು ಗೆದ್ದದ್ದು ಯಾರನ್ನು, ಕೊಂದದ್ದು ಯಾರನ್ನು?

'ಕಾವನಾತನೆ, ಕೊಲುವನಾತನೆ, ಸಾವನಾತನ ಕೈಯಬಾಯಲಿ... ಭೀತಿ ಬೇಡೆಂದ' ಎಂದು ಧೃತರಾಷ್ಟ್ರನಿಗೆ ದುರ್ಯೋಧನ ಹೇಳಿದ ಮೇಲೆ ಸೋಲು ಸಾವುಗಳು ಅರ್ಥಕಳೆದುಕೊಳ್ಳುತ್ತವೆ.

ಪ್ರಶ್ನೆ: ರಾಜಪ್ರಭುತ್ವವನ್ನು ಒಪ್ಪಿಕೊಂಡೂ ತನ್ನ ಸ್ವೋಪಜ್ಞತೆಯನ್ನು ಪಂಪ ಉಳಿಸಿಕೊಂಡದ್ದು ಹೇಗೆ?

ನಾಯಕ: ಇತ್ತೀಚಿನ 'ಪಂಪಭಾರತವನ್ನು ಮತ್ತೆ ಓದಿದಾಗ' ಎಂಬ ನನ್ನ ಲೇಖನದಲ್ಲಿ ಈ ಪ್ರಶ್ನೆಗೆ ಉತ್ತರವಿದೆ ಎಂದು ಭಾವಿಸಿದ್ದೇನೆ. ಅದು ಗಂಭೀರ ಚರ್ಚೆಯನ್ನು ಅಪೇಕ್ಷಿಸುತ್ತದೆ. ನನ್ನ ವ್ಯಾಖ್ಯಾನವನ್ನು ಒಪ್ಪುವುದು ಬಿಡುವುದು ಬೇರೆ ■

ಪುರೋಹಿತಶಾಹಿ ಎಂಬ ನರಭಕ್ಷಕನ ತಲೆಗೆ ಗುಂಡಿಕ್ಕಬೇಕು



ಬ್ರಾಹ್ಮಣ್ಯ ಅಂದು... ...ಇಂದು

ಬ್ರಾಹ್ಮಣ್ಯದ ಬೇರುಗಳು ಎಲ್ಲಿವೆ? ಹೇಗಿವೆ? ಯಾಕಿವೆ? ಎಂದು ಅಗೆಯುತ್ತಾ ಹೋದಂತೆ ನಾವೇ ಆ ಕೆಸರು ಸುಳಿಯಲ್ಲಿ ಸಿಕ್ಕಿಹಾಕಿಕೊಳ್ಳುವ ಭಯವಾಗುತ್ತದೆ. ದೈನಂದಿನ ವಿದ್ಯಮಾನಗಳಲ್ಲಿ ಅವು ನಮಗರಿವಿಲ್ಲದಂತೆ ಸುತ್ತಿ ಸುತ್ತುತ್ತಿವೆಯೇ ಹೊರತು ಬಿಟ್ಟ ಬಿಡುವುವೆಂಬ ನೆಚ್ಚಿಲ್ಲ. ನಮ್ಮ ಮನೆ ಒಳಗೆ, ಹೊರಗೆ ಎಲ್ಲಾ ಕಡೆ ಆ ಬೇರುಗಳ ಹಿಡಿತಕ್ಕೆ ನಾವು ಸಿಕ್ಕಿಕೊಂಡಿರುತ್ತೇವೆ. ಅಪ್ರಜ್ಞಾಪೂರ್ವಕವಾಗಿ ನಾವು ಆಚರಿಸುವ ಹಬ್ಬಹರಿದಿನಗಳು, ಯಾತ್ರೆ ಜಾತ್ರೆಗಳು, ಮದುವೆ, ನಾಮಕರಣ, ತಿಥಿಸಂಸ್ಕಾರಗಳು, ಪೂಜಾವಿಧಿಗಳು, ಪ್ರವಾಸಕಾಲದಲ್ಲಿ ಎಡತಾಕುವ ಗುಡಿಗೋಪುರ ದೇವಾಲಯಗಳು, ಇವೆಲ್ಲದರಲ್ಲೂ ಮೂರು ನಾಲ್ಕು ಸಾವಿರ ವರ್ಷಗಳಷ್ಟು ಹಳತಾದ ಈ ಬ್ರಾಹ್ಮಣಿಕೆಯ ಬೇರುಗಳೇ ನಮ್ಮ ಕಾಲ ತೊಡರಾಗಿ ಬೀಳಿಸುತ್ತಿವೆ. ನಾವು ಓದುವ ಸಾಹಿತ್ಯ ನೋಡುವ ನಾಟಕ ಸಿನಿಮಾ ಚಿತ್ರಗಳು, ಕೇಳುವ ಸಂಗೀತ ಹಾಗೂ ಗುಡಿಗೋಪುರ ವಾಸ್ತು ಕಟ್ಟಡಗಳಲ್ಲಿ ಕೆತ್ತಿ ಕಡೆದಿರುವ ಭಿತ್ತಿಚಿತ್ರಗಳು ಇತ್ಯಾದಿಗಳಲ್ಲೂ ಕಲೆಯ ಹೊರತಾಗಿ, ಬ್ರಾಹ್ಮಣಿಕೆಯ ಬೇರುಗಳು ಸುತ್ತಿಕೊಂಡಿರುವುದುಂಟು. ಈಗ ಆವಿಷ್ಕಾರಗೊಂಡಿರುವ ವಿಜ್ಞಾನ, ತಂತ್ರಜ್ಞಾನ ಫಲಿತಗಳಾದ ರೇಡಿಯೋ, ಟೀವಿ, ಸೀರಿಯಲ್‌ಗಳು, ಫೇಸ್‌ಬುಕ್, ಇಮೇಲ್ ಮುಂತಾದ ವಿದ್ಯುನ್ಮಾನ ಮಾಧ್ಯಮಗಳಲ್ಲೂ ಈ ಬೇರುಗಳು ನಮ್ಮ ಬುದ್ಧಿಭಾವದ ಆಳಕ್ಕೆ ತಮ್ಮ ಮಾಯಾ ಜಾಲವನ್ನು ಕಾಣದಂತೆ ಇಳಿಬಿಡುತ್ತವೆ. ಸಿನಿಮಾ, ಟೀವಿ ಮಾಧ್ಯಮವಂತೂ ಕುರುಡು ಧರ್ಮ, ಶಾಸ್ತ್ರ ವಿಧಿಪುರಾಣ ಸಂಪ್ರದಾಯಗಳನ್ನು ಬಿತ್ತುವ ಕೇಂದ್ರವಾಗಿವೆ. ಇಲ್ಲೆಲ್ಲ ಶುದ್ಧ ಆಧ್ಯಾತ್ಮ ಯಾವುದು? ಸೋಗಿನ ಬ್ರಾಹ್ಮಣಿಕೆ ಯಾವುದು ಎಂಬುದರ ಪರಿಜ್ಞಾನವೇ ಬಾರದಂತೆ ಜನರನ್ನು ಬೌದ್ಧಿಕ ಗುಲಾಮಗಿರಿಗೆ ತಳ್ಳುತ್ತಿವೆ.

ಅಪ್ಪ ಹಾಕಿದ ಆಲದಮರ ಎಂಬಂತೆ ಮನು ಹೇಳಿದ ಅನೇಕ ವಿಧಿ ಆಚರಣೆಗಳನ್ನು ಇನ್ನೂ ನಡೆಸಿಕೊಂಡು ಹೋಗುತ್ತಿದ್ದೇವೆ. ಆ ಮನು ಹಾಕಿದ ಲಕ್ಷ್ಮಣ ರೇಖೆಯನ್ನು ಇನ್ನೂ ದಾಟದವರಾಗಿದ್ದೇವೆ.

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು? ಎಂಬ ವಿಚಾರವಂತಿಕೆಯನ್ನು ಗಮನಿಸದೆ ಹೋಗುತ್ತಿದ್ದೇವೆ.

ಹಾಗಾದರೆ ಈ ಬ್ರಾಹ್ಮಣ್ಯದ ಒಳಗುಟ್ಟೇನು? ಹೇಗೆ ಇದು ನಮ್ಮನ್ನು ಮರುಳು ಮಾಡುತ್ತದೆ? ಏನಿದರ ಕಣ್ಕಟ್ಟು? ಇದು ಹೇಗೆ ನಮ್ಮ ನಿತ್ಯ ಬದುಕಿನಲ್ಲಿ ವ್ಯಾಪಿಸಿದೆ ಎಂಬುದನ್ನು ಈ ಒಂದು ಮಾತಿನ ನಿದರ್ಶನದಿಂದ ನೋಡೋಣ:


'ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು ಹರ್ಷಕ್ಕಿದೆ ದಾರಿ'

-ಡಿ.ವಿ.ಜಿ

ನಮ್ಮ ಕೆಲವು ರಸ್ತೆ ಸಾರಿಗೆ ಬಸ್ಸುಗಳಲ್ಲಿ ಡಿವಿಜಿಯವರ ಈ ಪದ್ಯ ಭಾಗವಿದೆ. ಇದು ನಮ್ಮ ವೈದಿಕ ಫಿಲಾಸಫಿಯ ಸಾರಸಂದೇಶದಂತಿದೆ. ನಾನು ತುಮಕೂರಿಗೆ ಬರುತ್ತ ಒಮ್ಮೆ ಜರ್ನಲಿಸಂ ಓದುತ್ತಿರುವ ವಿದ್ಯಾರ್ಥಿಗಳನ್ನು ಕುರಿತು ಹೀಗೆಂದರೇನು ಎಂದು ಕೇಳಿದೆ. ಅವರು 'ಏನೋ ಸಾರ್ ಸರಿಯಾಗಿ ತಿಳಿಯಲೊಲ್ಲದು' ಎಂದರು. ಆಮೇಲೆ ವಿಚಾರ ಮಾಡಿದೆವು.

'ಇಲ್ಲಿರುವ ಭಾಗ್ಯವೇ ಹೆಚ್ಚೆಂದು ನಂಬಿ ನೀನು ಅಲ್ಲಿಗೆ ಬಾರೆನು ಎಂಬುದನ್ನು ಬಿಡು. ಹರ್ಷಕ್ಕೆ ಇದೇ ದಾರಿ ಬಾ' ಎಂದು ಕರೆ ಕೊಟ್ಟಿದೆ. ಅಂದರೆ ಈ ಲೋಕದಲ್ಲಿ ಇರುವುದು ನಶ್ವರ, ಅನ್ಯಲೋಕದಲ್ಲಿರುವುದೇ ಶಾಶ್ವತ. ಅದೇ ಮೋಕ್ಷಕ್ಕೆ ದಾರಿ. ದಾಸರು ಎಂದಂತೆ ಇಲ್ಲಿರುವುದು (ಇಹದಲ್ಲಿ) ಸುಮ್ಮನೆ, ಅಲ್ಲಿರುವುದು (ಪರ) ನಮ್ಮ ಮನೆ. ಇದು ವೈರಾಗ್ಯ ಬೋಧನೆ. ಅಂದರೆ ಇಲ್ಲಿ ಶ್ರಮ ವಹಿಸಿ ದುಡಿಯುವುದು, ದುಡಿದದ್ದು ಯಾರಿಗೆ ಸೇರುವುದು? ಅದನ್ನು ಯಾರಿಗೆ ಬಿಟ್ಟು ಹೋಗುವುದು? ಇದಕ್ಕಿಂತ ಉತ್ತಮವಾದ ಸುಖ ಅಲ್ಲಿದೆ. ಆದ್ದರಿಂದ ಅಲ್ಲಿಗೆ ಹೋಗು. ಈ ಸುಖ ಸುಖವಲ್ಲ, ಹಾಗಾದರೆ ಇಲ್ಲಿ ದುಡಿದದ್ದನ್ನು ಏನು ಮಾಡಬೇಕು? ಅದಕ್ಕೂ ವಿಲೇವಾರಿ ಮಾರ್ಗೋಪಾಯಗಳಿವೆ. ಅದನ್ನು ನಮ್ಮ ಶಾಸ್ತ್ರಪುರಾಣ ಕಾವ್ಯ ಕರ್ತೃಗಳು ಹೀಗೆ ಹೇಳುತ್ತಾರೆ. ಉದಾಹರಣೆಗೆ ನಮ್ಮ ಜನಪ್ರಿಯ ಕವಿ ಕುಮಾರವ್ಯಾಸನ ಭಾರತದಲ್ಲಿ ಬರುವ ವಿದುರ ನೀತಿಯಲ್ಲಿ ಇಂತ ಅನೇಕ ಸಂಗತಿಗಳಿವೆ. ಭೂಸುರರನ್ನು (ಎಂದರೆ ಬ್ರಾಹ್ಮಣರನ್ನು) ಉಪಾಸನೆ ಮಾಡಿದರೆ ನೀನು ಕೃತಕೃತ್ಯನಾಗುವೆ. ಪುಣ್ಯ ಲಭ್ಯವಾಗುತ್ತದೆ. ಆದ್ದರಿಂದ ಇರುವುದೆಲ್ಲವ ಕೊಟ್ಟು (ದಾನ) ಬಿಡಬೇಕಂತೆ.

ವಿದುರ ನೀತಿಯಲ್ಲಿರುವ ದೊರೆಗೆ ಕೊಡುವ ಇನ್ನೊಂದು ಉಪದೇಶ ಹೀಗಿದೆ:



ವೈರಿ ರಾಜರನ್ನು ಯುದ್ಧದಲ್ಲಿ ಗೆದ್ದು, ಅವರ ಐಶ್ವರ್ಯವನ್ನೆಲ್ಲಾ ಸೂರೆಮಾಡಿ, ಅದನ್ನು ತಂದು ಇಲ್ಲಿ ಬ್ರಾಹ್ಮಣರಿಗೆ ಹಂಚಬೇಕಂತೆ. ಅದರಿಂದ ಎಷ್ಟು ಒಳ್ಳೆಯದಾಗುತ್ತದೆ ಎಂದುಕೊಂಡಿದ್ದೀಯ? ನೂರು ಯಜ್ಞ ಮಾಡಿದಷ್ಟು ಒಳ್ಳೆಯದಾಗುತ್ತದೆ. ಆದರೆ ಆ ವೈರಿಗಳು ಯಾರು? ನಮ್ಮ ನೆರೆಹೊರೆಯ ತೆಲುಗು, ತಮಿಳು, ಮಲೆಯಾಳಿಗಳಲ್ಲವೆ? ಅಲ್ಲಿಯೂ ಬ್ರಾಹ್ಮಣರಿಲ್ಲವೆ? ಅಂದರೆ ಅಲ್ಲಿಂದ ದೋಚಿಕೊಂಡು ಬಂದು ಇಲ್ಲಿರುವ ಬ್ರಾಹ್ಮಣರಿಗೆ ಹಂಚಿ ಬಿಡುವುದೆ?

ಇದು ಒಂದು ರೀತಿ ನಮ್ಮ ಡಕಾಯಿತರು ಮಾಡುವ ಕೆಲಸವಲ್ಲವೆ ಎನ್ನುತ್ತಾರೆ ಕುವೆಂಪು.


ಹೀಗೇ ವಿದುರರು ಮುಂದುವರಿದು "ಅರಸನಾದವನು ವರ್ಣೋತ್ತಮರಿಗೆ ಹೆದರಿಕೊಂಡಿರಬೇಕು. ಒಂದು ವೇಳೆ ಅವನೇನಾದರೂ ಇವರ ವಿರೋಧ ಕಟ್ಟಿಕೊಂಡರೆ ಪ್ರವಾಹಕ್ಕೆ ಕೊಚ್ಚಿಹೋಗುವ ಮರಳಕಟ್ಟೆಯಂತೆ ಅವರ ಸ್ಥಿತಿ" ಎನ್ನುತ್ತಾನೆ. ನಮ್ಮ ರಾಜಕಾರಣಿಗಳು ಇನ್ನೂ ಇದೇ ಸ್ಥಿತಿಯಲ್ಲಿದ್ದಾರೆ. ಪಾರ್ಟಿ ಆಫೀಸು, ವಿಧಾನಸೌಧ ಹಾಗೂ ಖಾಸಗಿಯಾಗಿ ಹೋಮ, ಹವನ, ಪೂಜೆ, ವಾಸ್ತು ಬದಲಾವಣೆ, ತೀರ್ಥಯಾತ್ರೆ, ಸ್ವಾಮಿಗಳಿಗೆ ಗುರುವಂದನೆ ಮುಂತಾದುದರಲ್ಲಿ ನಿರತರಾಗಿದ್ದುಕೊಂಡು ಮತದಾರರ ಸಂಕಷ್ಟಗಳನ್ನೇ ಮರೆತುಬಿಡುತ್ತಾರೆ ಮತ್ತು ಅಮಾಯಕ ಜನರಿಗೆ ಇವರು ಮೇಲ್ಪಂಕ್ತಿಯಾಗುತ್ತಾರೆ.

ಸಾಲ ಮಾಡಿಯಾದರೂ ತಿರುಪತಿ, ಧರ್ಮಸ್ಥಳ, ಸುಬ್ರಹ್ಮಣ್ಯ, ರಾಘವೇಂದ್ರ ಸ್ವಾಮಿ ಮಂತ್ರಾಲಯ... ಹೋಗಿಬರಬೇಕೆಂಬ ಮನಃಸ್ಥಿತಿ ಬರಲು ಬ್ರಾಹ್ಮಣಿಕೆ... ಕಾರಣ. ದೇವರ ಹುಂಡಿಗಳಿಗೆ, ಮಂಗಳಾರತಿ ... ಹಣ ಹಾಕುವುದಕ್ಕಿಂತ ಅನಾಥಶ್ರಮಕ್ಕೆ, ಭಿ... ನಿರಾಶ್ರಿತ ಮಕ್ಕಳಿಗೆ ಕೊಡುವುದು ಲೇಸು.

ಇದೆಲ್ಲಕ್ಕೂ ಮುಂಚೆ ವೈಚಾರಿಕ ಬುದ್ಧಿ, ... ದೃಷ್ಟಿ ಬೆಳೆಸಿಕೊಳ್ಳಬೇಕು. ಮತಮೌಢ್ಯಗಳನ್ನು ... ನಿಲ್ಲುವುದನ್ನು ಯುವಜನ ರೂಢಿಸಿಕೊಳ್ಳಬೇಕು.

ಕೆಲವು ಯುವಕರು ಮತಮೌಢ್ಯಕ್ಕೆ ಒಳಗಾದ... ಕೆಲವರು ಬೇರೆ ಅತಿರೇಕಕ್ಕೆ ಹೋಗುತ್ತಾರೆ. ... ಧರ್ಮಶಾಸ್ತ್ರಗಳ ಮೇಲೆ ಹರಿಹಾಯುತ್ತಾರೆ. ಆದರೆ ... ಅನವಶ್ಯಕ. ಹಾಗೆ ಮಾಡಿದರೂ ಪ್ರಯೋಜ... ದೇವರಿದ್ದಾನೆಂಬುದು ಸರಿಯೋ ದಿಟವೋ ಆ ಪ್ರ... ಬಿಟ್ಟು, ದೇವರ ಹೆಸರಿನಲ್ಲಿ ಇರುವ ಮತಮೌ... ಕಿತ್ತು ಹಾಕಬೇಕು.

ಕಡೆಯದಾಗಿ ಇನ್ನೊಂದು ಮಾತನ್ನು ಹೇಳಬೇ... ಬ್ರಾಹ್ಮಣರಿಗಿಂತ ನವ ಬ್ರಾಹ್ಮಣರಾಗಿರುವ ಶೂದ್ರರು ... ಅಪಾಯ. ಉದಾಹರಣೆಗೆ ಗುಜರಾತಿನ ಮುಖ... ನರೇಂದ್ರ ಮೋದಿ ಬ್ರಾಹ್ಮಣನಲ್ಲ, ಆದರೆ ಹುಟ್ಟಾ... ಪರಿವಾರದ ಸ್ವಯಂಸೇವಕ, ಹಿಂದೂತ್ವವಾದಿ, ಮ... ದ್ವೇಷಿ. ಇವನಂಥವರು ಅಧಿಕಾರಕ್ಕೆ ಬಂದರೆ ಏನ... ಎಂಬುದನ್ನು 2002ರಲ್ಲಿ ನಡೆದ ಗುಜರಾತ್ ಹತ್ಯಾ... ತಿಳಿಸುತ್ತದೆ. ಸಾರಾಂಶವೆಂದರೆ ಬ್ರಾಹ್ಮಣ್ಯದ ಮೋ... ಉಳಿದ ಶೂದ್ರ ವರ್ಗ ಅನುಕರಿಸುವುದರಿಂದ ಸಂಭ... ಅಪಾಯ ಎಂತಹುದು ಎಂಬುದಕ್ಕೆ ಇವನ ಆಳ್ವಿಕೆ ನಿ... ಆದ್ದರಿಂದ ನವ ಬ್ರಾಹ್ಮಣರಾಗುವ ಶೂದ್ರರ ಬ... ವಿಚಾರವಂತರು ಎಚ್ಚರದಿಂದಿರಬೇಕು. ಒಟ್ಟಾರೆ ಜ... ಬೆಳೆಯಬೇಕಾದರೆ, 'ಪುರೋಹಿತಶಾಹಿ ಎಂಬುದು ... ಅದರ ಹಣೆಗೆ ಗುಂಡಿಕ್ಕಬೇಕು. ಅದಕ್ಕೂ ವ... ನೀನು ನಿನ್ನ ತಲೆಗೆ ಗುಂಡಿಕ್ಕಿಕೊಳ್ಳಬೇಕು' ಎನ್ನುತ್ತಾರೆ ಕುವೆಂಪು. ಆದ್ದರಿಂದ ಮೊದಲು ನಾವು ವಿಚಾರ ವಂತರಾಗಿ ಜನತಾ ಪ್ರಜ್ಞೆಯನ್ನು ಬೆಳಗಿಸಬೇಕು. ಆಮೇಲೆ ಬ್ರಾಹ್ಮಣ್ಯದ ಬೇರುಗಳನ್ನು ತುಂಡರಿಸಬೇಕು.



■ ಪ್ರೊ. ಶಿವರಾ...

ಬ್ರಾಹ್ಮಣ್ಯದ ಕೈಚಳಕ

ಈ ಬ್ರಾಹ್ಮಣ್ಯದ [illegible] ... ಮುಟ್ಟುವ ವಿಚಾರ ಬಿಡಿ. ... [illegible] ... ಮುಕ್ಕಳನ್ನು ಕರೆದುಕೊಂಡು ನೇರವಾಗಿ ಊರ ದೇವಸ್ಥಾನಕ್ಕೆ ಮೆರವಣಿಗೆ ಹೋಗುತ್ತಿದ್ದರು. ಆಗೆಲ್ಲ ನಾವು ಅಸ್ಪೃಶ್ಯ ಮಕ್ಕಳು ದೇವಸ್ಥಾನದ ಹೊರಗೇ ಅನಾಥರ ಹಾಗೆ [illegible] ಉಳಿದವರೆಲ್ಲ (ದೇವಸ್ಥಾನಕ್ಕೆ ಪ್ರವೇಶ [illegible]) ದೇವಸ್ಥಾನದಿಂದ ಬಂದ ಮೇಲೆ ನಾವೆಲ್ಲ [illegible] ಈ ಬಗ್ಗೆ ತಿಳುವಳಿಕೆ ಇಲ್ಲದ ನಮಗೆ [illegible]

[illegible]

... ಓದುವುದು ... ಭಗವದ್ಗೀತೆಯ ಶ್ಲೋಕ ಮತ್ತು ಅದರ ತಾತ್ಪರ್ಯವನ್ನು ಓದುವುದು ಅತನ ಇನ್ನೊಂದು [illegible] ... ಆ ವರ್ಷ ನನಗೆ ಭಗವದ್ಗೀತೆಯನ್ನು [illegible] ... ಕೊಟ್ಟಿದ್ದರು. ಅದರಲ್ಲಿ ಯಾವುದಾದರೊಂದು ವಚನವನ್ನು ... ಮಾಡಿ ... ಅದರ ... ಈಗ ಅರ್ಥವಾಗುತ್ತಿದೆ. ಶೂದ್ರ ಸಂಸ್ಕೃತ ಓದಬಾರದಲ್ಲ, ... ಅತನ ನಾಲಿಗೆ ಕತ್ತರಿಸಬೇಕೆಂದು ಮನು ತನ್ನ ... ಶಾಸನ ಮಾಡಿದ್ದಾನಲ್ಲ. ಅದಕ್ಕಾಗಿ ನನ್ನ ... ಶಿಕ್ಷಕರು ನಾನು ಭಗವದ್ಗೀತೆ ಓದುವುದನ್ನು ... ತಪ್ಪಿಸಿದ್ದರು. ಆಗ ನಾನು ತಿಳಿದಂತೆ ... ಯಾರೂ ಬ್ರಾಹ್ಮಣ ... ಅವರ ಬ್ರಾಹ್ಮಣರಿಗಿಂತಲೂ ಮಡಿವಂತರಾದ ಇತರ ಶಿಕ್ಷಕರಿಂದ ಇಂಥದೊಂದು ಕುಕೃತ್ಯ ನಡೆದುಹೋಗಿತ್ತು! ಈ ಬ್ರಾಹ್ಮಣ್ಯದ ಚಿತ್ತ ತಳಿಗೆ ಅಡರಿ ಹೋದರೆ ಬ್ರಾಹ್ಮಣೇತರರೂ ಅದೇ ದಾರಿ ಹಿಡಿಯುತ್ತಾರೆ ಎನ್ನುವುದಕ್ಕೆ ಇದೊಂದು ನಿದರ್ಶನ ಮಾತ್ರ.

ಚಿಕ್ಕವರಾಗಿದ್ದಾಗ ನಮ್ಮ ಮೇಲೆ ಕಣ್ಣೆದುರಿಗೇ ಶೋಷಣೆಯಾಗುತ್ತಿದ್ದರೂ ಯಾಂತ್ರಿಕವಾಗಿ ಅದನ್ನೆಲ್ಲ ಅರಿವಿಲ್ಲದೆಯೇ ಒಪ್ಪಿಕೊಂಡ ಮುಗ್ಧತೆಯಲ್ಲಿ ಮುಳುಗಿರುತ್ತಿದ್ದವು. ಪ್ರತಿಭಟನೆಯ ದನಿ, ಶಕ್ತಿ ಎರಡೂ ನಮಗಿಲ್ಲವಾಗಿತ್ತು! ಹೀಗೆ ದೇವರು, ದೇವಸ್ಥಾನ, ಅಲ್ಲಿಯ ಆಡಳಿತ ವ್ಯವಸ್ಥೆ, ಪರಂಪರೆ, ಸಂಪ್ರದಾಯ ಎಲ್ಲವೂ ಸಮ್ಮಿಳಿತಗೊಂಡು. ಅವೆಲ್ಲದರ ಹಿಂದೆ ಬ್ರಾಹ್ಮಣ್ಯ ಅಥವಾ ಪುರೋಹಿತಶಾಹಿ ತನ್ನ ಕಾಣದ ಕೈಚಳಕ ತೋರಿಸಿ ನಮ್ಮ ಮೇಲೆ ಮಂಕುಬೂದಿ ಎರಚಿತ್ತು.

■ ಕೇಶವ ಪೆರಾಜೆ, ಮಡಿಕೇರಿ

ಅಡ್ಡಪಲ್ಲಕ್ಕಿ, ಶ್ವಾನ ಪಲ್ಲಕ್ಕಿಗಳಿಗಿಂತ ವೈಚಾರಿಕ ಉತ್ಸವಗಳು ಮುಖ್ಯ

ಒಂದು ಪತ್ರ

ಇಂದು ನಾವೆಲ್ಲರೂ ಬದುಕುತ್ತಿರುವುದು 21ನೇ ಶತಮಾನದಲ್ಲಿ. ಈ ವೈಜ್ಞಾನಿಕ ಯುಗದಲ್ಲಿ ವಿಜ್ಞಾನ ತಂತ್ರಜ್ಞಾನ ನಾಗಾಲೋಟದಲ್ಲಿ ಬೆಳವಣಿಗೆಯಾಗುತ್ತಿದ್ದರೂ, ಚಂದ್ರನ ಮೇಲೆ ಮಾನವ ಪಾದಾರ್ಪಣೆ ಮಾಡಿದ್ದರೂ, ಕಂಪ್ಯೂಟರ್ ಇಂಟರನೆಟ್‌ನಂತಹ ಆಧುನಿಕ ಯಂತ್ರೋಪಕರಣಗಳನ್ನು ಸಾಕಷ್ಟು ಬಳಸುತ್ತಿದ್ದರೂ, ಇಂದಿಗೂ ಮೂಢನಂಬಿಕೆ, ಸಂಪ್ರದಾಯ, ಕಂದಾಚಾರದಂತಹ ಹಳೆಯ ಆಚಾರವಿಚಾರಗಳು ನಮ್ಮ ಬೆನ್ನು ಬಿಟ್ಟಿಲ್ಲದಿರುವುದು ನಿಜಕ್ಕೂ ನಾಚಿಕೇಗೇಡಿನ ಸಂಗತಿಯಾಗಿದೆ.

ಇತ್ತೀಚೆಗೆ ರಾಜ್ಯಾದ್ಯಂತ ಸುದ್ದಿಯಲ್ಲಿರುವುದು ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕು. ಇಲ್ಲಿ ಮಾನವನಿಗೆ ಅಪಮಾನ ವೆಸಗುವ ಅಡ್ಡಪಲ್ಲಕ್ಕಿ ಮೆರವಣಿಗೆ ಈ ವರ್ಷ ಅಕ್ಟೋಬರ್ 5 ರಿಂದ 14 ರವರೆಗೆ ನಡೆಯಲಿದೆ. ಇದಕ್ಕೆ ಒಂದು ಗುಂಪು ವಿರೋಧ ವ್ಯಕ್ತಪಡಿಸಿ ಶ್ವಾನಗಳ ಉತ್ಸವ ಮಾಡುವುದಾಗಿ ಘೋಷಿಸಿದೆ.

ಅಡ್ಡಪಲ್ಲಕ್ಕಿ ಉತ್ಸವವು ಮಾನವ ಕುಲಕ್ಕೆ ಅನಿಷ್ಟವಾದುದಲ್ಲವೇ? ಮಾನವ ಹಕ್ಕುಗಳ ಉಲ್ಲಂಘನೆಯಾಗುವುದರ ಮೂಲಕ ಅನಾಗರಿಕ ಸಮಾಜ ಸೃಷ್ಟಿಯಾಗುವುದಿಲ್ಲವೇ? ಇಂತಹ ಅಡ್ಡ ಪಲ್ಲಕ್ಕಿ ಉತ್ಸವವು ಉಡುಪಿನಲ್ಲಿ ಪ್ರತಿ ವರ್ಷ ನಡೆಯುವ ಮಡೆಸ್ನಾನಕ್ಕಿಂತ ಘೋರ ಮೂಢನಂಬಿಕೆಯಲ್ಲವೇ?

"ಬಿಟ್ಟಿತ್ತು ಸೂರ್ಯನಿಗೆ ಹಿಡಿದ ಗ್ರಹಣ ನಾಲ್ಕು ಗಂಟೆಯ ನಂತರ, ಆದರೆ ಬಿಡುತ್ತಲೇ ಇಲ್ಲ ನಮ್ಮ ಜನರ ಬುದ್ಧಿಗೆ ಹಿಡಿದ ಮೌಢ್ಯದ ಗ್ರಹಣ ಯುಗಯುಗಗಳು ಕಳೆದರೂ" ಎಂದು ಸ್ವಾಮಿ ವಿವೇಕಾನಂದರು... ಮಾತು ಇಂದಿಗೂ ಪ್ರಸ್ತುತವಾಗಿದೆ.

ರಾಷ್ಟ್ರಕವಿ ಕುವೆಂಪು "ಗುಡಿ ಚರ್ಚು ಮ... ಬಿಟ್ಟು ಹೊರಬನ್ನಿ, ಬಡತನವ ಬುಡಮಟ್ಟ ... ಮೌಢ್ಯತೆಯ ಮಾರಿಯನ್ನು ಹೊರದೂಡಲೈ ತನ್ನಿ ... ದೀಲಿಗೆಯ ಹಿಡಿದು ಬನ್ನಿ" ಎಂದು ಹೇಳಿದ್ದರು... ನಮ್ಮ ಜನ ವಿದ್ಯಾವಂತರಾದರೂ ಬದಲಾಗದೇ ... ದುಃಖಕರ ಸಂಗತಿ.

ಮನುಷ್ಯನಿಗೆ ನಂಬಿಕೆ ಮುಖ್ಯ, ಆದ... ಯಾವುದೇ ವಿಷಯವಿರಲಿ ಸತ್ಯದ ... ಹಚ್ಚಿ ವಿಮರ್ಶೆ ಮಾಡಿ ನಂಬಬೇಕ... ಬೌದ್ಧ ಧರ್ಮದ ಸ್ಥಾಪಕ ಗೌತಮ... ಕ್ರಿ.ಪೂ. 4ನೇ ಶತಮಾನದಲ್ಲಿ ... ಆ ಮಾತು ಇಂದಿಗೂ ... ಅವಶ್ಯಕ.

ಮಹಾರಾಷ್ಟ್ರದಲ್ಲಿ ಮೂಢನ... ವಿರುದ್ಧ ಆಂದೋಲನವನ್ನೇ ಕಟ್ಟಿದ್ದಕ್ಕೆ ದಾಬೋಲ್ಕರ್ ತಮ್ಮ ಜೀವವನ್ನೆ ಬಲಿ ಕೊಟ್ಟರು. ಎಚ್ಚೆತ್ತ ಅಲ್ಲಿನ ಸರ್ಕಾರವು ಮೂಢನಂಬಿಕೆ ... ಕಾನೂನನ್ನು ಜಾರಿಗೆ ತಂದಿತು. ನಮ್ಮ ರಾಜ್ಯದಲ್ಲೂ ಬೇಗ ಮೂಢನಂಬಿಕೆಗಳ ವಿರುದ್ಧ ಕಾಯಿದೆಯನ್ನು ತರಬೇಕಿದೆ.

ಅಡ್ಡಪಲ್ಲಕ್ಕಿ ಮತ್ತು ಶ್ವಾನ ಪಲ್ಲಕ್ಕಿಗಳಿಗಿಂತ ... ಉತ್ಸವಗಳ ಅಗತ್ಯತೆ ಈಗಿದೆ.

- ಡಿ.ವಿ.ಭೀಮಾಶಂಕರ ಪಾಣೆ...
ಗು...

...ದ್ಯುತ್ ಖರೀದಿಯ ಡೀಲ್



...ರ್ಪೊರೇಟ್ ಕುಳ ಗೌತಮ ಆದಾನಿ ಅಂದರೆ ...ದಿಗೆ ಪಂಚಪ್ರಾಣ. ಈ ಪರಮಾಪ್ತ ಮಿತ್ರನಿಗೆ ...ರು ಕೋಟಿ ರೂ. ಲಾಭ ಬಾಚಿಕೊಳ್ಳಲು ಅವಕಾಶ ...ಟ್ಟಿದ್ದಾನೆ ಮೋದಿ. ಸುಮಾರು ರೂ. 23,625 ...ಟಿಗಳಷ್ಟು ದುಡ್ಡು ಅದು ಹೇಗೆ ಆದಾನಿ ...ಳಿಯಲಿದೆ ಎಂಬ ಕತೆ ಇಲ್ಲಿದೆ. 2006ರಲ್ಲಿ ...ರಾತ್ ರಾಜ್ಯದಲ್ಲಿ ತೀವ್ರ ವಿದ್ಯುತ್ ಅಭಾವ ...ಣಿಸಿತ್ತು. ಆಗ ಟಾಟಾ ಕಂಪೆನಿಯೊಂದರಿಂದ ಪ್ರತಿ ...ಟಿಗೆ ರೂ. 2.26ರ ದರದಲ್ಲಿ 600 ಮೆಗಾವಾಟ್ ...ತ್ ಖರೀದಿಸಲು ಒಪ್ಪಂದ ಮಾಡಿಕೊಳ್ಳಲಾಯಿತು. ...ಕೆಲವೇ ಸಮಯದಲ್ಲಿ ಅದಾನಿ ಕಂಪೆನಿಗಳಿಂದ ...0 ಮೆ.ವಾ. ವಿದ್ಯುತ್ ಖರೀದಿಸಲು ...ರ್ಣಿಸಲಾಯಿತು. 1000 ಮೆ.ವಾ. ರೂ. 2.89ರ ...ಲ್ಲಿ; 1000 ಮೆ.ವಾ. ರೂ. 2.35ರ ದರದಲ್ಲಿ, ...ಪ್ರತಿ ಯೂನಿಟಿಗೆ ತಲಾ 63 ಮತ್ತು 9 ಪೈಸೆ ...ರಿ ದರದಲ್ಲಿ. ಈ ದರ ವ್ಯತ್ಯಾಸಗಳ ಪರಿಣಾಮವಾಗಿ ...ದಾನಿ ಕಂಪೆನಿಗಳು 25 ವರ್ಷಗಳಲ್ಲಿ 15000 ...ಮ ಯೂನಿಟ್ ವಿದ್ಯುತ್ ಸರಬರಾಜು ಮಾಡುವಾಗ ...ದಾನಿ ಕಿಸೆಗೆ ಅನಾಯಾಸವಾಗಿ ರೂ. 23,625 ...ಬೀಳಲಿದೆ. ನಷ್ಟ ಯಾರಿಗೆ? ಗುಜರಾತ್ ಸರ್ಕಾರಕ್ಕೆ, ...ತ್ ಜನತೆಗೆ.

(ಆಧಾರ: ರಾಜೀವ್ ಕುಮಾರ್, *rajeev.kumar@gulail.com*)


ಶಿಕ್ಷಣ ಬುರ್ನಾಸು ಅಂಕಿಅಂಶ

ಪುಣೆಯ ಫರ್ಗ್ಯೂಸನ್ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಲಾಗಿದ್ದ ಜುಲೈ 14ರ ಭಾಷಣವೊಂದರ ವೇಳೆ ಮೋದಿ ಮತ್ತೊಂದು ಬುರ್ನಾಸು ಅಂಕಿಅಂಶ ಕೊಟ್ಟಿದ್ದಾನೆ. ಶಿಕ್ಷಣಕ್ಷೇತ್ರದಲ್ಲಿ ಭಾರತದ ಕಳಪೆ ಹೂಡಿಕೆಯನ್ನು ಚೀನಾದ ಮಹತ್ಸಾಧನೆಯೊಂದಿಗೆ ಹೋಲಿಸುತ್ತಾ "2011ರಲ್ಲಿ ಚೀನಾ ತನ್ನ ಜಿಡಿಪಿಯ ಸುಮಾರು ಶೇಕಡಾ 20ರಷ್ಟನ್ನು (1.65 ಟ್ರಿಲಿಯ ಡಾಲರು) ಶಿಕ್ಷಣಕ್ಕಾಗಿ ವೆಚ್ಚ ಮಾಡಿದ್ದರೆ ಭಾರತ ಸರ್ಕಾರ ಆರಂಭದಲ್ಲಿ 7% ಭರವಸೆ ಕೊಟ್ಟು ನಂತರ ಖರ್ಚು ಮಾಡಿದ್ದು ಬರೀ 4%" ಎಂದು ಹೇಳಿದ್ದಾನೆ. ಆದರೆ ವಾಸ್ತವಾಂಶ ಏನು? ಚೀನಾ ಸರ್ಕಾರದ ಅಧಿಕೃತ ಕ್ರಿಯಾ ವರದಿ, 2013ರ ಪ್ರಕಾರ ಚೀನಾ ಕಳೆದ ಐದು ವರ್ಷಗಳ ಅವಧಿಯಲ್ಲಿ ಶಿಕ್ಷಣಕ್ಷೇತ್ರಕ್ಕಾಗಿ ವ್ಯಯಿಸಿರುವ ಒಟ್ಟು ಮೊತ್ತ 1.25 ಟ್ರಿಲಿಯ ಡಾಲರು ದಾಟುವುದಿಲ್ಲ. ಬೇರೊಂದು ವಿಧದಲ್ಲಿ ಹೇಳುವುದಾದರೆ ಇದು ಜಿಡಿಪಿಯ (2012ರ) ಶೇಕಡಾ 4ರಷ್ಟು ಮಾತ್ರ.


(ಆಧಾರ: ಕಪಿಲ್ ಸಿಬಲ್‌ರ *'Dealing in despair'* ದ ಹಿಂದೂ *30.7.2013*)

ಅವಿವೇಕಿಯ 'ಗಡಿ' ವಿವಾದ

ಒಂದು ದೇಶದ ಪ್ರಧಾನಮಂತ್ರಿ ಸ್ಥಾನದಲ್ಲಿರುವವರ ಮೇಲೆ ಗುರುತರ ಹೊಣೆಗಾರಿಕೆಗಳಿರುತ್ತವೆ. ಕೆಲವೊಮ್ಮೆ ರಾಷ್ಟ್ರ ರಾಷ್ಟ್ರಗಳ ನಡುವಿನ ಸೀಮಾ ವಿವಾದಗಳು ಉಲ್ಬಣಿಸುತ್ತವೆ; ಕೆಲವೊಮ್ಮೆ ಹೊಸಾ ವಿವಾದಗಳು ಉದ್ಭವಿಸುತ್ತವೆ. ಅಂತಹ ಸನ್ನಿವೇಶಗಳಲ್ಲಿ ಸಂಧಾನ ಮಾತುಕತೆಗಳ ಮೂಲಕ ಸಮಸ್ಯೆಗಳನ್ನು ಬಗೆಹರಿಸುವುದು ಹೇಗೆಂದು ಪ್ರಧಾನಿಗೆ ತಿಳಿದಿರಬೇಕಾಗುತ್ತದೆ. ಕೊಡುಕೊಳ್ಳುವ ಮನೋಭಾವ ಬೇಕಾಗುತ್ತದೆ. ಇಲ್ಲವಾದಲ್ಲಿ ಶಾಶ್ವತ ವೈರತ್ವ, ಕಲಹ, ಕಷ್ಟ, ನಷ್ಟ ಗ್ಯಾರಂಟಿ. ಉದಾಹರಣೆಗೆ ಭಾರತ, ಪಾಕಿಸ್ತಾನಗಳ ನಡುವಿನ ರಾಣ್ ಆಫ್ ಕಚ್‌ನ ಸರ್ ಕ್ರೀಕ್ ವಿವಾದವನ್ನೇ ತೆಗೆದುಕೊಳ್ಳಿ. ಪ್ರಧಾನಿ ಕುರ್ಚಿಗಾಗಿ ತಹತಹಿಸುತ್ತಿರುವ ಒರಟು, ಸಮರಶೀಲ ವ್ಯಕ್ತಿತ್ವದ ಮೋದಿ ಈ ಕುರಿತು ಆಡಿರುವ ಮಾತುಗಳು ಆತನಿಗೆ ಕೊಂಚವೂ ರಾಜನೈತಿಕ ಪರಿಜ್ಞಾನವಿಲ್ಲ ಎಂಬುದಕ್ಕೆ ಸಾಕ್ಷಿಯಂತಿವೆ. ಸುಮಾರು 99 ಕಿಮೀ ಉದ್ದವಿರುವ ಈ ಸರ್ ಖಾರಿ ಕುರಿತ ವಿವಾದ ಇಂದು ನಿನ್ನೆಯದಲ್ಲ, ಹಲವಾರು ದಶಕಗಳಷ್ಟು ಹಳೆಯದು. ಇಡೀ ಖಾರಿ ತನಗೆ ಸೇರಿದ್ದು; ಗಡಿರೇಖೆಯನ್ನು ಅದರ ಪೂರ್ವ ಕರಾವಳಿಯಿಂದ ಆರಂಭಿಸಬೇಕೆಂದು ಪಾಕಿಸ್ತಾನ ವಾದಿಸುತ್ತಿದೆ. ಗಡಿ ರೇಖೆ ಖಾರಿಯ ಮಧ್ಯದಲ್ಲಿರಬೇಕೆಂಬುದು ಭಾರತದ ವಾದ. ಉಭಯ ದೇಶಗಳ ಮಧ್ಯೆ ಇದುವರೆಗೆ ಆರು ಸುತ್ತಿನ ಮಾತುಕತೆಗಳು ನಡೆದಿವೆ. ಜಂಟಿಯಾಗಿ ಸರ್ವೆ ಕಾರ್ಯ ನಡೆಸಿ ನಕ್ಷೆಗಳನ್ನು ಹಂಚಿಕೊಳ್ಳಲಾಗಿದೆ. ವಿವಾದ ಅಂತೂಇಂತೂ ಕುಂಟುತ್ತಾ ಕುಂಟುತ್ತಾ ಬಗೆಹರಿಯುವ ದಿಕ್ಕಿನಲ್ಲಿ ಸಾಗುತ್ತಿತ್ತು. ಈ ಮಧ್ಯೆ 2008ರಲ್ಲಿ ಹಠಾತ್ತಾಗಿ ಮುಂಬೈ ದಾಳಿ ನಡೆಯಿತು. ಪರಿಣಾಮವಾಗಿ ಆ ವರ್ಷದ ಡಿಸೆಂಬರ್‌ನಲ್ಲಿ ಆಯೋಜಿಸಲಾಗಿದ್ದ ಸಭೆ ಮುಂದೂಡಲ್ಪಟ್ಟಿತು. ಮೂರು ವರ್ಷಗಳ ಕಾಲ ನೆನೆಗುದಿಗೆ ಬಿದ್ದ ಮಾತುಕತೆಗಳನ್ನು ಪುನರಾರಂಭಿಸುವ ಯತ್ನಗಳಿಗೆ 2011ರಲ್ಲಿ ಚಾಲನೆ ದೊರೆತಿದೆ. ಇದರ ಮಧ್ಯೆ 2012ರಲ್ಲಿ ಮೋದಿ ಮನಮೋಹನ ಸಿಂಗ್ ಅವರಿಗೆ ಒಂದು ಪತ್ರ ಬರೆಯುತ್ತಾನೆ. ಪತ್ರ ಅವರಿಗೆ ತಲುಪುವುದಕ್ಕೂ ಮುನ್ನ ಅದನ್ನು ಬಹಿರಂಗಪಡಿಸುತ್ತಾನೆ. ಸಿಂಗ್ ಅವರು ಪಾಕಿಸ್ತಾನದ ಆಂತರಿಕ




ವ್ಯವಹಾರಗಳ ಸಚಿವ ರೆಹಮಾನ್ ಮಲಿಕ್ ಭಾರತಕ್ಕೆ ಭೇಟಿ ನೀಡಲಿರುವ ಸಂದರ್ಭದಲ್ಲಿ ಸರ್ ಖಾರಿಯನ್ನು ಪಾಕಿಸ್ತಾನಕ್ಕೆ ಹಸ್ತಾಂತರಿಸಲು ಪ್ಲಾನ್ ಮಾಡಿದ್ದಾರೆಂದು ಆಪಾದಿಸುತ್ತಾನೆ. ಮೊದಲನೆಯದಾಗಿ ಗಡಿ ವಿವಾದಗಳು ಆಂತರಿಕ ವ್ಯವಹಾರಗಳ ಖಾತೆಯ ವ್ಯಾಪ್ತಿಗೆ ಬರುವುದಿಲ್ಲ. ಎರಡನೆಯದಾಗಿ ಇಂತಹ ವಿಷಯವನ್ನು ಗೌಪ್ಯವಾಗಿಡಲು ಸಾಧ್ಯವೇ ಇಲ್ಲ; ಪಾಕಿಸ್ತಾನವಂತೂ ಖಂಡಿತ ಟಾಂಟಾಂ ಮಾಡುತ್ತಿತ್ತು. ವೋಟ್‌ಗಳನ್ನು ಬಾಚುವ ಆತುರದಲ್ಲಿರುವ ಮೋದಿ ಇಂಥಾ ಹುರುಳಿಲ್ಲದ ಆರೋಪ ಮಾಡಿ ಮತದಾರರಿಗೆ ತನ್ನ ಅಜ್ಞಾನವನ್ನು ಪ್ರದರ್ಶಿಸಿದ್ದಾನೆ ಅಷ್ಟೆ.



(ಆಧಾರ 'ದ ಹಿಂದು')

...ನ್ನ ತಂಗಿಗೊಂದು ಗಂಡು ಕೊಡಿ'

...ಪ್ರಸನ್ನ ನನ್ನ ವಿದ್ಯಾರ್ಥಿಯಾಗಿದ್ದ ತರುಣ. ಎಲ್ಲ ತರುಣರಂತೆ ...ಹುಚ್ಚುಹೊಳೆಯಾಗಿ ಪ್ರವಾಹವಾಗಿ ಹರಿಯುತ್ತಿದ್ದ ...ಲಕಲ್ಲೋಲ ಮನಸ್ಸಿಗೆ ವ್ಯಕ್ತಿ. 'ನಾನು ನಾಟಕ ...ಶಕನಾಗಬೇಕೆಂದಿದ್ದೇನೆ' ಎಂದು ಈತ ಆಗ ಹೇಳಿದ್ದು ನೆನಪಿದೆ. ...ಮಿಸ್ಟ್ರಿ ಬಿಟ್ಟುಬಿಡುತ್ತೀರಾ?' ಅಂದಿದ್ದೆ. ...ಹೌದು ನನಗೆ ಇದು ಇಷ್ಟವಿಲ್ಲ' ಅಂದಿದ್ದ ಈ ತರುಣ. ...ರಿಸ್ಕ್, ನಾನು ಚಿಕ್ಕವನಾಗಿದ್ದಾಗ ಇಂಥ ರಿಸ್ಕ್ ತೆಗೆದುಕೊಳ್ಳಲು ...ಯುತ್ತಿದ್ದೆ. ಅದಕ್ಕೇ ಹೇಳುತ್ತಿದ್ದೇನೆ. ಸರಿಯಾಗಿ ಯೋಚಿಸಿ ...ನ ತೆಗೆದುಕೊಳ್ಳಿ.'



...ಸನ್ನ ಕೆಮಿಸ್ಟ್ರಿ ಬಿಟ್ಟು ನಾಟಕದ ಬೆನ್ನುಹತ್ತಿ ಹೋದರು. ...ದೇಹದ ಈ ಮಾಧ್ವರ ಹುಡುಗ ಬುದ್ಧಿವಂತ ಎನ್ನುವುದು ...ಗೊತ್ತಿತ್ತು, ಆದರೆ ಎಂದೂ ಈತ ತನ್ನ ನಿರ್ದೇಶನದಲ್ಲಿ ...ಆಡಿಸಿದ್ದನ್ನು ನೋಡಿರಲಿಲ್ಲವಾದ್ದರಿಂದ ನನಗೆ ಈತನ ಪ್ರತಿಭೆಯ ...ನುಮಾನ ಇದ್ದೇ ಇತ್ತು. ಆ ಅನುಮಾನ ಕಮ್ಮಿಯಾಗುವ ದಿನ ...'ಕದಡಿದ ನೀರು' ನಾಟಕವನ್ನು ಪ್ರಸನ್ನ ಚೆನ್ನಾಗಿ ಆಡಿಸಿದರು.

...ಲ್ಲ ತರುಣರಂತೆಯೇ ಪ್ರಸನ್ನ ಕಮ್ಯುನಿಸಂ ಪ್ರಿಯರಾಗಿದ್ದು ಈ ದೇಹದ ...ಬಿರ್ಲಾಗಳನ್ನು ಟೀಕಿಸುವುದು, ವ್ಯಂಗ್ಯವಾಗಿ ನೋಡುವುದು ಕಂಡುಬಂತು. ...ವಧಿಯಲ್ಲಿ ನಾನು ವಿಚಿತ್ರ ರೀತಿಯಲ್ಲಿ ಜೀವನವನ್ನು ...ನೋಡಿಕೊಳ್ಳತೊಡಗಿದ್ದೆ. ಒಮ್ಮೆ ನಾನು ಖಂಡಿಸುತ್ತಿದ್ದ ಗಾಂಧಿ ಈಗ ...ರೀತಿಯಲ್ಲಿ ಸಂದೇಶ ನೀಡತೊಡಗಿದ್ದರು. ಎಲ್ಲ ಸರ್ವಾಧಿಕಾರದ ...ವ್ಯಕ್ತಿಯ ಚಾರಿತ್ರ್ಯದ ಪ್ರತಿಭಟನೆ, ಎಲ್ಲ ಅನ್ಯಾಯದ ವಿರುದ್ಧ ದನಿಯೆತ್ತುವ ... ಶ್ರೀಮಂತ ಬಡವ ಎಲ್ಲರನ್ನೂ ನಿಯಂತ್ರಿಸುವ ಮಾನವೀಯತೆ ...ಶೌರ್ಯ, ವೈಯಕ್ತಿಕ ಪರಿಶುದ್ಧತೆ, ಸರಳ ನಡವಳಿಕೆ, ಸ್ವಾವಲಂಬನೆ, ...ಕರಣ, ಸರ್ಕಾರ ಕನಿಷ್ಠ ಪ್ರಮಾಣದಲ್ಲಿರುವ ಸ್ಥಿತಿ- ಎಲ್ಲದರ ಬಗ್ಗೆ ...ಯಲ್ಲಿ ಮಾರ್ಗದರ್ಶನವಿತ್ತು, ತಮಾಷೆ, ಸ್ವವಿಮರ್ಶೆ, ಎಲ್ಲದರ ... ಗುಣ ಕೂಡ ಅವರನ್ನು ಬಿಟ್ಟಿರಲಿಲ್ಲ.

...ನ್ನ ಕೂಡ ಎಲ್ಲೆಲ್ಲೋ ಇದ್ದು ಅನೇಕಾನೇಕ ಪ್ರಯೋಗ ನಡೆಸಿ ... ನಾಟಕದ ರೂಪ, ಅರ್ಥ ಅನೇಕ ವಸ್ತುಗಳ ರೂಪ, ದೇಹ ...ಂ ಅವರನ್ನು ಪ್ರೇರೇಪಿಸಿತ್ತು. ಇದೆಲ್ಲದರ ಜೊತೆಗೆ ಜಗಳ ಗಂಟ ...ಗಿದ್ದ.

...ನಮ್ಮನ್ನು ನಾವು ಸ್ವತಂತ್ರವಾಗಿಟ್ಟುಕೊಳ್ಳುವ ರೀತಿ ಕೂಡ! ನಮ್ಮಲ್ಲಿ ...ರೇ ಒಂದೆರಡೇ ಜನ ನಾಟಕ ನಿರ್ದೇಶಕರು. ಕಾರಂತ ತಮ್ಮ ...ನ ಪ್ರವೃತ್ತಿಯಿಂದ, ಕೀಳರಿಮೆಯಿಂದ, ದ್ವಂದ್ವಗಳಿಂದ ನುಸಿಯತೊಡಗಿದ್ದರು, ...ಡಬೇಕಾದ್ದು ಅಪಾರವಾಗಿರುವಂತೆ ನನಗೆ ಕಾಣಿಸಿತು.

...ಪ್ರಿಯವಾದ ನನ್ನ ನಾಟಕ 'ಗುಣಮುಖ'. ಆತ್ಮಪ್ರತ್ಯಯದ, self- ...ed ಆದ ಮನುಷ್ಯ ಹೇಗೆ ವಾಸ್ತವದಿಂದ ದೂರವಾಗಿ ವಿನಯದಿಂದ, ... ತೊರೆಯುವುದರಿಂದ ಮತ್ತೆ ಜೀವನವನ್ನು ನೋಡತೊಡಗುತ್ತಾನೆ ... ಇದರ ವಸ್ತು.

...ಷ್ಟ ತನ್ನಲ್ಲೇ ಮುಳುಗಿಬಿಟ್ಟಿರುತ್ತಾನೆ. ಪ್ರಸನ್ನನಿಗಾಗಿಯೇ ಬರೆದ ಈ ನಾಟಕವನ್ನು ಈತ ಓದಿದಂತಿಲ್ಲ. ನಾನು 'ಓದಿ' ಎಂದು ಯಾರನ್ನೂ ಕೇಳಿಕೊಳ್ಳುವುದಿಲ್ಲ.

ನಾವು ನಮ್ಮ ರಂಗಭೂಮಿಗೆ ಮಾಡಬಹುದಾದಷ್ಟನ್ನು ಮಾಡಲಾಗಿಲ್ಲ, ಯಾಕೆಂದರೆ ಇಲ್ಲಿ ಗೊತ್ತು ಗುರಿ ಇಲ್ಲ.

* * *

ಪ್ರಸನ್ನ ಮೊನ್ನೆ ಆಡಿದ 'ನನ್ನ ತಂಗಿಗೊಂದು ಗಂಡು ಕೊಡಿ' ನಾಟಕ ನಾನು 32 ವರ್ಷದ ಹಿಂದೆ ಬರೆದದ್ದು. ನಾನು ಅದನ್ನು ಮತ್ತೆ ಓದಿಯೇ ಇರಲಿಲ್ಲ. ಅದರ ಪ್ರದರ್ಶನ ನೋಡುವಂತೆ ಅರುಂಧತಿ ಹೇಳಿ ಟಿಕೆಟ್ ಕೊಟ್ಟಾಗಲೇ ಅದು ಪ್ರದರ್ಶನವಾಗುತ್ತಿದೆ ಎಂದು ಗೊತ್ತಾದದ್ದು. ಅದರ ವಸ್ತು, ವಿವರಗಳೆಲ್ಲ ನನಗೆ ಮರೆತೇಹೋಗಿದ್ದವು.

'ಜೀವನ ಭ್ರಷ್ಟವಾಗಿದೆ. ಆದರೆ ನಾಟಕ ಭಂಡವಾಗಕೂಡದು' ಎಂದು ನೋಡಿದ ಮೇಲೆ ಗೊಣಗಿದೆ. ಇದರಲ್ಲಿ ಕೆಲವು ಒಳ್ಳೇ ಅಂಶಗಳಿವೆ. ತಂದೆ ರಂಗದ ಮೇಲೆ ಬರದೇ ಪ್ರಭಾವ ಬೀರುತ್ತಾನೆ. ತಾಯಿ ತನ್ನ ನೆನಪುಗಳನ್ನು ಕೆದಕಿದಂತೆಲ್ಲ ಕುಸಿಯುತ್ತಾಳೆ. ಭ್ರಷ್ಟತೆ ಎಂಬ ರೋಗ ಉಲ್ಬಣಗೊಳ್ಳುತ್ತಾ ಹೋಗಿ ಅದರ ವಿರುದ್ಧ ಮಾತಾಡುವ ಜಗನ್ನಾಥ ಎಂಬ **angry young man** ಕೂಡ ಇನ್ನೊಂದು ರೀತಿಯಲ್ಲಿ ಭ್ರಷ್ಟ ಎಂದು ಗೊತ್ತಾಗುತ್ತದೆ.

ನೋಡಿದ ಮೇಲೆ ನಾನು ವೈಯಕ್ತಿಕವಾಗಿ ದುಗುಡಗೊಂಡಿದ್ದೆ. 'ನಮ್ಮ ಜನ ಇದಕ್ಕಿಂತಲೂ ಅರ್ಥಪೂರ್ಣ ನಾಟಕಕ್ಕೆ ಅರ್ಹರು' ಎಂದು ಹೇಳಿದೆ. ಜನರ ಪ್ರೀತಿ, ವಿಶ್ವಾಸ, ಸ್ನೇಹ ನನ್ನಲ್ಲಿ ಹೊಸಹೊಸ ಅನ್ನಿಸಿಕೆ, ಒಳನೋಟಗಳನ್ನು ಮೂಡಿಸುತ್ತಿವೆ.

'ನಾವು ಮಾಡಬಹುದಾದಷ್ಟನ್ನು ಮಾಡಲಾಗಲಿಲ್ಲ. ಇಲ್ಲಿಯ ರಂಗಭೂಮಿ ಹುಲುಸಾಗಿ, ಹೆಮ್ಮರವಾಗಿ ಬೆಳೆಯಬಹುದಿತ್ತು. ಆಗಲಿಲ್ಲ. ಎಲ್ಲರೂ ತಮ್ಮತಮ್ಮ ತೆವಲುಗಳಲ್ಲಿ ಮುಳುಗಿದೆವು. ನಿರ್ದೇಶಕರೆನ್ನಿಸಿಕೊಂಡವರು, ನಟರು, ನಟಿಯರು ಅಮೆಚ್ಯೂರ್‌ಗಳಾಗಿ ಉಳಿದರು' ಎಂದು ನಿಟ್ಟುಸಿರುಬಿಟ್ಟೆ.

'ಪ್ರಸನ್ನನ ನಿರ್ದೇಶನ ನನ್ನ ನಾಟಕಕ್ಕಿಂತ ಚೆನ್ನಾಗಿದೆ ಎಂದು ಹೇಳು' ಎಂದು ಉಮರಬ್ಬನ ಹೆಂಡತಿ ಸುಜಾತಾ ಮೂಲಕ ಹೇಳಿಕಳಿಸಿದೆ. ನನ್ನೊಂದಿಗೆ ಇದ್ದ ಮಹಾಬಲಮೂರ್ತಿ ಹತ್ತಿರ ನಮ್ಮ ರಂಗಭೂಮಿಯ ಬಗ್ಗೆ ಹೇಳುತ್ತಲೇ ಇದ್ದೆ. ಪ್ರಸನ್ನ ಎಷ್ಟು ಒಳ್ಳೆಯ ಕೆಲಸ ಮಾಡಬಹುದು ಎಂಬುದರ ಬಗ್ಗೆ ಕೂಡ.



ಹಣ ಮತ್ತು ಆತ್ಮ

ನಮ್ಮಲ್ಲಿ ಕೆಲವು ತಪ್ಪು ಕಲ್ಪನೆಗಳಿರುತ್ತವೆ; ಇಂಥ ತಪ್ಪು ಕಲ್ಪನೆಗಳು ಉಂಡುಟ್ಟು ನೆಮ್ಮದಿಯಾಗಿರುವವರಿಗೇ ಹೆಚ್ಚು. ಮೊನ್ನೆ ಮುರಾರಿ ಬಲ್ಲಾಳ ಎಂಬ ಗೆಳೆಯರು ಬಂದಿದ್ದರು. ಬಲ್ಲಾಳ ಸಾಹಿತ್ಯ ಸಂಸ್ಕೃತಿ, ಪರಿಸರದ ಬಗ್ಗೆ ಅಪಾರ ಕಾಳಜಿ ಉಳ್ಳವರು. ನಾನು ಮಣಿಪಾಲ್‌ನಲ್ಲಿ ಇವರ ಮನೆಗೆ ಎರಡು ಸಲ ಹೋಗಿದ್ದೆ. ಸಿಕ್ಕಿದಾಗಲೆಲ್ಲ 'ನಿಮ್ಮ ಕೈತೋಟದ ಸಪೋಟಾ ಮರ ಹ್ಯಾಗಿದೆ?' ಎಂದು ಮೊದಲು ಕೇಳುತ್ತಿದ್ದೆ. ಬಲ್ಲಾಳ ವಿಸ್ತಾರವಾದ ಆಸಕ್ತಿಯುಳ್ಳ ಮನುಷ್ಯ.

'ಅಲ್ರಿ ಮುರಾರಿ, ನಿಮ್ಮ ಜಿಲ್ಲೆಯನ್ನು ನೋಡಿದಾಗಲೆಲ್ಲ ನನಗೆ ಸಂತೋಷವಾಗುತ್ತೆ. ಅಲ್ಲಿ ನಮ್ಮ ಊರುಗಳ ಕಡುಬಡತನವಿಲ್ಲ. ಜನ ತುಂಬ ಜಾಣರು. ಜಿಲ್ಲೆಗೆ ಬೇಕಾದ ಬ್ಯಾಂಕ್‌ಗಳು ಹುಟ್ಟಿದ್ದು ಇಲ್ಲಿ. ಅವುಗಳ ಬಗ್ಗೆ, ಪೈಗಳ ಬಗ್ಗೆ, ವಿಜಯಬ್ಯಾಂಕ್‌ನ ಬಂಟರ ಬಗ್ಗೆ ವ್ಯಂಗ್ಯವಾಗಿ ಮಾತಾಡುವುದು ಸುಲಭ. ಆದರೆ ಮಂಡ್ಯದ ಒಕ್ಕಲಿಗರು, ಬಿಜಾಪುರದ ಲಿಂಗಾಯತರು, ಕುರುಬರು, ದಲಿತರು, ಯಾರೂ ಈ ರೀತಿಯಲ್ಲಿ ಬ್ಯಾಂಕ್ ರೂಪಿಸಲು ಆಗಿಲ್ಲ. ಬ್ಯಾಂಕ್ ಎಂದರೆ ಜನ ತಮ್ಮ ಆದಾಯದಲ್ಲಿ ಸ್ವಲ್ಪ ಭಾಗವನ್ನು ಉಳಿಸಿ ಬಡ್ಡಿ ಗಳಿಸುವುದು; ಜನರ ಹಣವನ್ನು ಕ್ರಿಯಾಶೀಲವಾಗಿ ಅಗತ್ಯವಿದ್ದವರಿಗೆ ಬ್ಯಾಂಕ್‌ನಿಂದ ನೀಡಿ ನೆರವಾಗುವುದು. ಇದು ಸಹಕಾರಿ; ಅತ್ಯಂತ ಸೂಕ್ಷ್ಮ ಸಹಕಾರಿ. ಇದು ದಕ್ಷಿಣ ಕನ್ನಡದ ಜೀವನದಿಯಾಗಿ ಬೆಳೆಯಿತು. ಬಡತನ ಕಮ್ಮಿಯಾಯಿತು. ಮೊನ್ನೆ ನನ್ನ ಭಾಷಣಕ್ಕೆ ಸಾರಾ ಅಬೂಬಕರ್ ಬಂದಿದ್ದರು; ಪತ್ರಿಕೆಯ ಬಗ್ಗೆ ಚೆನ್ನಾಗಿ ಮಾತಾಡಿದರು. ಅವರೇ ಒಮ್ಮೆ ಹೇಳಿದ್ದು 'ನಿಮ್ಮಲ್ಲಿರುವ ಬಡತನ ನಮ್ಮ ಜಿಲ್ಲೆಯಲ್ಲಿ ಇಲ್ಲ, ಅತ್ಯಂತ ಅಸಹಾಯಕ ಕುಟುಂಬ ಕೂಡ ಅನ್ನಬಟ್ಟೆಗೆ ಬೇಕಾದಷ್ಟನ್ನು ಬೀಡಿ ಕಟ್ಟಿ, ಮೀನು ಹಿಡಿದು, ಗಳಿಸಿರುತ್ತಾರೆ...'

ಇದಕ್ಕೆ ಮುರಾರಿ ಹೇಳಿದರು, 'ಇದು ನಿಜ. ಹಣ ಕೈಯಲ್ಲಿ ಅದ್ಯಾ ಇದೆ. ಆದರೆ ಇದರಿಂದ ಅವರ ಆತ್ಮ ನಾಶವಾಗುವ ಅಪಾಯವಿದೆ.'

'ಹೌದೆ? ಈ ಬಗ್ಗೆ ನಿಮಗೆ ಹೆದರಿಕೆ ಇದೆಯೆ? ನೀವು ಹೇಳುವುದು ನಿಜವಾಗಿದ್ದರೆ ಇಂಗ್ಲೆಂಡ್, ಜಪಾನ್‌ನಲ್ಲಿ ಆತ್ಮವೇ ಇರುತ್ತಿರಲಿಲ್ಲ. ಹಾಗೆನ್ನುವುದು ತಪ್ಪು, ಜನ ನೆಮ್ಮದಿಯಾಗಿದ್ದಾಗಲೇ ಅವರ ಆತ್ಮ ಕೂಡ ಸುರಕ್ಷಿತವಾಗಿರುತ್ತದೆ ಎಂದು ನಾನು ನಂಬುತ್ತೇನೆ' ಅಂದೆ. ಅವರು ಗತ್ಯಂತರವಿಲ್ಲದೆ 'ಇರಬಹುದು' ಎಂದು ಮೌನವಾಗಿ ಕೂತರು. ಆತ್ಮವನ್ನು ಕಾಪಾಡುವವಕ್ಕೇ ನೇಮಕಗೊಂಡ ಪೋಪ್ ಕೂಡ ನೆಮ್ಮದಿಯ ಮನುಷ್ಯ. ಅವರಲ್ಲಿ ಅಧಿಕಾರವಿರುತ್ತದೆ. ಅದು ನೈತಿಕ ಅಧಿಕಾರ. ಜೀವವುಳಿಸಲು ಬೇಕಾದ ಕಾಳಜಿ. ನಾವು ಕ್ಯಾಲಿಗುಲಾ ಬಗ್ಗೆ ಮಾತಾಡುವ ಅಗತ್ಯವಿಲ್ಲ. ಮನುಷ್ಯರು ತಮ್ಮ ಆತ್ಮ ಉಳಿಸಿಕೊಂಡು ನೆಮ್ಮದಿಯಾಗಿರುವ ನೂರಾರು ಮಾರ್ಗ ಕಂಡುಕೊಂಡಿದ್ದಾರೆ... ಹಾದಲ್ಲಿ ಮುಳುಗಿಹೋಗುವ ಅಪಾಯವಿದ್ದಾಗ ಒಬ್ಬ ವ್ಯಕ್ತಿ ಒಂದು ಕೆಂಗುಲಾಬಿ ಕಣ್ಣುಗಳನ್ನು ನೋಡಿ ಆನಂದ ಅನುಭವಿಸುತ್ತಾನೆ. ಮಗುವಿನ ಮುಗುಳ್ನಗೆ ಅವನನ್ನು ವಿಚಿತ್ರ ರೀತಿಯಲ್ಲಿ ತಿದ್ದುತ್ತದೆ....

21, ಜುಲೈ 1999 ■

ಸೀತೆ ಮತ್ತು ಶಂಭೂಕನನ್ನು ಕೊಂದ ರಾಮ

03

ಬಂದ. ಯಜ್ಞ ನಡೆಯುತ್ತಿದ್ದಾಗ ಲವ ಮತ್ತು ಕುಶ ರಾಮಾಯಣವನ್ನು ಹರಿಸಿದರು. ಅದನ್ನು ಕೇಳಿ ಸಂತೋಷಗೊಂಡ ರಾಮ ಅವರಿಬ್ಬರು ಯಾರೆಂದು ವಿಚಾರಿಸಿದಾಗ ಅವರು ಸೀತೆಯ ಪುತ್ರರು ಎಂದು ಗೊತ್ತಾಯಿತು. ಆಗಲೇ ಆತನಿಗೆ ಸೀತೆಯ ನೆನಪಾಗಿದ್ದು. ಆಗಲೂ ರಾಮ ಏನು ಮಾಡಿದ? ಆಕೆಗೆ ಆತ ಹೇಳಿ ಕಳುಹಿಸಲಿಲ್ಲ, ಬದಲಾಗಿ, ತಮ್ಮ ತಂದೆತಾಯಂದಿರ ಪಾಪಕೃತ್ಯಗಳನ್ನು ಅರಿಯದ, ವಿಧಿಯ ಆಟಕ್ಕೆ ಬಲಿಯಾಗಿದ್ದ ಆ ಬಾಲಕರನ್ನು ಕರೆದ ರಾಮ 'ಸೀತೆ ನಿಜವಾಗಿಯೂ ಶುದ್ಧ ಪತಿವ್ರತೆ ಆಗಿದ್ದರೆ ಆಕೆ ನನ್ನ ಆಸ್ಥಾನಕ್ಕೆ ಬಂದು ಅದನ್ನು ಸಾಬೀತುಪಡಿಸಿ ತನಗೆ ಮತ್ತು ನನಗೆ ಅಂಟಿಕೊಂಡಿರುವ ಕಳಂಕವನ್ನು ಅಳಿಸಿಹಾಕಬೇಕೆಂದು ವಾಲ್ಮೀಕಿ ಸೀತೆಗೆ ಹೇಳಲಿ' ಎಂದು ಆದೇಶಿಸಿದ.

ತನ್ನ ಪಾವಿತ್ರತೆಯನ್ನು ಈ ಹಿಂದೆಯೇ ಸೀತೆ ಲಂಕೆಯಲ್ಲಿ ಸಾಬೀತುಮಾಡಿದ್ದಳು. ಆಕೆಯನ್ನು ತೊರೆಯುವ ಮುನ್ನವೂ ಮತ್ತೊಮ್ಮೆ ಸಾಬೀತುಪಡಿಸಿದ್ದಳು. ಈಗಲೂ ಆಕೆ ಅದನ್ನು ರುಜುವಾತುಪಡಿಸಿದರೆ ಸೀತೆಯನ್ನು ರಾಮ ವಾಪಸ್ಸು ಕರೆದುಕೊಳ್ಳುವ ಭರವಸೆಯನ್ನೇನೂ ನೀಡಲಿಲ್ಲ, ಆದರೂ ವಾಲ್ಮೀಕಿ ಸೀತೆಯನ್ನು ಕರೆದುಕೊಂಡು ಬಂದ. ಸೀತೆಯನ್ನು ರಾಮನ ಮುಂದೆ ನಿಲ್ಲಿಸಿದ ವಾಲ್ಮೀಕಿ "ಓ ದಶರಥನ ಪುತ್ರನೇ, ನೀನು ಸಾರ್ವಜನಿಕರಿಗೆ ಹೆದರಿ ತ್ಯಜಿಸಿದ ಸೀತೆ ಇಲ್ಲಿದ್ದಾಳೆ. ನೀನು ಅನುಮತಿ ಕೊಟ್ಟರೆ ಆಕೆ ತನ್ನ ಪಾವಿತ್ರತೆಯನ್ನು ಸಾಬೀತುಪಡಿಸುತ್ತಾಳೆ. ನನ್ನ ಆಶ್ರಮದಲ್ಲಿ ನಾನು ಬೆಳೆಸಿದ ನಿನ್ನ ಇಬ್ಬರು ಪುತ್ರರೂ ಇಲ್ಲಿದ್ದಾರೆ" ಎಂದ.

ಆದಕ್ಕೆ ರಾಮ "ಸೀತೆ ಪವಿತ್ರೆ ಎಂದೂ, ಇವರಿಬ್ಬರು ನನ್ನ ಮಕ್ಕಳು ಎಂದೂ ನನಗೆ ಗೊತ್ತು. ಸೀತೆ ಅಗ್ನಿಪರೀಕ್ಷೆಯನ್ನು ಲಂಕೆಯಲ್ಲೇ ಎದುರಿಸಿ ತನ್ನ ಪಾವಿತ್ರತೆಯನ್ನು ಸಾಬೀತುಪಡಿಸಿದ್ದರಿಂದಲೇ ನಾನು ಆಕೆಯನ್ನು ವಾಪಸ್ ಸ್ವೀಕರಿಸಿದ್ದು. ಆದರೂ ಆಕೆಯ ಬಗ್ಗೆ ಜನರಲ್ಲಿ ಅನುಮಾನಗಳಿವೆ. ಆದ್ದರಿಂದ ಆಕೆ ಇಲ್ಲಿ, ಎಲ್ಲಾ ಋಷಿಗಳ ಸಮ್ಮುಖದಲ್ಲಿ, ತನ್ನ ಪಾವಿತ್ರತೆಯನ್ನು ಸಾಬೀತುಪಡಿಸಲಿ, ಜನರೇ ಅದಕ್ಕೆ ಸಾಕ್ಷಿಯಾಗಲಿ" ಎಂದು ಉತ್ತರಿಸಿದ.

ನೆಲವನ್ನೇ ದಿಟ್ಟಿಸುತ್ತಾ ನಿಂತಿದ್ದ ಸೀತೆ ಕೈಮುಗಿದು ಹೀಗೆಂದು ಪ್ರಾರ್ಥಿಸಿದಳು: "ರಾಮನ ಹೊರತಾಗಿ ನಾನು ಯಾವ ಪುರುಷನ ಬಗ್ಗೆಯೂ ಯೋಚಿಸಿಲ್ಲ ಎಂಬುದು ಸತ್ಯವಾದರೆ ಭೂಮಿತಾಯಿ ಬಾಯಿಬಿಟ್ಟು ನನ್ನನ್ನು ಸ್ವೀಕರಿಸಲಿ. ನಾನು ಕಾಯಾ, ವಾಚಾ, ಮನಸ್ಸಾ ರಾಮನನ್ನು ಪ್ರೀತಿಸಿದ್ದು ನಿಜವಾದರೆ ಭೂಮಿ ತಾಯಿ ಬಾಯಿ ತೆರೆದು ನನ್ನನ್ನು ಮಣ್ಣುಮಾಡಲಿ."

ಸೀತೆ ಹೀಗೆ ಹೇಳಿದ್ದೇ ತಡ ಭೂಮಿತಾಯಿ ಬಾಯಿ ತೆರೆದು ಚಿನ್ನದ ಸಿಂಹಾಸನದಲ್ಲಿ ಸೀತೆಯನ್ನು ಕೂರಿಸಿಕೊಂಡು ಹೊರಟುಹೋದಳು. ಆಕಾಶದಿಂದ ದೇವತೆಗಳು ಸೀತೆಯ ಮೇಲೆ ಪುಷ್ಪಾಚರಣೆ ಮಾಡಿದ್ದನ್ನು ಅಲ್ಲಿ ನೆರೆದಿದ್ದ ಜನರೆಲ್ಲ ಮೂಕವಿಸ್ಮಿತರಾಗಿ ನೋಡುತ್ತಿದ್ದರು.

ಇದರ ಅರ್ಥವೇನು? ಪಾಶವೀಯವಾಗಿ ವರ್ತಿಸಿದ್ದ ರಾಮನಿಗೆ ಹಿಂದಿರುಗುವ ಬದಲು ಸೀತೆಗೆ ಸಾವೇ ಉತ್ತಮ ಎನಿಸಿತ್ತು ಎಂದಲ್ಲವೇ? ಇದು ಸೀತೆಯ ದುರಂತವೂ ಹೌದು, ರಾಮನ ಅಪರಾಧವೂ ಹೌದು.

ಈಗ ರಾಮರಾಜ್ಯವನ್ನು ಸ್ಥಾಪಿಸಿದ್ದ ಎನ್ನಲಾದ ರಾಮ ಎಂತಹ ರಾಜನಾಗಿದ್ದ ಎಂಬುದರತ್ತ ಗಮನಹರಿಸೋಣ. ರಾಮ ಉತ್ತಮ ರಾಜನಾಗಿದ್ದ ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರಗಳು ಇವೆಯೇ?

ವಾಸ್ತವವಾಗಿ ರಾಮ ಎಂದೂ ರಾಜನಾಗಿ ತನ್ನ ಕರ್ತವ್ಯವನ್ನು ಪಾಲಿಸಿದವನಲ್ಲ, ಆತ ಹೆಸರಿಗೆ ಮಾತ್ರ ರಾಜನಾಗಿದ್ದ. ವಾಲ್ಮೀಕಿ ಹೇಳಿರುವಂತೆ ಆಡಳಿತವನ್ನು ನಡೆಸುತ್ತಿದ್ದವನು ರಾಮನ ಸಹೋದರ ಭರತ. ರಾಮ ತನ್ನ ರಾಜ್ಯದ ಬಗ್ಗೆ, ತನ್ನ ಪ್ರಜೆಗಳ ಬಗ್ಗೆ ಕಿಂಚಿತ್ತೂ ಯೋಚಿಸದೆ ಎಲ್ಲ ಜವಾಬ್ದಾರಿಗಳಿಂದ ದೂರ ಸರಿದಿದ್ದ. ರಾಜನಾದ ನಂತರ ರಾಮ ಏನೇನು ಮಾಡುತ್ತಿದ್ದ ಎಂದು ವಾಲ್ಮೀಕಿಯೇ ವಿವರವಾಗಿ ಹೇಳಿದ್ದಾನೆ. ಅದರ ಪ್ರಕಾರ ರಾಮನ ದಿನಗಳನ್ನು ಎರಡು ಭಾಗಗಳಾಗಿ ವಿಂಗಡಿಸ ಬಹುದು. ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ಆತ ಪೂಜೆ, ಪುನಸ್ಕಾರಗಳಲ್ಲಿ ತೊಡಗಿರುತ್ತಿದ್ದ. ಮಧ್ಯಾಹ್ನವನ್ನು ಆತ ತನ್ನ ಆಸ್ಥಾನದ ವಿದೂಷಕರೊಂದಿಗೋ ಅಥವಾ ತನ್ನ ಉಪಪತ್ನಿಯರಿದ್ದ ಅಂತಃಪುರದಲ್ಲೋ ಕಳೆಯುತ್ತಿದ್ದ. ಆಸ್ಥಾನದ ವಿದೂಷಕರ ಸಂಗ ಬೇಸರವಾದರೆ ಅಂತಃಪುರಕ್ಕೆ ಹೋಗುತ್ತಿದ್ದ. ಅಂತಃಪುರದ ಉಪಪತ್ನಿಯರ ಸಾಂಗತ್ಯದಿಂದ ಬೇಜಾರಾದರೆ ಆಸ್ಥಾನದ ವಿದೂಷಕರತ್ತ ಬರುತ್ತಿದ್ದ.

ವಾಲ್ಮೀಕಿಯು ರಾಮನ ಅಂತಃಪುರದ ಬಗ್ಗೆಯೂ ಸಾಕಷ್ಟು ವಿವರಗಳನ್ನು ಕೊಟ್ಟಿದ್ದಾನೆ. ರಾಮನ ಅಂತಃಪುರವು ಅಶೋಕವನದಲ್ಲಿತ್ತು, ಅಲ್ಲಿ ರಾಮ ಭೋಜನ ಮಾಡುತ್ತಿದ್ದ. ಆತ ಸೇವಿಸುತ್ತಿದ್ದ ಆಹಾರದಲ್ಲಿ ಎಲ್ಲಾ ತರಹದ ರುಚಿಕರವಾದ ಭಕ್ಷ್ಯಭೋಜ್ಯಗಳು ಇರುತ್ತಿದ್ದವು. ಅವುಗಳಲ್ಲಿ ವಿವಿಧ ತರಹದ ಮಾಂಸಗಳು, ಹಣ್ಣುಗಳು ಮತ್ತು ಮದ್ಯವೂ ಇರುತ್ತಿತ್ತು. ರಾಮ ಮದ್ಯತ್ಯಾಗಿ ಆಗಿರಲಿಲ್ಲ, ವಾಲ್ಮೀಕಿಯೇ ಹೇಳುವಂತೆ ಆತ ಪುಷ್ಕಳವಾಗಿ ಮದ್ಯವನ್ನು ಸೇವಿಸುತ್ತಿದ್ದನಲ್ಲದೆ ಹಲವೊಮ್ಮೆ ಸೀತೆಯೂ ತನ್ನೊಂದಿಗೆ ಮದ್ಯ ಸೇವಿಸುವಂತೆ ಕರೆಯುತ್ತಿದ್ದ. ಅಂತಃಪುರದ ಬಗ್ಗೆ ವಾಲ್ಮೀಕಿ ಕೊಟ್ಟಿರುವ ವಿವರಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಅದು ಸಾಮಾನ್ಯ ಅಂತಃಪುರವಾಗಿರಲಿಲ್ಲ ಎಂದು ಅರ್ಥವಾಗುತ್ತದೆ. ಅಲ್ಲಿ ನೃತ್ಯ ಮತ್ತು ಸಂಗೀತ ಬಲ್ಲವರಾಗಿದ್ದ ಅಪ್ಸರೆಯರು, ಉರಗರು ಮತ್ತು ಕಿನ್ನರಿಯರು ಇದ್ದರು. ರಾಜ್ಯದ ವಿವಿಧ ಭಾಗಗಳಿಂದ ತಂದಿರಿಸಿದ್ದ ಸುಂದರ ಮಹಿಳೆಯರಿದ್ದರು. ರಾಮ ಇವರೆಲ್ಲರೊಂದಿಗೆ ಕುಡಿಯುತ್ತಾ, ಕುಣಿಯುತ್ತಾ ಸಮಯ ಕಳೆಯುತ್ತಿದ್ದ. ಅವರಲ್ಲಿ ಯಾರಾದರೂ ರಾಮನನ್ನು ಸಂತೋಷಪಡಿಸಿದರೆ ಆತ ಆಕೆಗೆ ಹಾರ ಹಾಕುತ್ತಿದ್ದ. ವಾಲ್ಮೀಕಿಯು ರಾಮನನ್ನು 'ಮಹಿಳೆಯರ ಪಾಲಿಗೆ ರಾಜಕುಮಾರನೇ ಆಗಿದ್ದ' ಎಂದು ಕರೆಯುತ್ತಾನೆ. ಇದು ಒಂದು ದಿನದ ಸಂಗತಿಯಾಗಿರಲಿಲ್ಲ, ಬದಲಾಗಿ ಆತನ ಜೀವನದ ಅಂಗವಾಗಿತ್ತು.

ಈ ಹಿಂದೆಯೇ ಹೇಳಿದಂತೆ ರಾಮ ಎಂದೂ ತನ್ನ ರಾಜನ ಕರ್ತವ್ಯಗಳನ್ನು ನಿರ್ವಹಿಸಲಿಲ್ಲ, ಪುರಾತನ ರಾಜರು ತಮ್ಮ ಪ್ರಜೆಗಳ ಕಷ್ಟಗಳನ್ನು ಆಲಿಸಿ ಅವುಗಳ ನಿವಾರಣೆಗೆ ಪ್ರಯತ್ನಿಸಿದಂತೆ ರಾಮ ಎಂದೂ ಯತ್ನಿಸಲಿಲ್ಲ, ವಾಲ್ಮೀಕಿಯೇ ದಾಖಲಿಸಿರುವಂತೆ ರಾಮ ತನ್ನ ಪ್ರಜೆಗಳ ಅತೃಪ್ತಿಯನ್ನು ಆಲಿಸಿ ಕಾರ್ಯಪ್ರವೃತ್ತನಾಗಿದ್ದು ಒಂದು ಬಾರಿ ಮಾತ್ರ. ಆದರೆ ಆ ಒಂದು ಪ್ರಕರಣವೂ ದುರಂತದಲ್ಲಿ ಅಂತ್ಯಗೊಂಡಿತು. ಯಾರೋ ತಪ್ಪು ಎಂದು ಪರಿಗಣಿಸಿದ್ದನ್ನು ಸರಿ ಮಾಡಲು ಯತ್ನಿಸಿದ ರಾಮ ಇತಿಹಾಸದಲ್ಲೆ ದಾಖಲಾಗಿರುವ ಪರಮನೀಚ ಕೃತ್ಯವನ್ನು ಎಸಗಿದ. ಅದನ್ನು ಶೂದ್ರ ಶಂಭೂಕನ ವಧೆ ಎಂದು ಕರೆಯಲಾಗುತ್ತದೆ.

ವಾಲ್ಮೀಕಿ ಹೇಳುವ ಪ್ರಕಾರ ರಾಮನ ರಾಜ್ಯಭಾರದಲ್ಲಿ ಯಾರೂ ಅಕಾಲಿಕ ಮರಣವನ್ನು ಹೊಂದುತ್ತಿರಲಿಲ್ಲ, ಆದರೂ ಓರ್ವ ಬ್ರಾಹ್ಮಣನ ಮಗ ಅಕಾಲಿಕವಾಗಿ ಮರಣವನ್ನು ಹೊಂದಿದ. ಆ ಹುಡುಗನ ತಂದೆ ತನ್ನ ಮಗನ ಶವವನ್ನು ಹೊತ್ತು ತಂದು ರಾಮನ ಅರಮನೆಯ ಮುಂದೆ ಅದನ್ನಿಟ್ಟು, ರಾಮನ ಸಾಮ್ರಾಜ್ಯದಲ್ಲಿ ಯಾವುದೋ ಪಾಪ ನಡೆದಿರುವುದರಿಂದ ತನ್ನ ಮಗ ಸತ್ತನೆಂದು ಆರೋಪಿಸಿದ, ತನ್ನ ಮಗನ ಸಾವಿಗೆ ರಾಮನೇ ಕಾರಣ ಎಂದು ರೋದಿಸಿದ, ತನಗೆ ನ್ಯಾಯ ಸಿಗದಿದ್ದರೆ ತಾನು ಅಲ್ಲೇ ತನ್ನ ಪ್ರಾಣವನ್ನು ತ್ಯಜಿಸುವುದಾಗಿ ಹೇಳಿದ, ತನ್ನ ಮಗನ ಪ್ರಾಣ ಮ[...] ಬಾರದಿದ್ದರೆ ಅದಕ್ಕೆ ರಾಮನೇ ಕಾರಣ ಎಂದು ಕೂಗಾಡಿ[...]

ಆಗ ರಾಮ ತನ್ನ ಎಂಟು ಪಾಂಡಿತ್ಯಪೂರ್ಣ ಋ[...] ಳೊಂದಿಗೆ ಸಮಾಲೋಚನೆ ನಡೆಸಿದ. ಅವರಲ್ಲಿ ಒಬ್ಬ[...] ನಾರದ ಧಾರ್ಮಿಕ ವಿಧಿವಿಧಾನಗಳ ವಿರುದ್ಧ ಯಾರೋ[...] ಶೂದ್ರ ತಪಸ್ಸು ನಡೆಸುತ್ತಿರಬೇಕೆಂದೂ, ದ್ವಿಜನರಾ[...] ಬ್ರಾಹ್ಮಣರು ಮಾತ್ರ ತಪಸ್ಸು ಮಾಡತಕ್ಕದ್ದೆಂದೂ, ಶೂದ್ರ[...] ಕರ್ತವ್ಯ ದ್ವಿಜನರ ಸೇವೆ ಮಾತ್ರವಾಗಿದೆ ಎಂದೂ ವಿವರಿಸಿ[...] ಇದನ್ನು ನಂಬಿದ ರಾಮ ಧಾರ್ಮಿಕ ನಿಯಮಗಳ[...] ಮೀರಿ ತಪಸ್ಸು ಮಾಡುವ ಮೂಲಕ ಬ್ರಾಹ್ಮಣ ಯುವ[...] ಸಾವಿಗೆ ಕಾರಣನಾದ ಶೂದ್ರನನ್ನು ಪತ್ತೆ ಹಚ್ಚಲು ನಿರ್ಧರಿಸಿ[...] ತನ್ನ ಪುಷ್ಪಕ ವಿಮಾನವನ್ನೇರಿ ಆ ತಪ್ಪಿತಸ್ಥ ಶೂದ್ರನಿಗಾ[...] ತಡಕಾಡಲಾರಂಭಿಸಿದ.


ಕೊನೆಗೂ ದಕ್ಷಿಣದಲ್ಲಿದ್ದ ಅರಣ್ಯ ಪ್ರದೇಶದಲ್ಲಿ ಓ[...] ಮನುಷ್ಯ ಕಠಿಣವಾಗಿದ್ದ ತಪಸ್ಸಿನಲ್ಲಿ ತೊಡಗಿದ್ದು ರಾಮನ[...] ಕಾಣಿಸಿತು. ಆತನನ್ನು ಸಮೀಪಿಸಿದ ರಾಮ ಆತ ಯಾರೆಂ[...] ವಿಚಾರಿಸಿದ. ಆತ ಶಂಭೂಕ ಎಂಬ ಶೂದ್ರ ಆಗಿದ[...] ಆತ ಸ್ವರ್ಗವನ್ನು ಸೇರಲು ತಪಸ್ಸು ಮಾಡುತ್ತಿರುವುದಾ[...] ಹೇಳಿದ ಕೂಡಲೇ ಬೇರೆ ಯಾವ ವಿಚಾರಣೆಯನ್ನ[...] ಮಾಡದೆ, ಆತನಿಗೆ ಯಾವ ಎಚ್ಚರಿಕೆಯನ್ನೂ ಕೊಡ[...] ರಾಮ ಆತನ ಶಿರಚ್ಛೇದವನ್ನು ಮಾಡಿದ. ಅದೇ ಸಮಯ[...] ಸರಿಯಾಗಿ ಅತ್ತ ದೂರದ ಅಯೋಧ್ಯೆಯಲ್ಲಿದ್ದ ಬ್ರಾಹ್ಮ[...] ಯುವಕನ ಶವ ಉಸಿರಾಡಲಾರಂಭಿಸಿತು! ಇತ್ತ ಅರಣ್ಯದ[...] ಶೂದ್ರನೊಬ್ಬ ನಿಯಮಗಳನ್ನು ಮೀರಿ ತಪಸ್ಸಿನ ಮೂಲ[...] ದೇವಲೋಕವನ್ನು ಪ್ರವೇಶಿಸುವುದನ್ನು ತಡೆದಿದ್ದ[...] ಸಂತೋಷದಿಂದ ರಾಮನ ಮೇಲೆ ದೇವತೆಗ[...] ಪುಷ್ಪಾಚರಣೆಯನ್ನು ಮಾಡಿದರು.

ಅಷ್ಟೇ ಅಲ್ಲ ದೇವತೆಗಳು ರಾಮನ ಮುಂದೆ ಪ್ರತ್ಯಕ್ಷರಾ[...] ಆತನಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ತನ್ನ ಅರಮನೆ[...] ಮುಂದೆ ಶವವಾಗಿದ್ದ ಬ್ರಾಹ್ಮಣ ಯುವಕನ ಸ್ಥಿತಿಯ ಬ[...] ರಾಮ ವಿಚಾರಿಸಿದಾಗ ಆತ ಮರುಜನ್ಮ ಪಡೆದಿದ್ದಾನೆಂ[...] ರಾಮನನ್ನು ದೇವತೆಗಳು ಸಂತೈಸಿದರು. ಇದಾದನಂತ[...] ಅಲ್ಲಿಂದ ಹೊರಟ ರಾಮ ಹತ್ತಿರದಲ್ಲೇ ಇದ್ದ ಋ[...] ಅಗತ್ಸ್ಯನ ಆಶ್ರಮಕ್ಕೆ ಹೋದ. ಶೂದ್ರ ಶಂಭೂಕನ[...] ವಧಿಸಿದ್ದನ್ನು ಪ್ರಶಂಸಿಸಿದ ಅಗತ್ಸ್ಯ ರಾಮನಿಗೆ ದೈವ[...] ಖಡ್ಗವೊಂದನ್ನು ಉಡುಗೊರೆಯಾಗಿ ಕೊಟ್ಟ.

ರಾಮ ತನ್ನ ರಾಜಧಾನಿಗೆ ಹಿಂದಿರುಗಿದ.

ರಾಮ ಇಂಥವನು.

ಭಜರಂಗದಳ, ಪೊಲೀಸರು ಮತ್ತು ಪತ್ರಕರ್ತರ ನಡುವಿನ ಗೆರೆಗಳೇ ಮಸುಕಾಗಿವೆ



THE HINDU | MANGALORE, FRIDAY, OCTOBER 4, 2013

Mulki police engage in 'moral policing'

Staff Correspondent

MANGALORE: In an apparent case of moral policing by the police, a group of five persons, including two women, travelling together was questioned and warned at the Mulki police station on Wednesday.

The police stopped their car at Bappanadu on the Dakshina Kannada–Udupi border after receiving information that a right-wing Hindu group was trailing them.

Though the police said they stopped the car to ensure that the occupants were not harmed, it ended with the youth being taken to the police station and questioned about their "relationship".

While the youths work in Mangalore, the two girls are students of a college here. They were headed towards Manipal.

"We ensured there was no violent flare-up, and prevented a situation of violent moral policing," said Police Sub-inspector Somayya. "The girls and boys have done something wrong...the girls had travelled with the three boys, whom they know only through mutual friends, and without informing the elders in the family. The students should think of their families and not do as they please."

However, he refused to say whether there was a specific criminal charge against those detained. The five were allowed to go only after the girls' parents were informed.

ಕರ್ನಾಟಕ ಕರಾವಳಿಯ ಈ ಭಾಗದಲ್ಲಿ ನಡೆಯುವ 'ನೈತಿಕ ಪೊಲೀಸ್‌ಗಿರಿ' ಸಾಮಾನ್ಯವಾಗಿ ಒಂದೇ ರೀತಿ ಇರುತ್ತವೆ. ಭಿನ್ನ ಕೋಮಿಗೆ ಸೇರಿದ ಯುವ ಜೋಡಿಗಳು ಜತೆಯಾಗಿರುವುದು, ಜತೆಯಾಗಿ ಪ್ರಯಾಣಿಸುತ್ತಿರುವುದು ಕಣ್ಣಿಗೆ ಬಿದ್ದರೆ ಸಾಕು ಸಂಸ್ಕೃತಿ ರಕ್ಷಣೆಯ ಗುತ್ತಿಗೆ ಹಿಡಿದ ಪುಂಡರು ಅವರನ್ನು ಬೆನ್ನಟ್ಟುತ್ತಾರೆ. ಮೊದಲು ತಾವೇ ಶಿಕ್ಷೆ ನೀಡಿ, ಬಳಿಕ ವಿಚಾರಣೆಗಾಗಿ ಅವರನ್ನು ಪೊಲೀಸರಿಗೆ ಒಪ್ಪಿಸುತ್ತಾರೆ.

ಪ್ರಜಾವಾಣಿ ಗುರುವಾರ 3ನೇ ಅಕ್ಟೋಬರ್ 2013

ನೈತಿಕ ಪೊಲೀಸ್ ದಾಳಿಗೆ ಸಡ್ಡು: ಜೋಡಿಗಳ ರಕ್ಷಣೆ

ಮುಲ್ಕಿ: ಕಾರೊಂದರಲ್ಲಿ ಅನ್ಯಕೋಮಿನ ಜೋಡಿಗಳು ಸಂಚರಿಸುತ್ತಿದ್ದಾರೆ ಎಂಬ ಮಾಹಿತಿ ದೊರೆತ ತಕ್ಷಣ ಸಂಘಟನೆಯೊಂದರ ಸಂಭಾವ್ಯ ದಾಳಿಯನ್ನು ಮುಲ್ಕಿ ಪೊಲೀಸರು ತಡೆಗಟ್ಟಿದ ಘಟನೆ ಬುಧವಾರ ಇಲ್ಲಿನ ಬಪ್ಪನಾಡು ಹೆದ್ದಾರಿ ಬಳಿ ನಡೆದಿದೆ.

[illegible]

ಈ ವಿಚಾರದಲ್ಲಿ ಪೊಲೀಸರ ಕ್ರಮವೂ ಸಾಮಾನ್ಯವಾಗಿ ಒಂದೇ ರೀತಿ ಇರುತ್ತದೆ. ಅಮಾಯಕ ಜೋಡಿಗೆ ಹಿಂಸೆ ನೀಡಿದ ಅಪರಾಧಿಗಳ ಕೂದಲನ್ನೂ ಕೊಂಕಿಸದೆ, ನಿರಪರಾಧಿ ಜೋಡಿಗಳನ್ನೇ ಠಾಣೆಗೆ ಎಳೆತಂದು, ಅವಮಾನಿಸಿ, ಅವರ ಪೋಷಕರನ್ನು ಕರೆಸಿ, ನೈತಿಕತೆಯ ಉಪದೇಶ ನೀಡಿ, ವಾರ್ನಿಂಗ್ ಕೊಟ್ಟು, ಮುಚ್ಚಳಿಕೆ ಬರೆಸಿಕೊಂಡು ಬಿಡುಗಡೆಗೊಳಿಸುತ್ತಾರೆ.

ಘಟನೆ ಒಂದೇ ಆದರೂ ಅದನ್ನು ಪತ್ರಿಕೆಗಳು ವರದಿ ಮಾಡುವ ವಿಧಾನದಲ್ಲಿ ಮಾತ್ರ ಅಜಗಜಾಂತರ. ಜನಪರ (ದಿ ಹಿಂದೂ) ಮತ್ತು ಜನವಿರೋಧಿ ವರದಿಗಾರಿಕೆ ಹೇಗಿರಬೇಕು ಎನ್ನುವುದಕ್ಕೆಲ್ಲ ಅಲ್ಲಿ ಧಾರಾಳ ಉದಾಹರಣೆಗಳಿರುತ್ತವೆ. ಉದಾಹರಣೆಗೆ ಇಲ್ಲಿ ನೀಡಲಾಗಿರುವ ಪತ್ರಿಕಾ ವರದಿಗಳ ತುಣುಕುಗಳನ್ನೇ ನೋಡಿ. ಮೊನ್ನೆ ಮೊನ್ನೆ ಮೂಲ್ಕಿಯಲ್ಲಿ ನಡೆದ ನೈತಿಕ ಪೊಲೀಸ್‌ಗಿರಿಯಲ್ಲಿ ಪೊಲೀಸರಿಗೆ 'ಕ್ಲೀನ್ ಚಿಟ್' ನೀಡಿರುವ ಪ್ರಜಾವಾಣಿಯ ಸದರಿ ವರದಿಯ ಶೀರ್ಷಿಕೆಯಲ್ಲಿ 'ಜೋಡಿಗಳ ರಕ್ಷಣೆ' ಎಂಬುದನ್ನು ಮುಖ್ಯವಾಗಿ ಗಮನಿಸಿ. ಕಾನೂನು ಬಾಹಿರವಾದ ಯಾವ ಅಪರಾಧವನ್ನೂ ಮಾಡಿರದ ಯುವಕಯುವತಿಯರನ್ನು ಪೀಡಿಸಿದ ದುಷ್ಕರ್ಮಿಗಳನ್ನು ಬಂಧಿಸಿ ಅವರ ಮೇಲೆ ಕಾನೂನು ಕ್ರಮ ಜರುಗಿಸುವುದು ಪೊಲೀಸರ ಕೆಲಸವೋ? ಅಥವಾ ಜೋಡಿಗಳನ್ನು ವಶಕ್ಕೆ ತೆಗೆದುಕೊಂಡು ಠಾಣೆಗೆ ಒಯ್ಯುವುದೋ? ಇದೆಂತಹ ಕಾನೂನು ಪರಿಪಾಲನೆಯ ರೀತಿ? ಪ್ರಜಾವಾಣಿ ಪತ್ರಿಕಾ ವರದಿಗಾರರ ಪ್ರಕಾರ ಇಲ್ಲಿ ಪೊಲೀಸರು ಅತ್ಯುತ್ತಮ ಕೆಲಸ ಮಾಡಿದ್ದಾರೆ, ಜೋಡಿಗಳನ್ನು ರಕ್ಷಿಸಿದ್ದಾರೆ!

ದುರಂತವೆಂದರೆ, ಭಜರಂಗದಳ, ಪೊಲೀಸರು ಮತ್ತು ಪತ್ರಕರ್ತರನ್ನು ಪ್ರತ್ಯೇಕಿಸುವ ಗೆರೆಗಳೇ ಮಸುಕಾಗಿಬಿಟ್ಟಿವೆ!

- ಶ್ರೀನಿವಾಸ ಕಾರ್ಕಳ, ಮಂಗಳೂರು

ಕನ್ನಡಿಗರು ಕೋಮುವಾದಿಗಳಾಗದಂತೆ ನೋಡಿಕೊಳ್ಳೋಣ

ಅಕ್ಟೋಬರ್ 09, 2013ರ ಸಂಚಿಕೆಯಲ್ಲಿನ ಕೆಲ ಲೇಖನಗಳ ಕುರಿತಂತೆ ನನ್ನ ಅಭಿಪ್ರಾಯ.

1. ಮೊದಲು ದೊಡ್ಡಿಪಾಳ್ಯ ನರಸಿಂಹಮೂರ್ತಿ ಅವರು ಬರೆದ 'ಬಡ ಕಂಟ್ರಾಕ್ಟರ್ ಕೋಟ್ಯಾಧೀಶನಾದ ಕಥೆ'ಯ ಬಗ್ಗೆ:

ಕಾರ್ಪೋರೇಟ್ ಕಂಪನಿಗಳು ಇವತ್ತು ಭಾರತೀಯ ಜನತಾ ಪಕ್ಷ ಮತ್ತು ನರೇಂದ್ರ ಮೋದಿಯ ಪರವಾಗಿ ನಿಂತಿರುವುದು ಹಾಗೂ ಅವರ ನಿಯಂತ್ರಣದಲ್ಲಿರುವ ಮಾಧ್ಯಮಗಳಲ್ಲಿ ಮೋದಿಗೆ ಅತೀ ಪ್ರಚಾರ ನೀಡುತ್ತಿರುವುದು ನಿಜವಾದರೂ- ಕಾರ್ಪೋರೇಟ್ ಕಂಪನಿಗಳು ಕೇವಲ ಭಾಜಪವನ್ನು ಮಾತ್ರವಲ್ಲ, ಅಗತ್ಯ ಬಿದ್ದಾಗ ಕಾಂಗ್ರೆಸ್ಸನ್ನೂ ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡು ಅವ[...] ಪಾರ್ಟಿ ಫಂಡ್ ನೀಡಿರುವುದು ಇಂಡಿಯಾ[...] ರಾಜಕಾರಣವನ್ನು ಹತ್ತಿರದಿಂದ ಗಮನಿಸಿದವರಿಗೆ ಗೊತ್ತಿರುವ ವಿಷಯ! ಯಾಕೆಂದರೆ ಬಂಡವಾಳಶಾ[...] ಕಂಪನಿಗಳಿಗೆ ವಾಸ್ತವದಲ್ಲಿ ಬೇಕಿರುವುದು ತ[...] ನಿಯಂತ್ರಣದಲ್ಲಿದ್ದು ತಮಗೆ ಅನುಕೂಲ ಮಾಡಿಕೊಡ[...] ಒಂದು ಕೇಂದ್ರ ಸರಕಾರವೇ ಹೊರತು, ಭಾಜಪ-ಕಾಂ[...] ಅಲ್ಲ. ಎಸ್ಸಾರ್ ಕಂಪನಿಯ ಇವತ್ತಿನ ನಾಗಾಲೋ[...] ಅಭಿವೃದ್ಧಿಯಲ್ಲಿ ಈಗಿನ ಕೇಂದ್ರ ಸರಕಾರದ ಪ[...] ಸಚಿವರುಗಳ ಕಾಣದ ಕೈಗಳೂ ಇವೆ ಎಂಬುದನ್ನು ನ[...] ಮರೆಯಬಾರದು. ಆದ್ದರಿಂದ ನಾವು ಇವತ್ತು ಕೇ[...] ಎಸ್ಸಾರ್ ಕಂಪನಿಯೊಂದನ್ನು ಮಾತ್ರವಲ್ಲ, ಅಂತಹ ಕೃತ್ಯ[...] ಭಾಗಿಯಾಗಿರುವ ಎಲ್ಲ ಕಾರ್ಪೋರೇಟ್ ಕಂಪನಿ[...] ಬಂಡವಾಳ ಬಯಲು ಮಾಡಬೇಕಾಗಿದೆ. ಜೊ[...]



...ಟ-ನಿರ್ದೇಶಕ ಜಯದೇವ್ ಸಂದರ್ಶನ-'ನಟನಿಗೆ ಡೆಡಿಕೇಶನ್ ಇರಬೇಕು' - ಜಯದೇವ್ ಮೋಹನ್

'ದಂಡುಪಾಳ್ಯ' ಚಿತ್ರದ ವಿಶಿಷ್ಟ ಪಾತ್ರದ ಮೂಲಕ ಗಮನ ಸೆಳೆದ ...ುವ ಪ್ರತಿಭೆ ಜಯದೇವ್ ಮೋಹನ್ ಈಗಾಗಲೇ ಅನೇಕ ನಾಟಕ, ಧಾರಾವಾಹಿ, ಸಿನಿಮಾಗಳಲ್ಲಿ ನಟಿಸಿದ್ದಾರೆ. ನಟನೆ ಜೊತೆಗೆ, ಸ್ಕ್ರಿಪ್ಟ್, ...ರ್ದೇಶನದಲ್ಲೂ ಅಪಾರ ಆಸಕ್ತಿ ಹೊಂದಿರುವ, ಕವಿಯೂ ಆಗಿರುವ ಈ ಬಹುಮುಖ ಪ್ರತಿಭೆ ಇಲ್ಲಿ ಮನಬಿಚ್ಚಿ ಮಾತಾಡಿದ್ದಾರೆ.

ಪ್ರಶ್ನೆ: ನಿಮ್ಮ ಕುಟುಂಬದ ಹಿನ್ನೆಲೆ ಕುರಿತು ಹೇಳ್ತೀರಾ?

...ಮೂಲತಃ ನಮ್ಮದು ನೇಕಾರ ಕುಟುಂಬ. ನಾನು ...ವಾಗಿದ್ದಾಗ ನೇಯ್ಗೆಯೇ ನಮ್ಮ ಕುಟುಂಬ ನಿರ್ವಹಣೆಗೆ ...ಾಧಾರವಾಗಿತ್ತು. ಅಪ್ಪ ಅಮ್ಮ ಎಲ್ಲರೂ ನೇಯ್ಗೆಯ ...ನ್ನೇ ಮಾಡ್ತಿದ್ರು. ನಾನೂ ಕೂಡ ಸಣ್ಣವನಿದ್ದಾಗ ...ಕೆಲಸ ಮಾಡ್ತಿದ್ದೆ. ಕಾಲಕ್ರಮೇಣ ಬಟ್ಟೆ ಉಡುವವರ ...ುಚಿ ಬದಲಾಯ್ತು. ಆ ಅಭಿರುಚಿಗೆ ತಕ್ಕಂತೆ ಕೆಲವು ...ರೂ ಬದಲಾದರು. ಆ ಬದಲಾವಣೆ ನಮ್ಮಿಂದ ...ಾಗಲಿಲ್ಲ. ಆ ಸಂದರ್ಭದಲ್ಲಿ ಅನೇಕ ನೇಕಾರ ...ುಬಗಳು ಬೀದಿಗೆ ಬಂದವು. ನಾವೂ ಕೂಡ ನೇಯ್ಗೆ ...ನ್ನು ಬಿಟ್ಟುಬಿಟ್ಟೆವು. ಈಗ ನಾನು ನೆಚ್ಚಿಕೊಂಡಿರುವ ...ೀ ನಮ್ಮ ಕುಟುಂಬಕ್ಕೆ ರಕ್ಷೆ.

ಪ್ರಶ್ನೆ: ರಂಗಭೂಮಿಯ ಒಲವು ಹೇಗೆ ಶುರುವಾಯ್ತು?


...ಲಾದಿನಗಳಲ್ಲಿ ನಾಟಕಗಳಲ್ಲಿ ಪಾತ್ರ ಮಾಡ್ತಿದ್ದೆ. ...ನ ಹೆಗಡೆ ಅಂತ ಒಬ್ರು ಮೇಷ್ಟ್ರಿದ್ರು. ಅವರು ...ನಾಟಕ ಬರೆದು, ನಿರ್ದೇಶನ ಮಾಡ್ತಿದ್ರು. ಅವರ ...ೋ ಕುದುರೆ... ಕುಂಟೋ ಕುದುರೆ... ಯಾರು ...ಣ್ಣದು' ಎಂಬ ನಾಟಕವಲ್ಲಿ ಮುಖ್ಯ ಪಾತ್ರ ಕೊಟ್ಟಿದ್ರು. ...ತ್ರಕ್ಕಾಗಿ 'ಅಂತರಶಾಲಾ ನಾಟಕ ಸ್ಪರ್ಧೆ'ಯಲ್ಲಿ ಪ್ರಥಮ ...ಮಾನ ಸಿಕ್ಕಿತ್ತು ನನಗೆ. ಕಾಲೇಜು ದಿನಗಳಲ್ಲಿ ... ಕೆಲವೊಂದು ಚಿಕ್ಕಚಿಕ್ಕ ನಾಟಕಗಳನ್ನು ಬರೆದು, ...ಶನ ಮಾಡುವ ಪ್ರಯತ್ನ ಮಾಡ್ತಿದ್ದೆ. ಗೆಳೆಯರ ...ರ ಚೆನ್ನಾಗಿತ್ತು. ನಾನೋದಿದ್ದು ಎ.ಪಿ.ಎಸ್ ಸಂಜೆ ...ಜಿನಲ್ಲಿ. ಅಲ್ಲಿ ಸುದರ್ಶನ್ ಅಂತ ಲೆಕ್ಚರರ್ ಇದ್ರು. ... ಮೂಲಕವೇ ನಾನು 'ಅಭಿನಯ ತರಂಗ' ...ಂಡೆ. ಡಿಪ್ಲೊಮಾ ಮಾಡಿದೆ. ಅಲ್ಲಿಗೆ ಸೇರಿದ ...ವೇ ಮೇಕಪ್ಪು, ರಂಗಸಜ್ಜಿಕೆ, ಬೆಳಕು ವಿನ್ಯಾಸ, ...ಾಸ, ನಟನೆ, ನಿರ್ದೇಶನದ ಸೂಕ್ಷ್ಮಗಳ ಅರಿವಾಗಿದ್ದು, ಎ.ಎಸ್.ಮೂರ್ತಿಯವರು ನನ್ನ ಗುರುಗಳು. ನನ್ನ ರಂಗಭೂಮಿಯ ಮತ್ತೊಬ್ಬ ಗುರು ಸಿ.ಬಸವಲಿಂಗಯ್ಯ.

ಪ್ರಶ್ನೆ: ಕಿರುತೆರೆಯ ಪ್ರವೇಶ ಹೇಗಾಯ್ತು?

ಸಿಹಿಕಹಿ ಚಂದ್ರು ಅವರು ತಮ್ಮ 'ಯದ್ವಾತದ್ವಾ' ಧಾರಾವಾಹಿಗೆ ಆಡಿಶನ್ ಮಾಡ್ತಿದ್ರು. ನಾನೂ ಕೂಡ ಅಲ್ಲಿಗೆ ಹೋದೆ. ಸೆಲೆಕ್ಟಾದೆ. ಚಿಕ್ಕದೊಂದು ಪಾತ್ರ ಕೊಟ್ರು. ಅಲ್ಲಿಂದಾಚೆಗೆ ನಾಗಾಭರಣ ಅವರ 'ದೂರ ತೀರ ಯಾನ' ಧಾರಾವಾಹಿಯಲ್ಲಿ ಪ್ರಮುಖ ಪಾತ್ರ ಸಿಕ್ಕಿತು. ಆನಂತರವೇ ಎಸ್.ನಾರಾಯಣ್ ಅವರ 'ಸುಮತಿ'ಯಲ್ಲಿ ಮೇನ್ ವಿಲನ್ ಪಾತ್ರ ಸಿಕ್ಕಿದ್ದು. ಆ ಪಾತ್ರ ಎಷ್ಟು ಪರಿಣಾಮಕಾರಿಯಾಗಿತ್ತು ಅಂದ್ರೆ, ಹೊರಗಡೆ ಓಡಾಡೋಕೆ ಆಗ್ತಾ ಇರ್ಲಿಲ್ಲ. ಹೆಂಗಸರೆಲ್ಲ ಬಯ್ಯೋರು. ಒಂದಿನ ಏನಾಯ್ತು ಅಂದ್ರೆ, ರೋಡ್ ಮಿಸ್ಸಾಗಿ ದೋಬಿಘಾಟ್ ಒಳಗಡೆ ಹೋಗ್ಬಿಟ್ಟಿದ್ದೆ. ಅಡ್ರೆಸ್ ಕೇಳೋಣ ಅಂತ ಗಾಡಿ ಸೈಡಿಗೆ ಹಾಕಿ ಹೆಲ್ಮೆಟ್ ತೆಗೆದರೆ ಅಲ್ಲಿದ್ದ ಹೆಂಗಸರೆಲ್ಲ "ನೀನ್ ನಿಜವಾಗ್ಲೂ ಗಂಡಸೇ ಆಗಿದ್ರೆ ದುಡ್ಕೊಂಡು ತಿನ್ನೋ...ಅವಳತ್ರ ಕಿತ್ಕೊಳ್ಳೋದಲ್ಲ..." ಅಂತ ಬಾಯಿಗೆಬಂದಂತೆ ಬಯ್ಯಲು ಶುರು ಮಾಡಿಕೊಂಡರು. ಇವರು ಯಾಕೆ ಹೀಗೆ ಬೈತಿದಾರೆ? ಅವಳೆಂದರೆ ಯಾರು? ಅಂತ ನಂಗೆ ಕನ್ಫ್ಯೂಶನ್ ಶುರುವಾಯ್ತು. ಅಷ್ಟರಲ್ಲಿ ಅಲ್ಲಿಗೆ ಬಂದ ಆ ಹೆಂಗಸರ ಗಂಡಂದಿರು ನನ್ನನ್ನು ಕಾಪಾಡಿದರು. ಆಮೇಲೆ ನಿಧಾನಕ್ಕೆ ಗೊತ್ತಾಯ್ತು, ಆಗಷ್ಟೇ ಮಧ್ಯಾಹ್ನ 3.30ಗೆ 'ಸುಮತಿ' ಧಾರಾವಾಹಿಯ ಎಪಿಸೋಡ್ ಪ್ರಸಾರವಾಗಿತ್ತು. ಆ ಎಪಿಸೋಡ್‌ಲ್ಲಿ ನಾನು ಭಯಂಕರ ವಿಲನ್ ಆಗಿದ್ದೆ!

ಪ್ರಶ್ನೆ: ಪ್ರಮುಖವಾಗಿ ನೀವು ಅಭಿನಯಿಸಿದ ಧಾರಾವಾಹಿಗಳು ಯಾವುವು?

ಗುಪ್ತಗಾಮಿನಿ, ನಂದಗೋಕುಲ, ಬಂಧನ, ಸ್ವಾಭಿಮಾನ, ಸಿಲ್ಲಿಲಲ್ಲಿ, ಪರಮಪದ, ಚಿರಸ್ಮರಣೆ, ನಾಕುತಂತಿ ಸೇರಿದಂತೆ



ಸಂದರ್ಶನ

ಇನ್ನೂ ಒಂದಷ್ಟಿವೆ. ಸಿಲ್ಲಿಲಲ್ಲಿ ನಟನಾಗಿ ನನ್ನ ಕೊನೇ ಧಾರಾವಾಹಿ.

ಪ್ರಶ್ನೆ: ಸಿನಿಮಾ ಎಂಟ್ರಿ ಹೇಗಾಯ್ತು?

ನಿರ್ದೇಶಕ ಎ.ಆರ್.ಬಾಬು ಅವರು 'ಡ್ರೀಮ್ಸ್' ಎಂಬ



ಸಿನಿಮಾದ ನಿರ್ದೇಶಕರನ್ನು ಪರಿಚಯ ಮಾಡಿಕೊಟ್ಟು ಆ ಚಿತ್ರದಲ್ಲಿ ಪಾತ್ರ ಕೊಡಿಸಿದರು. ಆ ಚಿತ್ರದಲ್ಲಿ ಕಾಮಿಡಿ ಟೈಮ್ ಗಣೇಶ್, ರೇಡಿಯೋ ಜಾಕಿ ಅವಿನಾಶ್, ಶಿವಮಣಿಯವರ ತಮ್ಮ ಹರಿ ಎಲ್ಲರೂ ಒಟ್ಟಿಗೆ ಪಾತ್ರ ಮಾಡಿದ್ದೆವು. ಆ ಸಿನಿಮಾದ ಅನುಭವ ಅಷ್ಟಾಗಿ ಚೆನ್ನಾಗಿರಲಿಲ್ಲ. ಬೆಳಗ್ಗೆ ಏಳು ಗಂಟೆಗೆ ಮೇಕಪ್ ಹಾಕಿ, ರಾತ್ರಿ ಹನ್ನೆರಡು ಗಂಟೆಗೆ ಶಾಟ್ ತೆಗೀತಿದ್ರು. ನಮಗಂತೂ ಕಾದೂ ಕಾದೂ ತಲೆ ಕೆಟ್ಟು ಹೋಗ್ತಿತ್ತು. ನಮ್ಮನ್ನು ನಾವೇ ಜೋಕರುಗಳನ್ನಾಗಿ ಮಾಡಿಕೊಂಡು ಟೈಮ್ ಪಾಸ್ ಮಾಡ್ತಿದ್ವಿ. ಪೇಮೆಂಟ್ ಬೇರೆ ಸರಿಯಾಗಿ ಕೊಡ್ತಿರ್ಲಿಲ್ಲ. ಆ ಕಾರಣದಿಂದಾಗಿ ಸಿನಿಮಾದವರ ಸಹವಾಸವೇ ಬೇಡ ಅನ್ನಿಸಿದ್ದೂ ಉಂಟು ಆಗ.

ಪ್ರಶ್ನೆ: ನಿಮಗೆ ನಿರ್ದೇಶನದಲ್ಲೂ ಆಸಕ್ತಿಯುಂಟು ಅಂದ್ರಿ. ಯಾರ್ ಜೊತೇಲಾದ್ರು ಅಸಿಸ್ಟೆಂಟ್ ಡೈರೆಕ್ಟರ್ ಆಗಿ ವರ್ಕ್ ಮಾಡಿದ್ದೀರಾ?

ಬಿ.ಸುರೇಶ್ ಅವರ ನಿರ್ಮಾಣದ ಅಭಯಸಿಂಹ ನಿರ್ದೇಶನದ 'ಗುಬ್ಬಚ್ಚಿಗಳು' ಚಿತ್ರಕ್ಕೆ ಕ್ಲಾಪ್ ಬಾಯ್ ಆಗಿದ್ದೆ. ಬಿ.ಸುರೇಶ ಅವರು ನಿರ್ದೇಶನದ ಸೂಕ್ಷ್ಮಗಳನ್ನು ಹೇಳಿಕೊಟ್ರು. ಆನಂತರ ಸೂರಿಯವರ 'ಜಂಗ್ಲಿ' ಸಿನಿಮಾಗೆ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದೆ. 'ಜಾಕಿ'ಗೂ ಸ್ವಲ್ಪ ಕಾಲ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದೆ. ಆಮೇಲೆ 'ಸ್ವಾಮೀ ವಿವೇಕಾನಂದ' ಅನ್ನುವ ಸಿನಿಮಾಗೆ ಅಸೋಸಿಯೇಟ್ ಡೈರೆಕ್ಟರ್ ಆದೆ. ಕನ್ನಡ, ತಮಿಳು, ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಆ ಚಿತ್ರ ನಿರ್ಮಾಣವಾಗಿತ್ತು. ಆ ಚಿತ್ರದ ಸ್ಕ್ರಿಪ್ಟ್ ವರ್ಕ್‌ನಲ್ಲೂ ತೊಡಗಿಸಿಕೊಂಡಿದ್ದೆ. ವಿವೇಕಾನಂದರು ತಮ್ಮ ಜೀವನದುದ್ದಕ್ಕೂ ಬರೆದಿದ್ದ ಪತ್ರಗಳ ಕುರಿತಾದ ಚಿತ್ರವದು. ಕನ್ನಡದ ಜೊತೆಗೆ ತಮಿಳು, ತೆಲುಗು, ಹಿಂದಿ, ಇಂಗ್ಲಿಷ್ ಭಾಷೆಗಳನ್ನು ತಕ್ಕಮಟ್ಟಿಗೆ ಬರೆಯಬಲ್ಲೆ, ಓದಬಲ್ಲೆ, ಮಾತಾಡಬಲ್ಲೆ, ಆ ಅಲ್ಪಸ್ವಲ್ಪ ಭಾಷಾಜ್ಞಾನ 'ಸ್ವಾಮಿ ವಿವೇಕಾನಂದ' ಸಿನಿಮಾ ಟೈಮಲ್ಲಿ ವರ್ಕ್ ಔಟ್ ಆಯಿತು.

ಪ್ರಶ್ನೆ: ನಿಮ್ಮ ಇಷ್ಟದ ಸಿನಿಮಾಗಳು ಯಾವುವು?

ಬಿಫೋರ್ ಸನ್ಸೆಟ್, ಶಶಾಂಕ್ ರಿಡೆಂಪ್ಷನ್, ಗ್ಲಾಡಿಯೇಟರ್, ಟ್ರಾಯ್ ಸೇರಿದಂತೆ ಅನೇಕ ಚಿತ್ರಗಳು. ಕನ್ನಡದಲ್ಲೂ ನನ್ನಿಷ್ಟದ ಬಹಳಷ್ಟು ಚಿತ್ರಗಳಿವೆ.

ಪ್ರಶ್ನೆ: ನೀವು ಸಾಕಷ್ಟು ಓದ್ತೀರಾ ಅಂತ ಕೇಳಿದ್ದೀನಿ. ಹೆಚ್ಚಾಗಿ ಯಾರ್‍ಯಾರು ಬರೆದಿರೋದನ್ನು ಓದ್ತೀರಿ?

ಪಿ.ಲಂಕೇಶ್, ವಿವೇಕ ಶಾನ್‌ಭಾಗ್, ಯಂಡಮೂರಿ ವೀರೇಂದ್ರನಾಥ್, ಎಸ್.ಎಲ್.ಭೈರಪ್ಪ ವಸುಧೇಂದ್ರ, ಪಾಲೊ ಕೊಹೆಲೋ, ಜೋಗಿ ಇನ್ನೂ ಹಲವರಿದ್ದಾರೆ.

ಪ್ರಶ್ನೆ: ನಿಮ್ಮ ಮುಂದಿನ ಯೋಜನೆಗಳೇನು?

ಸದ್ಯಕ್ಕೆ ಸ್ವಂತ ಸಿನಿಮಾ ನಿರ್ದೇಶನ ಮಾಡಲು ತಯಾರಿ ನಡೆಸಿಕೊಳ್ಳುತ್ತಿದ್ದೇನೆ. ನಿರ್ಮಾಪಕರಿದ್ದಾರೆ. ಹಾಗೇನೇ, ಬಿಡುವಿದ್ದಾಗ ನಾಗತಿಹಳ್ಳಿ ಚಂದ್ರಶೇಖರ್ ಅವರ 'ಟೆಂಟ್ ಸಿನಿಮಾ' ಅನ್ನುವ ಸ್ಕೂಲ್‌ನಲ್ಲಿ 'ಕ್ಯಾಮೆರಾ ಮತ್ತು ಆಕ್ಟಿಂಗ್' ಎಂಬ ವಿಷಯದ ಬಗ್ಗೆ ಪಾಠ ಮಾಡ್ತೀನಿ. ಮುಂದಿನ ವರ್ಷ ಆಸ್ಟ್ರೇಲಿಯನ್ ಟೆಲಿವಿಶನ್‌ಗೋಸ್ಕರ ಒಂದು ಕಿರುಚಿತ್ರವನ್ನು ಬರೆದು, ನಿರ್ದೇಶಿಸಿಕೊಡಲು ಅವಕಾಶ ಬಂದಿದೆ. ಕಳೆದ ವರ್ಷ ಅಮೆರಿಕದ 'ಕನ್ನಡ ಕೂಟ ಆಫ್ ನಾರ್ಥರನ್ ಕ್ಯಾಲಿಫೋರ್ನಿಯ' ಅನ್ನುವ ಸಂಸ್ಥೆ ಅಲ್ಲಿನ ಕನ್ನಡಿಗರಿಗಾಗಿ ಒಂದು ನಾಟಕ ನಿರ್ದೇಶಿಸುವಂತೆ ಕೇಳಿದ್ದಾಗ, ಅಲ್ಲಿಗೆ ಹೋಗಿ 'ಕಿವುಡ ಸಾರ್ ಕಿವುಡ' ಎಂಬ ನಾಟಕವನ್ನು ಮಾಡಿಕೊಟ್ಟಿದ್ದೆ ಅನ್ನುವ ವಿಷಯವನ್ನೂ ಸಂಕೋಚದಿಂದಲೇ ಇಲ್ಲಿ ಹೇಳಲು ಬಯಸುತ್ತೇನೆ.

ಪ್ರಶ್ನೆ: ನಿಮಗೆ ಇಲ್ಲೀತನಕ ಯಾವ್ಯಾವ ಪ್ರಶಸ್ತಿಗಳು ಬಂದಿವೆ?

'ಥೆಸ್ಪೋ ರಾಷ್ಟ್ರಮಟ್ಟದ ನಾಟಕ ಸ್ಪರ್ಧೆ'ಯಲ್ಲಿ ರಂಗಶಂಕರದಲ್ಲಿ ಆಯೋಜಿಸಿದ್ದ 'ಅಪ್ಪಾದಸ' ನಾಟಕದ ಪೋಷಕ ಪಾತ್ರದ ಅಭಿನಯಕ್ಕಾಗಿ ಅತ್ಯುತ್ತಮ ಪೋಷಕ ನಟ ಪ್ರಶಸ್ತಿ ಬಂದಿತ್ತು. 'ಮುಂಬೈ ಕನ್ನಡ ಸಂಘ' ಆಯೋಜಿಸಿದ್ದ ಸ್ಪರ್ಧೆಯಲ್ಲಿ 'ಚಂದ್ರನ ನೆರಳು' ನಾಟಕಕ್ಕಾಗಿ ಉತ್ತಮ ನಟ ಪ್ರಶಸ್ತಿ ಹಾಗೇನೆ ಇಸ್ಕಾನ್ ಅವರ ನೃತ್ಯನಾಟಕ ಸ್ಪರ್ಧೆಯಲ್ಲಿ ಬೆಸ್ಟ್ ಆಕ್ಟರ್ ಅವಾರ್ಡ್ ಬಂದಿತ್ತು. ಇತ್ತೀಚೆಗೆ, 'ದಂಡುಪಾಳ್ಯ'ದಲ್ಲಿ ನಿರ್ವಹಿಸಿದ ಪಾತ್ರಕ್ಕೆ ಉತ್ತಮ ಪೋಷಕನಟ ಅಂತ ಯಾರೋ ಗುರ್ತಿಸಿ ಹಾರ ಹಾಕಿದ್ರು!

ಪ್ರಶ್ನೆ: ಒಬ್ಬ ನಟನಿಗಿರಬೇಕಾದ ಗುಣಗಳೇನು?

ಡೆಡಿಕೇಶನ್, ಹೊರಗಿನ ಜಗತ್ತಿನ ಅಬ್ಸರ್ವೇಶನ್, ಸಾಕಷ್ಟು ಓದುವುದು, ಮುಖ್ಯವಾಗಿ ಉತ್ತಮ ಕೇಳುಗನಾಗಿರೋದು.

ಪ್ರಶ್ನೆ: ನೀವು ಕವಿತೆಗಳನ್ನೂ ಬರೆಯುತ್ತೀರಂತೆ. ಒಂದೆರಡು ಹೇಳ್ತೀರಾ...


ಯಾವಾಗಲೋ ಒಮ್ಮೊಮ್ಮೆ ಬರೆಯುತ್ತೇನೆ. ಆ ಸಾಲುಗಳನ್ನ ನೀವು ಕವಿತೆ ಅನ್ನೋದೇ ನನಗಾಶ್ಚರ್ಯ. ಸುಮ್ನೆ ಇಲ್ಲಿ ಒಂದೆರಡು ಸಾಲುಗಳಿವೆ ನೋಡಿ:

ನಿನ್ನ ಕಂಗಳ ಅಂಗಳದಿ
ಕನಸ ಕದಿಯಲು ಹೋಗಿ
ರೆಪ್ಪೆಗಳ ನಡುವೆ
ಬಂಧಿಯಾಗಿದ್ದೇನೆ ಗುಲಾಬಿ;
ಇಲ್ಲಿ, ಬಂಧನವೇ
ಬಿಡುಗಡೆ ಎನಿಸುತ್ತಿದೆ!!



ಸಂದರ್ಶಕ
ಹೃದಯಶಿವ

...ಯ ಪಕ್ಷಗಳ ಚುನಾವಣಾ ಖರ್ಚಿಗೆ ದೇಣಿಗೆ ...ನ ಕಂಪನಿಗಳ ಒಳಗುಟ್ಟುಗಳನ್ನು ಅರಿಯುವ ...ುದೆ. ಇದೀಗ ಮೋದಿಯ ರಾಜಕೀಯ ಭವಿಷ್ಯದ ...ಅಪಾರ ನಂಬಿಕೆ ಹೊಂದಿರುವ ಕಂಪನಿಗಳು ಅವರ ...ಗಿ ಕೆಲಸ ಮಾಡುತ್ತಿವೆ. ನಾಳೆ ರಾಹುಲ್ ಗಾಂಧಿಯ ...ರಣಕ್ಕೆ ಭವಿಷ್ಯ ಇದೆ ಎಂದು ಅವರಿಗನ್ನಿಸಿದರೆ ... ರಾಹುಲ್‌ಗೂ ಪ್ರಚಾರ-ಹಣ ನೀಡಲು ...ರುತ್ತಾರೆ.



... ಇತ್ತು ಮಾಜಿ ನಟಿ ಆರತಿಯವರ ಬಗ್ಗೆ ಬರೆದಿದ್ದು ...ಷ ತಂದಿತು. ಜಾತ್ರೆಯಲ್ಲಿ ಪುಳಿಯೊಗರೆ ಹಂಚಿದ್ದನ್ನೂ ...ಗಳಲ್ಲಿ ಪ್ರಚಾರ ಮಾಡಿಸಿಕೊಳ್ಳುವವರ ಮಧ್ಯೆ ಆರತಿ ...ರ ಪತಿ ಚಂದ್ರಶೇಖರ್ ದೇಸಾಯಿ ಗೌಡರ್ ಅವರ ...ಜಿಕ ಸೇವೆ ಮನಸ್ಸಿಗೆ ಮುದ ನೀಡಿತು. ಆರತಿ ಅವರು ವಿಧಾನ ಪರಿಷತ್ ಸದಸ್ಯೆಯಾಗಿದ್ದಾಗ ಅವರನ್ನು ಒಂದೆರಡು ಬಾರಿ ಭೇಟಿಯಾಗಿದ್ದೆ. ಕನ್ನಡ ಚಿತ್ರರಂಗ ಮತ್ತು ಮಾಧ್ಯಮಗಳು ಅವರಿಗೆ ನೆಗೆಟಿವ್ ಪ್ರಚಾರ ನೀಡಿದ್ದೇ ಹೆಚ್ಚು.

ಆದರೆ ಗೌರಿ ಅವರು ಆರತಿ ಅವರ ಬಗ್ಗೆ ಬರೆದು ಕನ್ನಡಿಗರಿಗೆ ಸತ್ಯ ತಿಳಿಸಿದ್ದಾರೆ, ಗೌರಿಗೆ ಥ್ಯಾಂಕ್ಸ್!

ಕೊನೆಗೊಂದು ಮಾತು: ಕೋಮುಸಾಮರಸ್ಯದ ಬಗ್ಗೆ ನಿಮ್ಮ ನಿಲುವುಗಳು ಅಭಿನಂದನೀಯ. ಕನ್ನಡಿಗರು ಕೋಮುವಾದಿಗಳಾಗದಂತೆ ನೋಡಿಕೊಳ್ಳುವ ಗುರುತರ ಹೊಣೆಗಾರಿಕೆ ನಮ್ಮ-ನಿಮ್ಮಂತಹ ಬರಹಗಾರರಿಗೆ ಇದ್ದು ಅದನ್ನು ನಿಭಾಯಿಸೋಣ- ಈ ದಿಸೆಯಲ್ಲಿ ನಮ್ಮಂತವರು ನಿಮ್ಮ ಜೊತೆಗಿರುತ್ತೇವೆ: ಸದಾ-ಸದಾ!

- ಕು.ಸ.ಮಧುಸೂದನ್, ರಂಗೇನಹಳ್ಳಿ

'ಬ್ರಾಹ್ಮಣ್ಯ ಅಂದು-ಇಂದು' ಎಂಬ ಸಂಚಿಕೆ ಸೂಪರ್ ಆಗಿತ್ತು. ಅವಿವೇಕಿಗಳಿಗೆ ಯಾವಾಗ ಬುದ್ಧಿ ಬರುತ್ತೋ! ಪಾರ್ವತೀಶರ 'ಬ್ರಾಹ್ಮಣ್ಯ'ದ ಪತ್ರವು ಈ ಅವಿವೇಕಿ ಶೂದ್ರ ಸಮುದಾಯಕ್ಕೆ ಹೊಡೆದಂತಿದೆ.

- ಕುಂಸಿ ಉಮೇಶ್, ಶಿವಮೊಗ್ಗ

ಬ್ರಾಹ್ಮಣ್ಯ ಅಂದು-ಇಂದು ವಿಶೇಷಾಂಕವು ವಿಚಾರ ಪ್ರಚೋದಿಸುವ ಲೇಖನಗಳ ಉತ್ತಮ ಸಂಚಿಕೆಯಾಗಿ ಬಂದಿದೆ. ಧನ್ಯವಾದಗಳು.

- ವಿಕಾಸ್ ಮೌರ್ಯ, ಬಳ್ಳಾರಿ



ಪಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.KA/RNP/BGS/2036/2011-13 Posted at : GPO, Bangalore-01, Friday P B P LANKESH, Kannada Weekly Price Rs. 14/- 23-10-2013 RNI No. KARKAN2005/1464

ಶೈಲೇಂದ್ರ ಬಾಬು, ಉಮೇಶ್ ಬಣಕಾರ್

ಬೂಟಿನಿಂದ ಒದ್ದರು



ಶೈಲೇಂದ್ರಬಾಬು, ಉಮೇಶ ಬಣಕಾರ್, ಗಣೇಶ್ ಮತ್ತು ಇತರೆ ನಿರ್ಮಾಪಕರು ಸೇರಿಕೊಂಡು ಮೊನ್ನೆ ಮುಂಬೈ ಹುಡುಗನೊಬ್ಬನಿಗೆ ಗಾಂಧಿನಗರದಲ್ಲಿ ಬೂಟು ಕಾಲಿನಿಂದ ಒದ್ದು ಮೂಗುಬಾಯಿಗಳಲ್ಲಿ ರಕ್ತ ಬರುವಂತೆ ಹಿಗ್ಗಾಮುಗ್ಗಾ ಥಳಿಸಿದ್ದಾರೆ.

ಇದೆಲ್ಲಾ ಹೇಗೆ ನಡೆಯಿತೆಂದರೆ, ತಮ್ಮ ಮಗನನ್ನು ಮತ್ತೊಮ್ಮೆ ಹೀರೋ ಮಾಡುವ ಉದ್ದೇಶದಿಂದ ಶೈಲೇಂದ್ರಬಾಬು ಅವರು ಕಾಸು ಸುರಿದು ನಿರ್ಮಾಣ ಮಾಡಿದ್ದ 'ದಿಲ್ವಾಲ' ಚಿತ್ರದ ಹಾರ್ಡ್ ಡಿಸ್ಕ್ ಕೊಡುವ ಸಲುವಾಗಿ ಯೂಎಫ್ಓ ಹಾಗೂ ಕ್ಯೂಬ್‌ಗೆ ಸಂಬಂಧಿಸಿದ ಹುಡುಗನೊಬ್ಬ ಮುಂಬೈಯಿಂದ ಶೈಲೇಂದ್ರಬಾಬು ಅವರ ಆಫೀಸಿಗೆ ಬಂದಿದ್ದಾನೆ. ಮುಂಬೈ ಹುಡುಗನಿಗೆ ಕನ್ನಡ ಸುತರಾಂ ಬರಲ್ಲ, ಅದೇರೀತಿ ಬಾಬು ಅವರ ಆಫೀಸಿನಲ್ಲಿ ಕೆಲಸ ಮಾಡುವ ಹುಡುಗನಿಗೆ ಹಿಂದಿ ಪೂರ್ತಿ ಅರ್ಥ ಆಗಲ್ಲ, ಹಾರ್ಡ್ ಡಿಸ್ಕ್ ಕೊಡಲು ಬಂದ ಮುಂಬೈ ಹುಡುಗ ಮಾತಿನ ಮಧ್ಯೆ ಯಾವುದೋ ವಿಷಯಕ್ಕೆ ಸಂಬಂಧಿಸಿದಂತೆ "ಹಜಾರ್ ರುಪಿಯಾ" ಅಂದುಬಿಟ್ಟಿದ್ದಾನೆ. ಅದು ಆತನ ಬಸ್ ಚಾರ್ಜಿನ ವಿಷಯವಾಗಿರಬಹುದು ಅಥವಾ ಇಲ್ಲಿ ಉಳಿದುಕೊಳ್ಳಲು ರೂಮು, ಊಟದ ಖರ್ಚಿನ ವಿಷಯವಿರಬಹುದು. ಬೇರೆ ಇನ್ನೇನೋ ಇರಬಹುದು.



ಆತ ಯಾವ ಕಾರಣಕ್ಕಾಗಿ ಹಜಾರ್ ರುಪಿಯಾ ಅಂದನೆಂದು ಸರಿಯಾಗಿ ಅರ್ಥಮಾಡಿಕೊಳ್ಳದ 'ದಿಲ್ವಾಲ' ಆಫೀಸಿನ ಹುಡುಗ "ಸಾವಿರ ರೂಪಾಯಿ ಕೊಟ್ಟರೆ 'ದಿಲ್ವಾಲಾ' ಸಿನಿಮಾದ ಸಿಡಿ ಮಾಡಿಕೊಡುತ್ತೇನೆ" ಅಂತಿದ್ದಾನೆ ಅಂತ ತಪ್ಪಾಗಿ ಅರ್ಥಮಾಡಿಕೊಂಡಿದ್ದಾನೆ. ತಕ್ಷಣ ಶೈಲೇಂದ್ರಬಾಬು ಅವರಿಗೆ ಫೋನ್ ಮಾಡಿ ತಾನು ಅರ್ಥಮಾಡಿಕೊಂಡಿದ್ದನ್ನು ಅವರಿಗೂ ಅರ್ಥಮಾಡಿಸಿದ್ದಾನೆ. ಸಿಟ್ಟುಗೊಂಡ ಶೈಲೇಂದ್ರಬಾಬು "ತದೀ ಬರ್ತೀನಿ" ಅಂತ ಮನಸಿನಲ್ಲೇ ಹೇಳಿಕೊಂಡು ಉಮೇಶ್ ಬಣಕಾರ್, ಗಣೇಶ್ ಮತ್ತಿತರರನ್ನು ಜೊತೆಗೆ ಹಾಕಿಕೊಂಡು ಸೀದಾ ತಮ್ಮ 'ದಿಲ್ವಾಲ' ಆಫೀಸಿಗೆ ಬಂದಿದ್ದಾರೆ. ಬಂದವರೇ ಮುಖ, ಮೂತಿ ನೋಡದೆ ಮುಂಬೈ ಹುಡುಗನಿಗೆ ಗೂಸಾ ಕೊಟ್ಟಿದ್ದಾರೆ. ಸಾಮೂಹಿಕ ದಾಳಿ ನಡೆಸಿ ಭಯಂಕರ ಬೆಂಡೆತ್ತಿದ್ದಾರೆ. ಹುಡುಗ ಕಿರ್ರೋ ಮರ್ರೋ ಅಂತ ಕಿರುಚಿಕೊಂಡು ಗೋಳಾಡಿದ್ದಾನೆ.

ಇಷ್ಟಕ್ಕೂ ಇಲ್ಲಿ ಹುಟ್ಟಿಕೊಳ್ಳುವ ಪ್ರಶ್ನೆಗಳೆಂದರೆ, ಮುಂಬೈ ಹುಡುಗನಿಗೆ 'ದಿಲ್ವಾಲ' ಸಿನಿಮಾದ ಸಿಡಿಗಳನ್ನು ಪೈರಸಿ ಮಾಡುವ ಉದ್ದೇಶವಾದರೂ ಯಾಕಿತ್ತು? ಆತ ನಿಜಕ್ಕೂ ಪೈರಸಿ ಮಾಡುವವನೇ ಆಗಿದ್ದರೆ ಮುಂಬೈಯಲ್ಲೇ ಯಾವುದಾದರೂ ಮಾರ್ಕೆಟ್ ಇರುವ ಹೀರೋವಿನ ಹಿಂದಿ ಸಿನಿಮಾದ ಸಿಡಿಗಳನ್ನು ಪೈರಸಿ ಮಾಡುತ್ತಿದ್ದ. ಒಂದು ವೇಳೆ 'ದಿಲ್ವಾಲ' ಸಿನಿಮಾದ ಸಿಡಿಗಳನ್ನೇ ಪೈರಸಿ ಮಾಡಬೇಕೆಂದು ಬಯಸಿದ್ದರೆ ಖುದ್ದು 'ದಿಲ್ವಾಲಾ' ಆಫೀಸಿಗೇ ಬಂದು "ಸಾವಿರ ಕೊಡಿ ಸಿಡಿ ಮಾಡಿಕೊಡುತ್ತೇನೆ" ಅಂತಿದ್ದಾ?

ಆತನನ್ನು ಥಳಿಸುವ ಮುನ್ನ ಶೈಲೇಂದ್ರಬಾಬು ನಿಜಕ್ಕೂ ಆತ 'ಹಜಾರ್ ರುಪಿಯಾ' ಅಂದಿದ್ದರ ಹಿಂದಿರುವ ರಹಸ್ಯವಾದರೂ ಏನು ಅನ್ನೋದನ್ನ ಮುಂಬೈ ಹುಡುಗನಲ್ಲೇ ವಿಚಾರಿಸಬೇಕಿತ್ತು, ಆಫೀಸಿನಲ್ಲಿ ಕೆಲಸ ಮಾಡುವ ಯಾರೋ ತಪ್ಪಾಗಿ ಅರ್ಥಮಾಡಿಕೊಂಡು ತಮಗೆ ಹೇಳಿದ ಅನ್ನುವ ಒಂದೇ ಕಾರಣಕ್ಕೆ ಹೀಗೆ ಆ ಹುಡುಗನಿಗೆ ಹೊಡೆಯಬಾರದಿತ್ತು. ಇಷ್ಟೊಂದು ಮುಂಗೋಪ, ಅವಸರದ ನಿರ್ಧಾರ ಗಾಂಧಿನಗರಕ್ಕೆ ಶೋಭೆ ತರದೆಂಬ ಅಂಶ ಶೈಲೇಂದ್ರಬಾಬು, ಉಮೇಶ್ ಬಣಕಾರ್, ಗಣೇಶ್ ತರಹದವರಿಗೆ ಗೊತ್ತಿರಲಿ. ಆ ಹುಡುಗ ಆದಷ್ಟು ಬೇಗ ಗುಣಮುಖನಾಗಲಿ.

ಲೂಸ್ ಮಾದ ಟ್ರೈಟ್ ಮಾಡ



ತಮ್ಮ ಮಗ ಯೋಗಿ ಹೀರೋ ಆಗಿ ಮಿಂಚಿದ ಹಾಗೆಯೇ ಮತ್ತೊಬ್ಬ ಕುವರ ಮಹೇಶ್ ಕೂಡ ಹೀರೋ ಆಗಿ ಮಿಂಚಲಿ ಅಂತ ಆಸೆಪಟ್ಟ ನಿರ್ಮಾಪಕ ಸಿದ್ಧರಾಜು ಕೆಲವು ತಿಂಗಳುಗಳ ಹಿಂದೆ 'ಭಾಗ್ಯರಾಜ್' ಎಂಬ ಒಂದು ಸಿನಿಮಾ ಆರಂಭಿಸಿದ್ದರು. ಅದೀಗ ಅರ್ಧಕ್ಕೇ ನಿಂತುಹೋಗಿದೆ. ಕಾರಣಗಳ ಬೇರಿಗೆ ದುರ್ಬೀನು ಹಿಡಿದಾಗ, ಈ ಚಿತ್ರದ ನಿರ್ದೇಶಕ ದೀಪಕ್ ಮಧುವನಹಳ್ಳಿ ಎಂಬ ವ್ಯಕ್ತಿಗೆ ಸರಿಯಾಗಿ ಕೆಲಸ ಗೊತ್ತಿಲ್ಲ ಅನ್ನೋದು ಮೊದಲು ಕೇಳಿಬರುತ್ತಿದೆ.

ಈ ನಡುವೆ ಒಂದಿಷ್ಟು ಮಾರ್ಪಾಟುಗಳನ್ನು ಮಾಡಿ ಚಿತ್ರವನ್ನು ಮತ್ತೆ ಆರಂಭಿಸುವ ಯೋಜನೆಯೂ ಇದೆಯಂತೆ. ಆ ಮಾರ್ಪಾಟುಗಳಲ್ಲಿ ಮುಖ್ಯವಾದುದು ಚಿತ್ರದಲ್ಲಿ ಯೋಗಿಗೊಂದು ಹಾಡು ಹಾಕೋದು. ಅದರ ಜೊತೆಗೆ ಇನ್ನೊಂದಿಷ್ಟು ಸೀನುಗಳನ್ನು ಸೇರಿಸೋದು. ಇದಕ್ಕೆಲ್ಲ ಕಾರಣ ಯೋಗಿ ಇದ್ದರೆ ಮಾರುಕಟ್ಟೆಯಲ್ಲಿ ಚಿತ್ರಕ್ಕೆ ಪುಷ್ಟಿ ಸಿಗುತ್ತದೆಂಬುದು 'ಭಾಗ್ಯರಾಜ್' ತಂಡದ ನಂಬಿಕೆ.

ಅಂದಹಾಗೆ ಈ ದೀಪಕ್ ಮಧುವನಹಳ್ಳಿ ಉಪೇಂದ್ರರ 'ಸೂಪರ್' ಚಿತ್ರದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದರು. ಅದಕ್ಕೂ ಮೊದಲು ಎ.ಎಂ.ಆರ್.ರಮೇಶ್ ಅವರ ಬಳಿಯೂ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೆಲಸ ಮಾಡಿದ್ದರು. ಆಗಾಗ ತನ್ನ ಬಗ್ಗೆ ತಾನೇ ಬಿಲ್ಡಪ್ಪು ಕೊಟ್ಟುಕೊಳ್ಳುವ ಪ್ರವೃತ್ತಿಯನ್ನು ಹೊರತುಪಡಿಸಿದರೆ ನಿರ್ದೇಶನದ ಪ್ರಾಥಮಿಕ ಜ್ಞಾನ ಇರುವಂಥ ವ್ಯಕ್ತಿಯೇ ಅನ್ನಬಹುದು.

ನಿಜಕ್ಕೂ ದೀಪಕ್‌ಗೆ ಕೆಲಸ ಗೊತ್ತಿಲ್ಲ ಎನ್ನುವುದು ಕಾರಣವಾಗಿದ್ದರೆ 'ಭಾಗ್ಯರಾಜ್' ಸಿನಿಮಾಕ್ಕೆ ಹೊಸ ನಿರ್ದೇಶಕರನ್ನು ಹುಡುಕುತ್ತಿದ್ದರು. ಆದರೆ ಹಾಗಾಗದೆ ದೀಪಕ್ ಅವರೇ 'ಭಾಗ್ಯರಾಜ್' ಚಿತ್ರದ ನಿರ್ದೇಶಕರಾಗಿ ಮುಂದುವರೆಯುತ್ತಿದ್ದಾರೆ.

ಈ ಕಾರಣಕ್ಕೇ ಮೊದಲೇ ಹೇಳಿದ್ದು ಲೂಸ್ ಮಾದ ಈ ಚಿತ್ರವನ್ನು ಟ್ರೈಟ್ ಮಾಡಿದ ಎಂದು. ಸರಿಯಲ್ಲವೇ?

'ಮಾಣಿಕ್ಯ' ಸೆಟ್ಟಲ್ಲಿ ಕ್ಯಾರವಾನ್ ಕಿರಿಕ್

"ನನಗದೆಲ್ಲ ಗೊತ್ತಿಲ್ಲ. ನಾಳೆ ಬೆಳಗ್ಗೆ ನನಗೇಂತ ಸೆಪರೇಟ್ ಕ್ಯಾರವಾನ್ ಇರಬೇಕು. ಇಲ್ಲಾಂದ್ರೆ ನಾನ್ ಸುಮ್ಮಿರ



ಅಂತ ರವಿಚಂದ್ರನ್ ಗುಟುರಿದ್ದೇ ತಡ ಮಾರನೆ ದಿನ ಕ್ಯಾರವಾನ್ ರೆಡಿ ಇ ಇದು ನಡೆದದ್ದು ಹೈದರಾಬಾದಿನಲ್ಲಿ. ಸುದೀಪ್ ನಿರ್ದೇಶನದ 'ಮಾಣಿ ಚಿತ್ರದ ಚಿತ್ರೀಕರಣದ ಸಂದರ್ಭದಲ್ಲಿ. ರವಿಚಂದ್ರನ್ ಅವರಿಗೆ ತಮಗೆ ಸ ಕ್ಯಾರವಾನ್ ಒದಗಿಸಿಕೊಟ್ಟಿರಲಿಲ್ಲವೆಂಬ ಬೇಜಾರಿತ್ತಂತೆ. ಹೇಗೋ ಒಂದೆರ ದಿನ ಅಡ್ಜಸ್ಟ್ ಮಾಡಿಕೊಂಡರಂತೆ. ಕಡೆಗೂ ಸಾಧ್ಯವಾಗದಿದ್ದಾಗ ಈ ಮೇ ಡೈಲಾಗ್ ಹೊಡೆದರಂತೆ. ಅಂದಹಾಗೆ ತೆಲುಗಿನಲ್ಲಿ ಪ್ರಭಾಸ್ ನಟಿ 'ಮಿರ್ಚಿ' ಚಿತ್ರದ ಕನ್ನಡ ಅವತರಣಿಕೆಯನ್ನು ಸ್ವತಃ ಸುದೀಪ್ ಹೀರೋ ಹಾಗೂ ನಿರ್ದೇಶಕರಾಗಿ ನಿರ್ವಹಿಸುತ್ತಿದ್ದಾರೆ. ಸುದೀಪ್ ಜೊತೆ ರವಿಚಂದ್ರ ಅವರು ಮತ್ತೊಂದು ನಾಯಕನ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ರವಿಚಂದ್ರ ಅವರಿಗೆ ಜೋಡಿಯಾಗಿ ರಮ್ಯಾಕೃಷ್ಣ ಇದ್ದಾರೆ. ರವಿಚಂದ್ರನ್ ಹಾಗೂ ಸುದೀಪ್ ಒಟ್ಟಿಗೇ ಅಭಿನಯಿಸುತ್ತಿರುವ ಚಿತ್ರಕ್ಕೆ ಮಲ್ಲ-ನಲ್ಲ ಎಂದು ಹೆಸರಿಡಬೇಕೆಂದು ಮೊದಲು ಯೋಚಿಸಿದ್ದರೂ ಕಥೆಗೆ ಹೊಂದುವುದಿಲ್ಲವೆಂದು ತೀರ್ಮಾ 'ಮಾಣಿಕ್ಯ' ಅಂತ ಇಡಲಾಗಿದೆ. ಎನ್.ಕುಮಾರ್ ಚಿತ್ರದ ನಿರ್ಮಾಪಕ.

ಡುಂಡಿ ವಿವಾದ



"ರಾಮ ರಾಮ ಓ ಶ್ರೀರಾಮ
ಫಸ್ಟ್ ನೈಟಿನಲ್ಲೇ ಆಯ್ತಾ ಟ್ರಾಫಿಕ್ ಜಾಮಾ"

ಇಂತಹ ಸಾಲುಗಳನ್ನು ಯಾರಾದರು ಸಿನಿಕವಿ ಬರೆದಿದ್ದರೆ ಹೋಗಲಿಬಿಡಿ ಅನ್ನಬಹುದಿತ್ತು, ಆದರೆ ಇದನ್ನು ಬರೆದವರು ಎಚ್.ಡುಂಡಿರಾಜ್ ಎಂಬ 'ಗಂಭೀರ' ಕವಿ. ಡುಂಡಿರಾಜ್ ಅವರು 'ನಿಂಬೆಹುಳಿ' ಎಂಬ ಚಿತ್ರಕ್ಕಾಗಿ ಈ ಸಾಲುಗಳನ್ನು ಬರೆದಿದ್ದಾರೆ. ಹಾಗಂತ ಇಂತಹ ಸಾಲುಗಳನ್ನು ಬರೆಯಲೇ ಬಾರದು ಅಂತೇನಿಲ್ಲ, ಮೊದಲಿನಿಂದಲೂ ಇದಕ್ಕಿಂತಲೂ ತೀರಾ ಕಳಪೆ ಅಭಿರುಚಿಯ ಸಾಲುಗಳು ಬಂದಿವೆ. ವಿಶೇಷವೆಂದರೆ ಅಂತಹ ಸಾಲುಗಳನ್ನು ಬರೆದವರು ಚಿತ್ರಸಾಹಿತಿಗಳೇ ಹೊರತು ಗಂಭೀರ ಕವಿಗಳಲ್ಲ.

ಡುಂಡಿರಾಜ್ ಅವರ ಈ ಸಾಲುಗಳನ್ನು ಕೇಳಿ ಮಂಗಳೂರಿನ ಶ್ರೀರಾಮಸೇನೆಯ ಕೆಲವು ಹುಡುಗರು "ಈ ಡುಂಡಿರಾಜ್‌ಗೆ ಮಂಡೆ ಇಲ್ಲವಾ? ಯಾಕೆ ಹೀಗೆ ಬರೆದು ನಮ್ಮ ರಾಮನಿಗೆ ಅವಮಾನ ಮಾಡಿದ್ದು ಮಾರಾಯ್ರೇ? ಬೇಕಿದ್ದರೆ ಅವರ ಮನೆಯವರ ಹೆಸರು ಬರೆದುಕೊಳ್ಳಲಿ... ನಮ್ಮ ರಾಮನ ಬಗ್ಗೆ ಯಾಕೆ ಹೀಗೆ ಬರೆದದ್ದು, ಛೀ!" ಅಂತ ಅವರಿಗವರೇ ಹೇಳಿಕೊಳ್ಳುತ್ತಿದ್ದಾರಂತೆ.

ಅದೇನೇ ಇರಲಿ, ಸಿನಿಸಾಹಿತಿಗಳು ಸಾಹಿತ್ಯದ ಗುಣಮಟ್ಟವನ್ನು ಹಾಳುಮಾಡುತಿದ್ದಾರೆ ಎಂಬ ಆರೋಪ ಗಂಭೀರ ಕವಿಗಳ ಪಟಾಲಮ್ಮಿನಿಂದ ಆಗಾಗ ಕೇಳಿಬರುತ್ತಿರುತ್ತದೆ. ಹಿರಿಯ ತಲೆ ಹಂಸಲೇಖಾರಿಂದ ಹಿಡಿದು ನೆನ್ನೆ ಮೊನ್ನೆ ಚಿತ್ರರಂಗವನ್ನು ಪ್ರವೇಶಿಸಿದ ಯುವ ಚಿತ್ರಸಾಹಿತಿಗಳ ತನಕ ಈ ಅಪಸ್ವರ ಆವರಿಸುತ್ತದೆ. ಹಾಗೆ ನೋಡಿದರೆ ಗಂಭೀರ ಕವಿಗಳೆನಿಸಿಕೊಂಡವರು ಡುಂಡಿರಾಜರ ಈ ಮೇಲಿನ ಸಾಲುಗಳಂತೆ ಅನ ಸಾಲುಗಳನ್ನು ಬರೆದಿರುವುದುಂಟು. ಉದಾ: ಬಿ.ಆರ್. ...ಣರಾಯರ 'ಜಾಲಿಬಾರಿನಲ್ಲಿ ಕೂತು ಪೋಲಿ ಗೆಳೆಯ ಅನ್ನುವ ಹಾಡು ರೆಗ್ಯುಲರ್ ಚಿತ್ರಸಾಹಿತಿಗಳು ಬರೆಯ ಯಾವುದೇ ಐಟಂ ಸಾಂಗಿಗೂ ಕಮ್ಮಿಯಿಲ್ಲವೆಂಬುದ ನಾವು ಗಮನಿಸಬೇಕು. ಆ ಹಾಡನ್ನು ಸಿ.ಅಶ್ವತ್ ತರಹದ ರಾಗ ಹಾಕಿ ಹಾಡಿದಾಗ ಭಾವಗೀತೆ ಎನಿಸಿಕೊಳ್ಳುತ್ತ ಇದೊಂದು ಉದಾಹರಣೆಯಷ್ಟೇ. ಸುಖಾಸುಮ ಚಿತ್ರಸಾಹಿತಿಗಳ ಸಾಲುಗಳ ಬಗ್ಗೆ ಹಗುರವಾಗಿ ಮಾತಾಡ ಗಂಭೀರ ಕವಿಗಳು ಡುಂಡಿರಾಜರ ಈ ಮೇ ಸಾಲುಗಳಿರುವ ಹಾಡನ್ನೊಮ್ಮೆ ಖುಷಿಗೆ ಕೇಳಲಿ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com